ಸೋಮವಾರ, ಫೆಬ್ರುವರಿ 26, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 57 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿಶ್ವವಿದ್ಯಾಲಯಗಳಲ್ಲಿ ಮಾರ್ಕೆಟಿಂಗ್ ಕಲಿಕೆಯ ತಂತ್ರ ಹೇಗಿರಬೇಕು?

ಆಳ-ಅಗಲ
ಸಾಲದ ಹೊರೆ ಹೆಚ್ಚಳ ನಿರಂತರ

ಕಾಗದ ಆಮದು ಶೇ37ರಷ್ಟು ಹೆಚ್ಚಳ 10

ಪ್ರಧಾನಿ ಸ್ಕೂಬಾ ಡೈವಿಂಗ್ ಸಾಹಸ 11

ಭಾರತ ಜೋಡೊ ನ್ಯಾಯ ಯಾತ್ರೆಯಲ್ಲಿ ರಾಹುಲ್ ಗಾಂಧಿ ಹೇಳಿಕೆ
‘ಚೀನಿ ಸರಕಿನಿಂದ ದೇಶೀ ಕುಶಲಿಗರಿಗೆ ಕಷ್ಟ’ 6

ಮದುವೆ ಹಾಗೂ ಶುಭ ಸಮಾರಂಭಗಳಿಗೆ ರಾಜ್ಯದಲ್ಲಿಯೇ ಪ್ರಸಿದ್ಧವಾದ ಬಟ್ಟೆ ಅಂಗಡಿ #ಬಟ್ಟೆಅಂದರೆBSC

ಬಿ.ಎಸ್.ಚನ್ನಬಸಪ್ಪ & ಸನ್ಸ್
ದಾವಣಗೆರೆ & ಬೆಳಗಾವಿ
BSC
B.S. CHANNABASAPPA & SONS
Since - 1938

ಸಂಧಿಲಿನ್
ಸಂಧಿಲಿನ್ ಹಚ್ಚಿ ನೋವಿಗೆ ವಿದಾಯ ಹೇಳಿ!
ಶೀಘ್ರ ಪರಿಣಾಮಕಾರಿ
ತಯಾರಕರು
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
SDM
ISO / GMP CERTIFIED
ಕುತ್ಪಾಡಿ, ಉಡುಪಿ, ಕರ್ನಾಟಕ. M: 8970977513

ಕುಗ್ಗಿತೇ ಸಂಸದೆ ಸುಮಲತಾ ಜನಪ್ರಿಯತೆ? 4

‘ಮೋದಿಗೆ ಬಡವರ ರಕ್ತ ಹೀರುವುದು ಗೊತ್ತು’ 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ಅಂದಾಜು ₹ 8,005 ಕೋಟಿ ವೆಚ್ಚದ ‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆ

ಟೆಂಡರ್ ತರಾತುರಿಗೆ ತಕರಾರು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ₹8,005 ಕೋಟಿ ವೆಚ್ಚದ ‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆಗೆ ಕರ್ನಾಟಕ ವಿದ್ಯುತ್ ನಿಗಮವು (ಕೆಪಿಸಿ) ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆ, ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಒಪ್ಪಿಗೆ ದೊರಕುವ ಮುನ್ನವೇ ತರಾತುರಿಯಲ್ಲಿ ಟೆಂಡರ್ ಪ್ರಕ್ರಿಯೆ ನಡೆಸುತ್ತಿರುವುದು ತಕರಾರಿಗೆ ಕಾರಣವಾಗಿದೆ.

ವಿದ್ಯುತ್ ಉತ್ಪಾದನೆಗೆ ಬಳಸಲಾದ ನೀರನ್ನು ಮತ್ತೆ ಮತ್ತೆ ಪಂಪ್‌ಗಳ ಮೂಲಕ ಹಿಂದಕ್ಕೆ ಕೊಂಡೊಯ್ದು, ತಲಾ 250 ಮೆಗಾವಾಟ್ ಸಾಮರ್ಥ್ಯದ ಎಂಟು ಜಲ ವಿದ್ಯುತ್ ಉತ್ಪಾದನಾ ಘಟಕಗಳಲ್ಲಿ ಬಳಸುವ ಯೋಜನೆ ಇದು. ಒಟ್ಟು 2,000 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಯೋಜನೆ ರೂಪಿಸಲಾಗಿದೆ. ದೇಶದ ಅತಿದೊಡ್ಡ ‘ಪಂಪ್ಡ್ ಸ್ಟೋರೇಜ್’ ವಿದ್ಯುತ್ ಉತ್ಪಾದನಾ ಘಟಕವಾಗಲಿರುವ ಈ ಯೋಜನೆಗೆ ಕೇವಲ 21 ದಿನಗಳ ಅಲ್ಪಾವಧಿಯ ಟೆಂಡರ್ ಪ್ರಕ್ರಿಯೆ ನಡೆಸಲಾಗಿದೆ.

ಇದು ಬೃಹತ್ ಪ್ರಮಾಣದ ಸಿವಿಲ್ ಮತ್ತು ಎಲೆಕ್ಟ್ರಿಕಲ್ ಕಾಮಗಾರಿಗಳನ್ನು ಒಳಗೊಂಡಿರುವ ಯೋಜನೆ. ಇದೇ ಮಾದರಿಯ ಯೋಜನೆಗಳ ಟೆಂಡರ್ ಪ್ರಕ್ರಿಯೆಗಳಿಗೆ ದೇಶದ ಬೇರೆ ರಾಜ್ಯಗಳಲ್ಲಿ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು 100ರಿಂದ 200 ದಿನಗಳಿಗೂ ಹೆಚ್ಚು ಕಾಲಾವಕಾಶ ನೀಡಿದ ಉದಾಹರಣೆಗಳಿವೆ. ₹2 ಕೋಟಿಗಿಂತ ಹೆಚ್ಚು ವೆಚ್ಚದ ಕಾಮಗಾರಿಗಳಿಗೆ ಟೆಂಡರ್ ಪ್ರಕ್ರಿಯೆಗಳಲ್ಲಿ ಬಿಡ್ ಸಲ್ಲಿಕೆಗೆ ಕನಿಷ್ಠ 30 ದಿನ ಕಾಲಾವಕಾಶ ನೀಡಬೇಕು ಎಂಬುದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ನಿಯಮಗಳ ಸೆಕ್ಷನ್ 17ರಲ್ಲಿದೆ.

ಸಿದ್ದರಾಮಯ್ಯ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಇಂಧನ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ₹4,862.89 ಕೋಟಿ ವೆಚ್ಚದ ‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆಯ ಪ್ರಸ್ತಾವವನ್ನು ಸಿದ್ಧಪಡಿಸಲಾಗಿತ್ತು. 2019ರ ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ನೇತೃತ್ವದಲ್ಲಿ ನಡೆದ ರಾಜ್ಯ ವನ್ಯಜೀವಿ ಮಂಡಳಿ ಸಭೆಯಲ್ಲಿ ಈ ಯೋಜನೆಯ ವಿಸ್ತೃತ ಯೋಜನಾ ವರದಿಗೆ (ಡಿಪಿಆರ್) ಒಪ್ಪಿಗೆ ನೀಡಲಾಗಿತ್ತು.

ನಾಲ್ಕೂವರೆ ವರ್ಷ ನನೆಗುದಿಗೆ ಬಿದ್ದಿದ್ದ ಯೋಜನೆ, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಪುನಃ ಚುರುಕು ಪಡೆದಿದೆ. ಮೂಲ ಡಿಪಿಆರ್‌ಗೆ ಹೋಲಿಸಿದರೆ, ಈಗ ಈ ಕಾಮಗಾರಿಯ ಯೋಜನಾ ವೆಚ್ಚ ದುಪ್ಪಟ್ಟಿಗೆ ಹತ್ತಿರವಾಗುವಂತೆ ಆಗಿದೆ.

ಪಶ್ಚಿಮ ಘಟ್ಟ ಮತ್ತು ಶರಾವತಿ ವನ್ಯಜೀವಿಧಾಮದ ವ್ಯಾಪ್ತಿಯಲ್ಲಿ ಈ ಯೋಜನೆ ಅನುಷ್ಠಾನಕ್ಕೆ ಬರಲಿದೆ.

4ನೇ ಪುಟ ನೋಡಿ

ಯೋಜನೆಯಲ್ಲಿ ಏನಿದೆ?



‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆಯು ಲಿಂಗನಮಕ್ಕಿ ಜಲಾಶಯದ ಕೆಳಭಾಗದಲ್ಲಿರುವ ಶಿವಮೊಗ್ಗ ಜಿಲ್ಲೆಯ ತಲಕಳಲೆ ಮತ್ತು ಉತ್ತರ ಕನ್ನಡ ಜಿಲ್ಲೆಯ ಗೇರುಸೊಪ್ಪ ಜಲಾಶಯಗಳ ಮಧ್ಯ ಭಾಗದಲ್ಲಿ ಅನುಷ್ಠಾನಕ್ಕೆ ತರುವ ಪ್ರಸ್ತಾವವಿದೆ. ಇದಕ್ಕಾಗಿ ಭೂಗರ್ಭದೊಳಗೆ ಹಲವು ಕಿ.ಮೀ. ಉದ್ದದ ಸುರಂಗ ಕೊರೆದು 250 ಮೆಗಾವಾಟ್ ಸಾಮರ್ಥ್ಯದ ಎಂಟು ವಿದ್ಯುತ್ ಉತ್ಪಾದನಾ ಘಟಕಗಳನ್ನು ನಿರ್ಮಿಸಲಾಗುತ್ತದೆ.

ಶೇ 95ರಷ್ಟು ನಿರ್ಮಾಣ ಕಾಮಗಾರಿಗಳು ರಕ್ಷಿತಾರಣ್ಯ ವ್ಯಾಪ್ತಿಯ ಭೂಗರ್ಭದಲ್ಲಿ ನಡೆಯಲಿವೆ. ವಿನ್ಯಾಸ, ಎಂಜಿನಿಯರಿಂಗ್, ನೀರು ಪಂಪಿಂಗ್ ವ್ಯವಸ್ಥೆ, ವಿದ್ಯುತ್ ಉತ್ಪಾದನಾ ಸ್ಥಾವರಗಳ ನಿರ್ಮಾಣ ಸೇರಿ ಎಲ್ಲ ಕಾಮಗಾರಿಗಳಿಗೂ ಒಂದೇ ಟೆಂಡರ್ ಆಹ್ವಾನಿಸಲಾಗಿದೆ.

ಬಿಡ್ ತೆರೆಯದಂತೆ ಮಧ್ಯಂತರ ಆದೇಶ

‘ಶರಾವತಿ ಪಂಪ್ಡ್ ಸ್ಟೋರೇಜ್’ ಯೋಜನೆಯ ಟೆಂಡರ್ ಪ್ರಕ್ರಿಯೆಯನ್ನು ತರಾತುರಿಯಲ್ಲಿ ನಡೆಸುತ್ತಿರುವುದನ್ನು ಪ್ರಶ್ನಿಸಿ ನಿರ್ಮಾಣ ಕಾಮಗಾರಿಗಳಲ್ಲಿ ದೇಶದಲ್ಲಿ ಮುಂಚೂಣಿಯಲ್ಲಿರುವ ಎಲ್ ಆ್ಯಂಡ್ ಟಿ ಕಂಪನಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದೆ. ಮುಂದಿನ ನಿರ್ದೇಶನದ ವರೆಗೆ ಬಿಡ್ ದಾಖಲೆ ತೆರೆಯದಂತೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಮನೆ ಖರ್ಚು ಎರಡುಪಟ್ಟು ಹೆಚ್ಚು

ನವದೆಹಲಿ (ಪಿಟಿಐ): ‘ನಿತ್ಯದ ಮನೆ ಬಳಕೆ ವಸ್ತುಗಳಿಗಾಗಿ ತಿಂಗಳೊಂದರಲ್ಲಿ ಕುಟುಂಬವೊಂದು ಮಾಡುವ ವೆಚ್ಚವು ಕಳೆದ 10 ವರ್ಷಗಳಲ್ಲಿ (2011–12ರಿಂದ 2022–23) ಎರಡು ಪಟ್ಟು ಹೆಚ್ಚಾಗಿದೆ’ ಎಂದು ಕೇಂದ್ರ ಸರ್ಕಾರವು ನಡೆಸಿದ ಸಮೀಕ್ಷೆಯೊಂದರಿಂದ ತಿಳಿದುಬಂದಿದೆ.

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಅಡಿಯಲ್ಲಿ ಬರುವ ನ್ಯಾಷನಲ್ ಸ್ಯಾಂಪಲ್ ಸರ್ವೆ ಆಫೀಸ್ (ಎನ್‌ಎಸ್‌ಎಸ್‌ಒ) ಈ ಸಮೀಕ್ಷೆಯನ್ನು ನಡೆಸಿದೆ.

‘ಮನೆಯೊಂದರ ಬಳಕೆ ವೆಚ್ಚ ಸಮೀಕ್ಷೆ (ಎಚ್‌ಸಿಇಎಸ್) 2022–23’ ಸಮೀಕ್ಷೆಯ ಹೆಸರು. 2022ರ ಆಗಸ್ಟ್‌ನಿಂದ 2023ರ ಜುಲೈವರೆಗೆ ಈ ಸಮೀಕ್ಷೆಯನ್ನು ನಡೆಸಲಾಗಿದೆ. ಗೃಹ ಬಳಕೆ ವಸ್ತುಗಳಿಗಾಗಿ ಮನೆಯೊಂದು ತಿಂಗಳಿಗೆ ಎಷ್ಟು ವೆಚ್ಚ ಮಾಡುತ್ತದೆ ಎನ್ನುವುದನ್ನು ತಿಳಿಯುವುದು ಈ ಸಮೀಕ್ಷೆಯ ಉದ್ದೇಶ. ನಗರ ಹಾಗೂ ಗ್ರಾಮೀಣ ಪ್ರದೇಶ ಎನ್ನುವ ಪ್ರತ್ಯೇಕ ವಿಂಗಡಣೆಯನ್ನು ಮಾಡಿಕೊಳ್ಳಲಾಗಿದೆ. ಎಲ್ಲ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲೂ ಸಮೀಕ್ಷೆ ನಡೆಸಲಾಗಿದೆ.



ಸಮೀಕ್ಷೆ ಏನು ಹೇಳುತ್ತದೆ

ತಿಂಗಳೊಂದರಲ್ಲಿ ಕುಟುಂಬವೊಂದು ಮಾಡುವ ಸರಾಸರಿ ವಾಸ್ತವಿಕ ವೆಚ್ಚ

	ನಗರ ಪ್ರದೇಶ	ಗ್ರಾಮೀಣ ಪ್ರದೇಶ
2011-12	₹2,630	₹1,430
2022-23	₹6,459	₹3,773

ಸರಾಸರಿ ವೆಚ್ಚ (2011–12ರ ಬೆಲೆಯ ಹೋಲಿಕೆಯಲ್ಲಿ)

	ನಗರ ಪ್ರದೇಶ	ಗ್ರಾಮೀಣ ಪ್ರದೇಶ
2011-12	₹2,630	₹1,430
2022-23	₹3,510	₹2,008

ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನದ ಭೀತಿ

‘ಕೈ’ ಶಾಸಕರು ಇಂದು ಹೋಟೆಲ್‌ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಸಭೆ ಚುನಾವಣೆಯಲ್ಲಿ ಅಡ್ಡ ಮತದಾನದ ಭೀತಿ ಇರುವುದರಿಂದ ಕಾಂಗ್ರೆಸ್‌ನ ಎಲ್ಲ ಶಾಸಕರನ್ನು ಸೋಮವಾರ ಮಧ್ಯಾಹ್ನ ಹೋಟೆಲ್‌ಗೆ ಕರೆದೊಯ್ಯಲಾಗುತ್ತಿದೆ. ಆಡಳಿತ ಪಕ್ಷದ ಶಾಸಕರು ಹೋಟೆಲ್‌ನಿಂದಲೇ ಮಂಗಳವಾರ ಬೆಳಿಗ್ಗೆ ಮತದಾನಕ್ಕೆ ಬರಲಿದ್ದಾರೆ.

ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಮಂಗಳವಾರ (ಫೆ. 27) ಮತದಾನ ನಡೆಯಲಿದೆ. ಕಾಂಗ್ರೆಸ್‌ನ ಮೂವರು ಮತ್ತು ಎನ್‌ಡಿಎ ಮೈತ್ರಿಕೂಟದ ಇಬ್ಬರು ಕಣದಲ್ಲಿದ್ದಾರೆ. ಮೂರು ಸ್ಥಾನ ಗೆಲ್ಲುವ ಅವಕಾಶ ಕಾಂಗ್ರೆಸ್‌ಗೆ ಇದ್ದರೂ ಎನ್‌ಡಿಎ ಮೈತ್ರಿಕೂಟವು ಮತಗಳ ಕೊರತೆಯ ಮಧ್ಯೆಯೂ ಡಿ.ಕುಪೇಂದ್ರ ರೆಡ್ಡಿ ಅವರನ್ನು ಎರಡನೇ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ. ಇದರಿಂದಾಗಿ ಕಾಂಗ್ರೆಸ್ ತನ್ನ ಶಾಸಕರನ್ನು ಹಿಡಿದಿಟ್ಟುಕೊಳ್ಳಬೇಕಾಗಿದೆ.

ಸುರಪುರ ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನರಾಗಿರುವುದರಿಂದ ವಿಧಾನ ಮಂಡಲದಲ್ಲಿ ಸೋಮವಾರ ಸಂತಾಪ ಸೂಚನೆ ನಡೆಯಲಿದೆ. ಕಾಂಗ್ರೆಸ್‌ನ ಎಲ್ಲ ಸದಸ್ಯರು, ಸಂತಾಪ ಸೂಚನೆಯಲ್ಲಿ ಭಾಗವಹಿಸಿದ ಬಳಿಕ ವಿಧಾನಸೌಧದಿಂದ ನೇರವಾಗಿ ಹೋಟೆಲ್‌ಗೆ ತೆರಳಲಿದ್ದಾರೆ.

4ನೇ ಪುಟ ನೋಡಿ

ನಿಮ್ಮ ಜಮೀನನ್ನು ಒಂದು ಲ್ಯಾಂಡ್ ಮಾರ್ಕ್ ಆಗಿ ಬದಲಿಸಿರಿ.

ಭಾರತದ ಖಾಸಗಿ ರಂಗದ ನಂಬರ್ 1 ಕಂಪೆನಿಯಾದ Reliance Industries Ltd., ಮತ್ತು ಜಗತ್ತಿನ ಎನರ್ಜಿ ಪವರ್‌ಹೌಸ್ bp ಯ, ನಡುವಿನ ಒಂದು ಸಂಯುಕ್ತ ಉಪಕ್ರಮವಾದ Jio-bp ಯ ಚನಲ್ ಪಾರ್ಟನರರಾಗುವ ಒಂದು ಸುವರ್ಣಾವಕಾಶ.

Jio bp You deserve more

Jio-bp ಇವರಿಗೆ ಹೈವೇಗಳು ಮತ್ತು ನಗರಗಳಲ್ಲಿ ಸ್ವಂತ ಜಮೀನು ಹೊಂದಿರುವ ಪ್ರಗತಿಶೀಲ ವ್ಯಾಪಾರಿಗಳ ಅವಶ್ಯಕತೆ ಇದೆ.

*ಚನಲ್ ಪಾರ್ಟನರರಾಗುವ ಮುಖ್ಯ ಅವಶ್ಯಕತೆಗಳು:

ಜಮೀನಿನ ಅವಶ್ಯಕತೆ:
ಹೈವೇಗಳಲ್ಲಿ 3000 ಚ.ಮೀ., ನಗರ 1200 ಚ.ಮೀ.
ಅನ್ಯ ರಸ್ತೆಗಳಲ್ಲಿ 2000 ಚ.ಮೀ.

ಹೂಡಿಕೆ:
₹2+ ಕೋಟಿ
ಇತರ ವಿವರಗಳಿಗಾಗಿ ಭೇಟಿ ನೀಡಿರಿ:
jiobp.com

QR ಸ್ಕ್ಯಾನ್ ಮಾಡಿರಿ:

ಅರ್ಜಿ ಸಲ್ಲಿಸಲು - ಭೇಟಿ ನೀಡಿರಿ: partners.jiobp.in | ಈ ಮೈಲ್: jiobp.dealership@jiobp.com | ಇಲ್ಲಿಗೆ ಕಳುಹಿಸಿರಿ: ‘Hi’ ಅನ್ನು 70217 22222

ನಮ್ಮ ಆಫರಿಂಗ್ಸ್
Fuels with International ACTIVE technology | Trans-Connect | Fuel4U | RewardMeter | Nitrofill | Freight4U | pulse | CleanNGreen | air bp Jio | wildbean cafe | Refresh | Flexipay | Castrol

ಪ್ರಾಮುಖ್ಯವಾದ ಸೂಚನೆ: Reliance BP Mobility limited (RBML) ಡೀಲರ್‌ಶಿಪ್‌ನ ಹಂಚಿಕೆಯಲ್ಲಿ ಹಣವನ್ನು ಕೇಳಿ ಮೋಸ ಮಾಡುತ್ತಿರುವ ಮತ್ತು ವಂಚನೆ ಮಾಡುವ ಉದ್ದೇಶದಿಂದ ಅಪ್ರಾಮಾಣಿಕ ಮೂಲಗಳಿಂದ ಮಾಡಲಾಗುತ್ತಿರುವ ಕಪಟದ ವ್ಯವಹಾರಗಳ ವ್ಯಾಪಕತೆಯ ಬಗ್ಗೆ ಜನರ ಗಮನ ಹರಿಸುತ್ತಿದ್ದಾರೆ. RBML ಇವರು ತಾವು RBML ಅಥವಾ ಅವರ ಯಾವುದೇ ಸಹಯೋಗಿ, ಹೋಲ್ಡಿಂಗ್ ಅಥವಾ ಸಮೂಹ ಕಂಪೆನಿಗಳನ್ನು ಪ್ರತಿನಿಧೀಕರಿಸುತ್ತಿದ್ದೇವೆ ಎಂದು ಹೇಳುವ ಇಂತಹ ಅನಧಿಕೃತ ವ್ಯಕ್ತಿಗಳು/ಸಂಸ್ಥೆಗಳ ವಿರುದ್ಧ ಎಚ್ಚರಿಕೆ ವಹಿಸಲು ಸಾರ್ವಜನಿಕರಿಗೆ ಸಲಹೆ ನೀಡುತ್ತಾರೆ. ಇಂತಹ ಯಾವುದೇ ಪ್ರಸಂಗಗಳು ಗಮನಕ್ಕೆ ಬಂದರೆ ದಯವಿಟ್ಟು ನಮಗೆ CustomerCare.Petroleum@jiobp.com ಇಲ್ಲಿಗೆ ಬರೆಯಿರಿ. RBML ಅಥವಾ ಅವರ ಸಹಯೋಗಗಳು ಅಥವಾ ಹೋಲ್ಡಿಂಗ್ ಅಥವಾ ಸಮೂಹ ಕಂಪೆನಿಗಳು, RBML ನಿಂದ ಅಧಿಕೃತ ಪಡೆಯದೆ ಸಂವಹನದ ಯಾವುದೇ ಮಾಧ್ಯಮದಿಂದ, ಇಂತಹ ಮೋಸದ ವ್ಯವಹಾರಕ್ಕೆ ಒಳಗಾಗುವ ಯಾವನೇ ವ್ಯಕ್ತಿಯ ನಷ್ಟ/ಹಾನಿಗೆ ಯಾವುದೇ ರೀತಿಯಲ್ಲಿ ಬಾಧ್ಯರಾಗುವುದಿಲ್ಲ. ವಾಸ್ತವಿಕ ಸೈಟ್ ಇಲ್ಲಿ ದರ್ಶಿಸಲಾದ ಚಿತ್ರಕ್ಕಿಂತ ಭಿನ್ನವಾಗಿರಬಹುದು.

ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಆನೇಕಲ್ ತಾಲ್ಲೂಕು ಪಂಚಾಯಿತಿ

ಕರ್ನಾಟಕ ಸರ್ಕಾರ

ಹೆನ್ನಾಗರ ಗ್ರಾಮ ಪಂಚಾಯಿತಿ

ಶ್ರೀ ಮಹೇಶ್ ಆರ್.
ಅಧ್ಯಕ್ಷರು
ಹೆನ್ನಾಗರ ಗ್ರಾಮ ಪಂಚಾಯಿತಿ

ಶ್ರೀಮತಿ ಲಕ್ಷ್ಮಿ ಎಂ.
ಉಪಾಧ್ಯಕ್ಷರು
ಹೆನ್ನಾಗರ ಗ್ರಾಮ ಪಂಚಾಯಿತಿ

ಹೆನ್ನಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ

ಕಾವೇರಿ ಕುಡಿಯುವ ನೀರಿನ ಸರಬರಾಜಿಗೆ ಚಾಲನೆ

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅರ್ಹ ಫಲಾನುಭವಿಗಳಿಗೆ 25% ಅಡಿಯಲ್ಲಿ
ಹಸು, ಲ್ಯಾಪ್‌ಟಾಪ್, ತ್ರಿಚಕ್ರ ವಾಹನ ವಿತರಣೆ ಹಾಗೂ
ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ

ಶ್ರೀ ಆರ್.ಕೆ. ಕೇಶವರೆಡ್ಡಿ
ಮಾಜಿ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು,
ಹೆನ್ನಾಗರ ಗ್ರಾಮ ಪಂಚಾಯಿತಿ

ಶ್ರೀ ಹೆಚ್.ಜೆ. ಪ್ರಸನ್ನ ಕುಮಾರ್
ಮಾಜಿ ಜಿ.ಪಂ. ಸದಸ್ಯರು ಮತ್ತು ಮಾಜಿ ಅಧ್ಯಕ್ಷರು
ಹಾಗೂ ಹಾಲಿ ಸದಸ್ಯರು, ಹೆನ್ನಾಗರ ಗ್ರಾಮ ಪಂಚಾಯಿತಿ

ಶ್ರೀಮತಿ ಎಂ. ಮುನಿರತ್ನ ಮುನಿರಾಜು
ಹೆಚ್. ಹೊಸಹಳ್ಳಿ
ನಿಕಟಪೂರ್ವ ಅಧ್ಯಕ್ಷರು ಹಾಗೂ ಹಾಲಿ ಸದಸ್ಯರು
ಹೆನ್ನಾಗರ ಗ್ರಾಮ ಪಂಚಾಯಿತಿ

ಶ್ರೀ ಕಿರಣ್ ಕುಮಾರ್ ಎಂ.
ಅಧ್ಯಕ್ಷರು, ಸಾಮಾಜಿಕ ಸ್ಥಾಯಿ ಸಮಿತಿ
ಹಾಗೂ ಸದಸ್ಯರು, ಹೆನ್ನಾಗರ ಗ್ರಾಮ ಪಂಚಾಯಿತಿ

ಘನ ಉಪಸ್ಥಿತಿ :
ಸನ್ಮಾನ್ಯ ಶ್ರೀ ಡಿ.ಕೆ. ಶಿವಕುಮಾರ್‌ರವರು
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

SCAN FOR LOCATION

ಸರ್ವರಿಗೂ ಆತ್ಮೀಯ ಸ್ವಾಗತ

ದಿನಾಂಕ : 26-02-2024 ಸೋಮವಾರ
ಸ್ಥಳ : ಹೆಚ್. ಹೊಸಹಳ್ಳಿ ಬಸ್ ನಿಲ್ದಾಣದ ಹತ್ತಿರ

ಅನ್ನಭಾಗ್ಯ ಗೃಹಲಕ್ಷ್ಮಿ ಗೃಹ ಜ್ಯೋತಿ ಯುವ ನಿಧಿ ಶಕ್ತಿ

ಮೋದಿ ಸರ್ಕಾರದ ಗ್ಯಾರಂಟಿ
ಸಮೃದ್ಧ ರೈತರು, ಸಮೃದ್ಧ ರಾಷ್ಟ್ರ
ಕಿಸಾನ್ ರೈಲುಗಳು ಹೊಸ ಮಾರುಕಟ್ಟೆಗಳಿಗೆ ರೈತರನ್ನು ಸಂಪರ್ಕಿಸುತ್ತಿವೆ; 2300ಕ್ಕೂ ಹೆಚ್ಚು ಕಿಸಾನ್ ರೈಲುಗಳು 167 ಮಾರ್ಗಗಳಲ್ಲಿ ಕಾರ್ಯನಿರ್ವಹಿಸುತ್ತಿವೆ
ನಮ್ಮ ಸಂಕಲ್ಪ ವಿಕಸಿತ ಭಾರತ
ಹೆಚ್ಚಿನ ಮಾಹಿತಿಗೆ ಸ್ಕ್ಯಾನ್ ಮಾಡಿ
cbc 22201/13/0297/2324

ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ಕಸ ಸಂಗ್ರಹಣೆ ಕಾರ್ಯಕ್ಕೆ ಬಳಕೆ

6 ಮಿನಿ ಟಿಪ್ಪರ್‌ಗಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ನೂತನ ಮಿನಿ ಟಿಪ್ಪರ್ ವಾಹನಗಳಿಗೆ ಶಾಸಕ ಎಸ್‌ ಮುನಿರಾಜು ಚಾಲನೆ ನೀಡಿದರು

ಪೀಣ್ಯ ದಾಸರಹಳ್ಳಿ: 'ಈ ಭಾಗದಲ್ಲಿ ಸಾಕಷ್ಟು ಕಸದ ಸಮಸ್ಯೆ ಇದೆ. ಕಸವನ್ನು ಎಲ್ಲೆಂದರಲ್ಲಿ ಎಸೆಯದೆ ಮನೆ ಹತ್ತಿರ ಬರುವ ಟಿಪ್ಪರ್ ವಾಹನಗಳಿಗೆ ಹಸಿ ಮತ್ತು ಒಣ ಕಸ ವಿಂಗಡಿಸಿ ಹಾಕಿ, ಸ್ವಚ್ಛತೆ ಕಾಪಾಡಬೇಕು' ಎಂದು ಶಾಸಕ ಎಸ್. ಮುನಿರಾಜು ಮನವಿ ಮಾಡಿದರು.

ಚಿಕ್ಕಬಾಣಾವರ ಪುರಸಭೆ ಸಮೀಪ ಆರು ಮಿನಿ ಟಿಪ್ಪರ್ ವಾಹನಗಳಿಗೆ ಚಾಲನೆ ನೀಡಿ ಅವರು ಮಾತನಾಡಿದರು.

ಚಿಕ್ಕಬಾಣಾವರ ಪುರಸಭೆಯ ಮುಖ್ಯ ಅಧಿಕಾರಿ ಎಚ್.ಎ. ಕುಮಾರ್ ಮಾತನಾಡಿ, 'ಸ್ವಚ್ಛ ಭಾರತ ಅಭಿಯಾನ ಹಾಗೂ ಪುರಸಭೆ ಅನುದಾನದಲ್ಲಿ ಮೊದಲ ಬಾರಿಗೆ ಆರು ಮಿನಿ ಟಿಪ್ಪರ್‌ಗಳನ್ನು ಖರೀದಿಸಲಾಗಿದೆ. ಮನೆಮನೆಗೆ ಹೋಗಿ ಕಸ ಸಂಗ್ರಹಿಸಲು ಇವುಗಳನ್ನು ಬಳಸಲಾಗುತ್ತದೆ. ಪ್ರತಿ ಟಿಪ್ಪರ್‌ನಲ್ಲಿ ಒಂದೂವರೆ ಟನ್ ಕಸ ಹಿಡಿಯುತ್ತದೆ. ಎರಡು ಕಂಪಾರ್ಟ್‌ಮೆಂಟ್‌ಗಳಿದ್ದು, ಹಸಿ, ಒಣಕಸವನ್ನು ಬೇರೆ ಬೇರೆಯಾಗಿ ಸಂಗ್ರಹಿಸಬಹುದು' ಎಂದು ಅವರು ಹೇಳಿದರು.

'ಮುಂದಿನ ದಿನಗಳಲ್ಲಿ ಮತ್ತೆ ಮೂರು ಆಟೊ ಟಿಪ್ಪರ್‌ಗಳು ಬರಲಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುತ್ತಿದೆ. ಒಟ್ಟು ಒಂಬತ್ತು ವಾಹನಗಳು ಲಭ್ಯವಾದರೆ, ಎಲ್ಲಾ ವಾರ್ಡ್‌ಗಳಲ್ಲೂ ಕಸ ಸಂಗ್ರಹಿಸಲು ಅನುಕೂಲವಾಗಲಿದೆ' ಎಂದು ಹೇಳಿದರು.

'ಚಿಕ್ಕಬಾಣಾವರ ಪುರಸಭೆ ವ್ಯಾಪ್ತಿಯಲ್ಲಿ ನಿತ್ಯ ಕನಿಷ್ಠ 18 ಟನ್ ಕಸ ಉತ್ಪತ್ತಿಯಾಗುತ್ತದೆ. 10 ಟನ್ ಕಸ ಮಾತ್ರ ವಿಲೇವಾರಿಯಾಗುತ್ತಿದೆ' ಎಂದರು.

ಸೋಮಶೆಟ್ಟಿಹಳ್ಳಿ ವ್ಯಾಪ್ತಿಯಲ್ಲಿ ಒಂದೂವರೆ ಎಕರೆ ಪ್ರದೇಶದಲ್ಲಿ ವಿಂಗಡಣೆ ಕಾರ್ಯಕ್ಕೆ ಜಾಗ ಮಂಜೂರಾತಿ ಸಿಗುವ ನಿರೀಕ್ಷೆ ಇದೆ. ಸಾರ್ವಜನಿಕರು ಮನೆ ಹತ್ತಿರ ಬರುವ ವಾಹನಗಳಿಗೆ ಕಸವನ್ನು ವಿಂಗಡಿಸಿ ಕೊಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಜಿ. ಮರಿಸ್ವಾಮಿ, ಪರಿಸರ ಎಂಜಿನಿಯರ್ ಹರೀಶ್, ಬಿಜೆಪಿ ಮುಖಂಡರಾದ ಬಿ.ಎಂ. ಚಿಕ್ಕಣ್ಣ, ನವೀನ್, ಕಬೀರ್ ಅಹ್ಮದ್ ಹಾಗೂ ಆರೋಗ್ಯ ಅಧಿಕಾರಿಗಳು, ಪೌರಕಾರ್ಮಿಕರು, ಪುರಸಭೆ ಸಿಬ್ಬಂದಿ ಇದ್ದರು.

ರಾಜಗೋಪುರ ಪ್ರತಿಷ್ಠಾಪನೆ

ಪ್ರಜಾವಾಣಿ ವಾರ್ತೆ

ಪಟಾಲಮ್ಮ ದೇಗುಲದ ಹೊಸ ರಾಜಗೋಪುರ

ಯಲಹಂಕ: 'ಸನಾತನ ಧರ್ಮವನ್ನು ಎಲ್ಲರೂ ಉಳಿಸಿ, ಬೆಳೆಸಿಕೊಂಡು ಹೋಗಬೇಕು' ಎಂದು ಸಿದ್ಧಗಂಗಾ ಕ್ಷೇತ್ರದ ಪೀಠಾಧಿಪತಿ ಸಿದ್ಧಲಿಂಗ ಸ್ವಾಮೀಜಿ ಹೇಳಿದರು.

ಅದ್ದಿಗಾನಹಳ್ಳಿಯ ಪಟಾಲಮ್ಮ ದೇವಿ ದೇವಾಲಯ ಅಭಿವೃದ್ಧಿ ಟ್ರಸ್ಟ್ ಆಯೋಜಿಸಿದ್ದ ಪಟಾಲಮ್ಮ ದೇಗುಲದ ರಾಜಗೋಪುರ ಪ್ರತಿಷ್ಠಾಪನೆ ಮತ್ತು 24ನೇ ವಾರ್ಷಿಕೋತ್ಸವ ಹಾಗೂ ಸಹ ಕುಂಭಾಭಿಷೇಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಆದಿಚುಂಚನಗಿರಿ ಮಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಅವರು, ದೇವಸ್ಥಾನಗಳು ಶಾಂತಿ, ನೆಮ್ಮದಿ ನೀಡುವ ತಾಣಗಳಾಗಿವೆ ಎಂದು ತಿಳಿಸಿದರು.

ಹೋಮ–ಹವನ ಸೇರಿ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಸಂಸದ ಡಿ.ವಿ.ಸದಾನಂದಗೌಡ, ಶಾಸಕರಾದ ಎಸ್.ಆರ್. ವಿಶ್ವನಾಥ್, ಧೀರಜ್ ಮುನಿರಾಜ್, ದಾನಿ ಹಾಗೂ ಎಂಬೆಸಿ ಸಮೂಹ ಸಂಸ್ಥೆಯ ಅಧ್ಯಕ್ಷ ಜಿತೇಂದ್ರ ವೀರ್ವಾನಿ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಅಂಬಿಕಾ ರಾಜೇಂದ್ರಕುಮಾರ್, ಪಟಾಲಮ್ಮ ದೇವಿ ದೇವಸ್ಥಾನ ಅಭಿವೃದ್ಧಿ ಸಮಿತಿ ಅಧ್ಯಕ್ಷ ಪಿ. ಕೆಂಪೇಗೌಡ, ಉಪಾಧ್ಯಕ್ಷ ಕೆ.ವೀರಣ್ಣ, ಕಾರ್ಯದರ್ಶಿ ಟಿ.ಪಿ.ಪ್ರಕಾಶ್ ಉಪಸ್ಥಿತರಿದ್ದರು.

22 ವರ್ಷದ ಬಳಿಕ ಉಗ್ರ ಬಂಧನ

ನವದೆಹಲಿ (ಪಿಟಿಐ): 'ನಿಷೇಧಿತ ಸ್ಟುಡೆಂಟ್ಸ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ (ಸಿಮಿ) ಸಂಘಟನೆಯ ಉಗ್ರ ಹನೀಫ್ ಶೇಕ್‌ನನ್ನು 22 ವರ್ಷದ ಬಳಿಕ ಬಂಧಿಸಲಾಗಿದೆ' ಎಂದು ಡಿಸಿಪಿ (ವಿಶೇಷ ಘಟಕ) ಅಲೋಕ್ ಕುಮಾರ್ ಭಾನುವಾರ ತಿಳಿಸಿದರು.

'ಹನೀಫ್ 'ಸಿಮಿ' ನಿಯತಕಾಲಿಕದ ಸಂಪಾದಕನಾಗಿದ್ದ. ಅಮಾಯಕರಿಗೆ ಉಗ್ರ ಚಟುವಟಿಕೆಗಳಿಗೆ ಪ್ರೇರೇಪಿಸುತ್ತಿದ್ದ ಎನ್ನಲಾಗಿದೆ' ಎಂದು ಹೇಳಿದರು.

'ದೇಶದ್ರೋಹದ ಪ್ರಕರಣ ಮತ್ತು ಕಾನೂನುಬಾಹಿರ ಚಟುವಟಿಕೆಗಳ (ತಡೆ) ಕಾಯ್ದೆ (ಯುಎಪಿಎ) ಅಡಿ ಹನೀಫ್ ವಿರುದ್ಧ 2001ರಲ್ಲಿ ಪ್ರಕರಣ ದಾಖಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಸ್ಥಳೀಯ ಕೋರ್ಟ್ ಈತನನ್ನು 2002ರಲ್ಲಿ ದೋಷಿ ಎಂದೂ ಘೋಷಿಸಿತ್ತು. ಬಳಿಕ ಹನೀಫ್ ನಾಪತ್ತೆಯಾಗಿದ್ದ' ಎಂದು ತಿಳಿಸಿದರು.

'ಪ್ರಸ್ತುತ, ಹನೀಫ್ ಬೇರೆ ಹೆಸರಿನಲ್ಲಿ ಮಹಾರಾಷ್ಟ್ರದ ಜಲಗಾಂವ್ ಜಿಲ್ಲೆಯ ಭುಸವಾಲ್‌ನ ಉರ್ದು ಶಾಲೆಯಲ್ಲಿ ಶಿಕ್ಷಕನಾಗಿ ಕಾರ್ಯನಿರ್ವಹಿಸುತ್ತಿದ್ದ. ಫೆಬ್ರುವರಿ 22ರಂದು ಈತನನ್ನು ಬಂಧಿಸಲಾಗಿದೆ' ಎಂದರು.

'ಹನೀಫ್ ಒಬ್ಬ ಕುಪ್ರಸಿದ್ಧ ಮತ್ತು ಹಲವು ಪ್ರಕರಣಗಳಲ್ಲಿ ಬೇಕಾಗಿದ್ದ ಉಗ್ರ. 'ಸಿಮಿ'ಯಿಂದ ದೇಶದಾದ್ಯಂತ ನಡೆದ ಹಲವು ದೇಶದ್ರೋಹದ ಕೃತ್ಯಗಳಲ್ಲಿ ಈತ ಮಹತ್ವದ ಪಾತ್ರ ವಹಿಸಿದ್ದ' ಎಂದು ವಿವರಿಸಿದರು.

'ವಿಶೇಷ ತಂಡ ಈತನ ಬಗ್ಗೆ ಮಾಹಿತಿ ಕಲೆಹಾಕಿತ್ತು. ಈತ ಫೆ. 22ರ ಮಧ್ಯಾಹ್ನ ಮೊಹ್ಮದೀನ್ ನಗರದಿಂದ ಖಡ್ಕಾ ರಸ್ತೆಗೆ ಪ್ರಯಾಣಿಸುತ್ತಿರುವುದಾಗಿ ತಿಳಿದುಬಂದಿತು. ಆಗ ನಮ್ಮ ತಂಡವು ಆತನನ್ನು ಸೆರೆಹಿಡಿಯಿತು' ಎಂದರು.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಮೇಲ್ ಮಾಡಿ: peoplesproblem@prajavani.co.in ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಪಾದಚಾರಿ ಮಾರ್ಗ ದುರಸ್ತಿಗೊಳಿಸಿ

ಆರ್‌ಟಿ. ನಗರ ಪಾದಚಾರಿ ಮಾರ್ಗದ ಚಪ್ಪಡಿ ಕಲ್ಲುಗಳು ಕಿತ್ತು ಹೋಗಿವೆ

ಆರ್‌.ಟಿ. ನಗರದ ಗಂಗೇನಹಳ್ಳಿ ಒಂದನೇ ಮುಖ್ಯರಸ್ತೆಯ ಪಾದಚಾರಿಮಾರ್ಗಕ್ಕೆ ಅಳವಡಿಸಿರುವ ಚಪ್ಪಡಿ ಕಲ್ಲುಗಳು ಕಿತ್ತುಹೋಗಿವೆ. ಇದರಿಂದ, ಪಾದಚಾರಿಗಳ ಓಡಾಟಕ್ಕೆ ಸಮಸ್ಯೆಯಾಗಿದೆ. ಈ ರಸ್ತೆಯ ಸಮೀಪದಲ್ಲಿ ಕೇಂದ್ರ ಗೃಹ ಇಲಾಖೆಯ ಪ್ರಧಾನ ಕಚೇರಿ, ಶಾಲಾ–ಕಾಲೇಜುಗಳಿದ್ದು, ವಿದ್ಯಾರ್ಥಿಗಳು, ವೃದ್ಧರು, ಮಹಿಳೆಯರು ಇಂತಹ ಪಾದಚಾರಿ ಮಾರ್ಗದಲ್ಲಿ ಓಡಾಡಬೇಕಾದ ಪರಿಸ್ಥಿತಿ ಇದೆ. ಕೆಲವು ಪಾದಚಾರಿಗಳು ಮುಖ್ಯರಸ್ತೆಯಲ್ಲಿ ಓಡಾಡುವುದರಿಂದ ವಾಹನ ಸಂಚಾರಕ್ಕೂ ತೊಂದರೆಯಾಗಿದೆ. ಜೊತೆಗೆ ಸಂಚಾರ ದಟ್ಟಣೆಯೂ ಆಗುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿನ ಪಾದಚಾರಿ ಮಾರ್ಗವನ್ನು ದುರಸ್ತಿಗೊಳಿಸಬೇಕು.

ಶಿವಪ್ರಸಾದ್ ಎಸ್., ಆರ್‌.ಟಿ. ನಗರ

ಪಾದಚಾರಿ ಮಾರ್ಗದ ಕಸ ತೆರವುಗೊಳಿಸಿ


ಅತಿಗುಪ್ಪೆ ಪಾದಚಾರಿ ಮಾರ್ಗದಲ್ಲಿ ಕಸ

ಅತಿಗುಪ್ಪೆ ಮೆಟ್ರೊ ನಿಲ್ದಾಣದಿಂದ ಚಂದ್ರಾ ಲೇಔಟ್‌ಗೆ ಸಂಪರ್ಕ ಕಲ್ಪಿಸುವ ದ್ವಿಪಥ ರಸ್ತೆಯ ಪಾದಚಾರಿ ಮಾರ್ಗದಲ್ಲಿ ರಾಶಿಗಟ್ಟಲೆ ಕಸ ಹಾಕಲಾಗಿದೆ. ಇದರಿಂದ, ಪಾದಚಾರಿ ಮಾರ್ಗದಲ್ಲಿ ಸಂಚರಿಸುವವರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಎದುರಾಗಿದೆ. ಈ ಕಸದ ರಾಶಿಯನ್ನು ಬೀದಿ ನಾಯಿಗಳು, ಹಸುಗಳು ಎಳೆದು ದಾರಿ ಮೇಲೆ ಹರಡುತ್ತಿವೆ. ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆ ಆಗುತ್ತಿದೆ. ಬಿಬಿಎಂಪಿ ಕೂಡಲೇ ಇಲ್ಲಿ ಹಾಕಿರುವ ಕಸ ತೆಗೆಸಬೇಕು.

ಅಲೋಕ್, ಇನ್‌ಕಮ್‌ಟ್ಯಾಕ್ಸ್ ಬಡಾವಣೆ

ರಸ್ತೆ ಗುಂಡಿ ಮುಚ್ಚಿ

ಬಸವನಗುಡಿ ವಿಧಾನಸಭೆ ಕ್ಷೇತ್ರದ ವಿದ್ಯಾಪೀಠ ವಾರ್ಡ್‌ನ ಅಶೋಕನಗರದ ಎರಡನೇ ಅಡ್ಡರಸ್ತೆಯಲ್ಲಿ ಗುಂಡಿಗಳು ಬಿದ್ದಿವೆ. ದ್ವಿಚಕ್ರ ವಾಹನ ಸವಾರರು ಹಲವಾರು ಬಿದ್ದು ಗಾಯ ಮಾಡಿಕೊಂಡಿರುವ ಹಲವು ಘಟನೆಗಳು ನಡೆದಿವೆ. ಮುಖ್ಯರಸ್ತೆಗೆ ಸಂಪರ್ಕ ಕಲ್ಪಿಸುವ ಈ ರಸ್ತೆಯಲ್ಲಿ ಸಂಚಾರ ದಟ್ಟಣೆ ಆಗುತ್ತಿದೆ. ಕೂಡಲೇ ಬಿಬಿಎಂಪಿ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಕೆ.ಎಸ್ ನಾಗರಾಜ್, ಅಶೋಕನಗರ

ಅಶೋಕ ನಗರದ ರಸ್ತೆಯಲ್ಲಿನ ಗುಂಡಿ

ರಸ್ತೆ ಮೇಲೆ ಚರಂಡಿ ನೀರು

ರಸ್ತೆ ಮೇಲಿನ ತ್ಯಾಜ್ಯ ನೀರು

ಬೆಳ್ಳೂರಿನಿಂದ ಸಾದಾರಮಂಗಲಕ್ಕೆ ಸಂಪರ್ಕ ಕಲ್ಪಿಸುವ ಸಿಲಸ್ ಅಪಾರ್ಟ್‌ಮೆಂಟ್ ಹತ್ತಿರದ ಮುಖ್ಯರಸ್ತೆಯಲ್ಲಿ ಚರಂಡಿ ನೀರು ಹರಿಯುತ್ತಿದೆ. ಇದರಿಂದಾಗಿ ಪಾದಚಾರಿಗಳು, ವಾಹನ ಸವಾರರು ಮೂಗು ಮುಚ್ಚಿಕೊಂಡು ಸಂಚರಿಸುವ ಪರಿಸ್ಥಿತಿ ಎದುರಾಗಿದೆ. ರಸ್ತೆಯಲ್ಲಿ ತ್ಯಾಜ್ಯ ನೀರು ಹರಿಯುತ್ತಿರುವ ಪರಿಣಾಮವಾಗಿ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ. ಅಲ್ಲದೆ, ಅಪಘಾತಗಳು ಸಂಭವಿಸುವ ಅಪಾಯವಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಿ ಸುಗಮ ಸಂಚಾರಕ್ಕೆ ಅವಕಾಶ ನೀಡಬೇಕು.

ಆಶಾ, ಕಾಡುಗೋಡಿ

ಚರಂಡಿ ಸ್ವಚ್ಛಗೊಳಿಸಿ

ಭುವನೇಶ್ವರಿನಗರದ ಚರಂಡಿಯಲ್ಲಿ ಬೆಳೆದಿರುವ ಗಿಡ–ಗಂಟಿಗಳು

ಭುವನೇಶ್ವರಿ ನಗರದ ಎರಡನೇ ಹಂತದ ದೊಡ್ಡಬಸ್ತಿ ಮುಖ್ಯರಸ್ತೆಯಲ್ಲಿರುವ ಚರಂಡಿಯಲ್ಲಿ ಗಿಡ–ಗಂಟಿಗಳು ಬೆಳೆದು ತ್ಯಾಜ್ಯ ನೀರು ಹರಿಯದೇ ಕಟ್ಟಿಕೊಂಡಿದ್ದು, ಗಬ್ಬೆದ್ದು ನಾರುತ್ತಿದೆ. ಜೊತೆಗೆ ಸೊಳ್ಳೆಗಳ ಉತ್ಪತ್ತಿ ತಾಣವಾಗಿ ಮಾರ್ಪಟ್ಟಿದೆ. ಇದರಿಂದ, ಸುತ್ತಮುತ್ತಲಿನ ಮನೆಗಳಲ್ಲಿ ವಾಸಿಸುವ ನಿವಾಸಿಗಳಿಗೆ ತೊಂದೆಯಾಗುತ್ತಿದೆ. ಚರಂಡಿ ಸ್ವಚ್ಛಗೊಳಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ದೂರು ನೀಡಿದರೂ ಸರಿಯಾಗಿ ಸ್ಪಂದಿಸುತ್ತಿಲ್ಲ. ಕೂಡಲೇ ಚರಂಡಿ ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಬೇಕು.

ಮಧುಚಂದ್ರ, ಭುವನೇಶ್ವರಿ ನಗರ

ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ
ಸಮಾರೋಪ ಸಮಾರಂಭ
ರಾಷ್ಟ್ರೀಯ ರಸ್ತೆ ಸುರಕ್ಷತಾ ಮಾಸಾಚರಣೆ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ದಿನಾಂಕ : 26ನೇ ಫೆಬ್ರವರಿ 2024 ರಂದು ಸೋಮವಾರ
ಸಮಯ : ಸಂಜೆ 4.00 ಗಂಟೆಗೆ ಸ್ಥಳ: ಯವನಿಕಾ, ನೃಪತುಂಗ ರಸ್ತೆ, ಬೆಂಗಳೂರು
• ಕಡ್ಡಾಯವಾಗಿ ಹೆಲ್ಮೆಟ್ ಧರಿಸಿ-ವಾಹನ ಚಲಾಯಿಸಿ (BIS ಪ್ರಮಾಣಿತ ಹೆಲ್ಮೆಟ್ ಧರಿಸಿ)
• ವಾಹನ ಚಲಾಯಿಸುವಾಗ ಮೊಬೈಲ್ ಬಳಸಬೇಡಿ
• ರಸ್ತೆಯಲ್ಲಿರುವ ಸಿಗ್ನಲ್‌ಗಳನ್ನು ಕಡ್ಡಾಯವಾಗಿ ಪಾಲಿಸಿ
• ವೇಗದ ಮಿತಿಯಲ್ಲಿ ವಾಹನ ಚಲಾಯಿಸಿ
• ಮದ್ಯಪಾನ ಮಾಡಿ ವಾಹನ ಚಲಾಯಿಸಬೇಡಿ
• ಕಡ್ಡಾಯವಾಗಿ ಸೀಟ್ ಬೆಲ್ಟ್ ಧರಿಸಿ
ಶ್ರೀ ರಿಜ್ವಾನ್ ಅರ್ಷದ್
ಮಾನ್ಯ ಶಾಸಕರು ಶಿವಾಜಿನಗರ
ಇವರ ಅಧ್ಯಕ್ಷತೆಯಲ್ಲಿ
ಶ್ರೀ ರಾಮಲಿಂಗಾರೆಡ್ಡಿ
ಸಾರಿಗೆ ಮತ್ತು ಮುಜರಾಯಿ ಸಚಿವರ
ಘನ ಉಪಸ್ಥಿತಿಯಲ್ಲಿ
ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ
ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.
ರಸ್ತೆ ಸುರಕ್ಷತೆ ನಾಯಕರಾಗಿರಿ
ಡಾ. ಎನ್.ವಿ. ಪ್ರಸಾದ್ ಭಾ.ಆ.ಸೇ ಕಾರ್ಯದರ್ಶಿಗಳು ಸಾರಿಗೆ ಇಲಾಖೆ
ಯೋಗೀಶ್ ಎ.ಎಂ. ಭಾ.ಆ.ಸೇ ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ ಬೆಂಗಳೂರು
ಜೆ. ಪುರುಷೋತ್ತಮ್ ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ಮಂಡ್ಯ ಬಿಟ್ಟು ಬೆಂಗಳೂರಿನಲ್ಲಿ ಸಭೆ ಏಕೆ, ಏಕಾಂಗಿಯಾದರೆ 'ಸ್ವಾಭಿಮಾನದ ಸಂಸದೆ'?

ಕುಗ್ಗಿತೇ ಸಂಸದೆ ಸುಮಲತಾ ಜನಪ್ರಿಯತೆ?

• ಎಂ.ಎನ್.ಯೋಗೇಶ್

ಮಂಡ್ಯ: ಕಳೆದ ಲೋಕಸಭಾ ಚುನಾವಣೆಯಲ್ಲಿ 'ಸ್ವಾಭಿಮಾನ'ದ ಅಭ್ಯರ್ಥಿಯಾಗಿ ಸ್ಪರ್ಧಿಸಿ 1.25 ಲಕ್ಷ ಮತಗಳ ಅಂತರದಿಂದ ಗೆದ್ದು ಬೀಗಿದ್ದ ಸಂಸದೆ ಸುಮಲತಾ ಅವರ ಜನಪ್ರಿಯತೆ ಈ ಬಾರಿ ತೀವ್ರವಾಗಿ ಕುಸಿತ ಕಂಡಿದೆ ಎಂಬ ಮಾತು ಜಿಲ್ಲೆಯಾದ್ಯಂತ ಹರಿದಾಡುತ್ತಿವೆ.

ಬಿಜೆಪಿಗೆ ಬೆಂಬಲ ಕೊಟ್ಟಿರುವ ಅವರು ಮಂಡ್ಯ ಕ್ಷೇತ್ರವನ್ನು ಬಿಜೆಪಿಗೆ ಉಳಿಸಿಕೊಳ್ಳಬೇಕು ಎಂದು ಹೋರಾಡುತ್ತಿದ್ದಾರೆ. ಆದರೆ, ಅವರ ಧ್ವನಿಗೆ ಧ್ವನಿಗೂಡಿಸುವವರು ಜಿಲ್ಲೆಯಲ್ಲಿ ಯಾರೂ ಇಲ್ಲವಾಗಿದ್ದಾರೆ. ಅವರೀಗ ಒಂಟಿಯಾಗಿದ್ದು ಇದೇ ಕಾರಣಕ್ಕೆ ಬೆಂಗಳೂರಿನ ತಮ್ಮ ನಿವಾಸದಲ್ಲಿ ಬೆಂಬಲಿಗರ ಸಭೆ ನಡೆಸಿದ್ದಾರೆ. ಮಂಡ್ಯ ಬಿಟ್ಟು ಬೆಂಗಳೂರಿನಲ್ಲಿ ಅವರು ಏಕೆ ಸಭೆ ನಡೆಸಬೇಕು ಎಂಬ ಪ್ರಶ್ನೆ ಸ್ಥಳೀಯರಲ್ಲಿದೆ.

ಜೆಡಿಎಸ್‌ಗೆ ಮಂಡ್ಯ ಕ್ಷೇತ್ರ ಬಿಟ್ಟುಕೊಡುವುದು ಬಹುತೇಕ ಖಚಿತವಾಗಿದ್ದು ಮುಂದಿನ ನಡೆ ಬಗ್ಗೆ ಅವರು ಗೊಂದಲದಲ್ಲಿದ್ದಾರೆ. ರಾಜಕಾರಣಿಯಾಗಿ ಜಿಲ್ಲೆಯಲ್ಲಿ ತಮ್ಮದೇ ಕಾರ್ಯಕರ್ತರ ಪಡೆ ಕಟ್ಟಿಕೊಳ್ಳುವಲ್ಲಿ ಅವರು ವಿಫಲರಾಗಿದ್ದಾರೆ. ಅಂಬರೀಷ್ ಮೃತಪಟ್ಟ ನಂತರ ಅವರನ್ನು ಒತ್ತಾಯಿಸಿ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಮಾಡಿದ್ದ ಹಲವರು ಈಗ ಸುಮಲತಾ ಸಖ್ಯ ಬಿಟ್ಟು ಹೋಗಿದ್ದಾರೆ.

ದರ್ಶನ್, ರಾಕ್‌ಲೈನ್ ವೆಂಕಟೇಶ್, ದೊಡ್ಡಣ್ಣ ಸೇರಿದಂತೆ ಚಿತ್ರರಂಗದ ಕೆಲ ಗಣ್ಯರು, ಅಂಬರೀಷ್ ಅಭಿಮಾನಿಗಳ ಸಂಘದ ಕೆಲ ಪದಾಧಿಕಾರಿಗಳನ್ನು ಹೊರತುಪಡಿಸಿದರೆ ಸುಮಲತಾ ಜೊತೆಯಲ್ಲಿ ಈಗ ಯಾರೂ ಇಲ್ಲವಾಗಿದ್ದಾರೆ. ಸುಮಲತಾ ಕೂಡ ತನಗೇ ಬಿಜೆಪಿ ಟಿಕೆಟ್ ಕೊಡಿ ಎಂದು ಕೇಳುತ್ತಿಲ್ಲ, ಸುಮಲತಾ ಅವರಿಗೆ ಬಿಜೆಪಿ ಟಿಕೆಟ್ ಕೊಡಬೇಕು ಎಂದು ಒತ್ತಾಯಿಸುವವರು ಯಾರೂ ಇಲ್ಲ. ಬಿಜೆಪಿಗೇ ಕ್ಷೇತ್ರ ಉಳಿಸಿಕೊಳ್ಳಬೇಕೆಂದಷ್ಟೆ ಸುಮಲತಾ ಅವರು ಹೇಳಿಕೆಗಳನ್ನು ನೀಡುತ್ತಿದ್ದಾರೆ.

ಅವರು ಬಿಜೆಪಿಗೆ ಬೆಂಬಲ ಕೊಟ್ಟಿದ್ದರೂ ಸ್ಥಳೀಯ ಬಿಜೆಪಿ ಮುಖಂಡರ ಮೇಲೂ ಅವರಿಗೆ ವಿಶ್ವಾಸವಿಲ್ಲ. ಬಿಜೆಪಿಯ ಯಾವುದೇ ಸಭೆ–ಸಮಾರಂಭಗಳಿಗೂ ಅವರನ್ನು ಆಹ್ವಾನಿಸುತ್ತಿಲ್ಲ. ಸುಮಲತಾ ಕಾಂಗ್ರೆಸ್ ಕದ ತಟ್ಟಿದ್ದರಾದರೂ 'ಕೈ'ಬಾಗಿಲು ಕೂಡ ಮುಚ್ಚಿದೆ. ಈ ಕಾರಣಗಳಿಂದ ಅವರು ಅತಂತ್ರರಾಗಿದ್ದು ಮುಂದಿನ ನಡೆ ಬಗ್ಗೆ ಕುತೂಹಲ ಮೂಡಿದೆ.

ಕಳೆದ ಚುನಾವಣೆಯಲ್ಲಿ ಸ್ವತಃ ಪ್ರಧಾನಿ ನರೇಂದ್ರ ಮೋದಿಯೇ ಅವರಿಗೆ ಬೆಂಬಲ ಕೊಟ್ಟಿದ್ದರು. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಧರ್ಮ ಮೀರಿ ಕ್ಷೇತ್ರದ ಕಾಂಗ್ರೆಸ್‌ನ ಮಾಜಿ ಶಾಸಕರೂ ಸುಮಲತಾ ಪರ ರಹಸ್ಯ ಪ್ರಚಾರ ನಡೆಸಿದ್ದರು. ಜೊತೆಗೆ ಪ್ರಗತಿಪರ ಸಂಘಟನೆಗಳು, ಸಣ್ಣಪುಟ್ಟ ಸಮುದಾಯದವರು ಪಕ್ಷ ಮೀರಿ ಬೆಂಬಲವಾಗಿ ನಿಂತಿದ್ದರು. ಆದರೆ, ಈಗ ಅಂತಹ ಪರಿಸ್ಥಿತಿ ಇಲ್ಲ, ಹೀಗಾಗಿ ಮುಂದೆ ಮತ್ತೆ 'ಸ್ವಾಭಿಮಾನ'ದ ಕಾರ್ಡ್ ಎತ್ತುವರೇ ಎಂಬ ಪ್ರಶ್ನೆ ಮೂಡಿದೆ.

'ಬಿಜೆಪಿ ಕಾರ್ಯಕರ್ತರು, ಆರ್‌ಎಸ್‌ಎಸ್ ಸೇರಿ ಸಂಘ ಪರಿವಾರದ ಮುಖಂಡರು ಸುಮಲತಾ ಪರ ಪ್ರಚಾರ ಮಾಡಿದ್ದರು. ಆದರೆ, ಅವರು ಗೆದ್ದ ಮೇಲೆ ಕಾರ್ಯಕರ್ತರಿಗೆ ಒಂದು ಕೃತಜ್ಞತೆ ಹೇಳಲಿಲ್ಲ; ಬಿಜೆಪಿಗೆ ಬೆಂಬಲ ಕೊಟ್ಟ ನಂತರವೂ ಸ್ಥಳೀಯ ಮುಖಂಡರ ಜೊತೆ ಸೇರಲಿಲ್ಲ. ಈಗ ಬಿಜೆಪಿ ಟಿಕೆಟ್ ಕೇಳಲು ಅವರಿಗೆ ಯಾವ ನೈತಿಕತೆ ಇದೆ' ಎಂದು ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸಿದ್ದರಾಮಯ್ಯ ಪ್ರಶ್ನಿಸಿದರು.

ಪ್ರತಿಕ್ರಿಯೆಗಾಗಿ ಸುಮಲತಾ ಅವರಿಗೆ ಹಲವು ಬಾರಿ ಕರೆ ಮಾಡಿದರೂ ಅವರು ಸ್ವೀಕರಿಸಲಿಲ್ಲ, ಅವರ ಬೆಂಬಲಿಗರೂ ಸಂಪರ್ಕಕ್ಕೆ ಸಿಗಲಿಲ್ಲ.

'ಮನೆ ಕಟ್ಟಲಿಲ್ಲ, ವಾಸ್ತವ್ಯ ಹೂಡಲಿಲ್ಲ'

ಸುಮಲತಾ

'ದಿಶಾ' ಸಭೆಯನ್ನಷ್ಟೆ ನಡೆಸಿದ ಅವರು, ಜನರನ್ನು ಸಂಪರ್ಕಿಸುವ ಯಾವುದೇ ಕಾರ್ಯಕ್ರಮ ಮಾಡಲಿಲ್ಲ. ಒಂದು ದಿನವೂ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ವಾಸ್ತವ್ಯ ಹೂಡಲಿಲ್ಲ, ಮನೆ ಕಟ್ಟುತ್ತೇನೆಂದು ಹೇಳಿದವರು ಮನೆ ಮಾತನ್ನೇ ಎತ್ತಲಿಲ್ಲ, ಕಚೇರಿಗೆ ಕಾಲಿಡಲಿಲ್ಲ. ಕೇವಲ 'ಸಂದರ್ಶನ ಸಂಸದೆ' ರೀತಿ ಅವರು ಆಗಾಗ ಬಂದು-ಹೋಗುತ್ತಿದ್ದರು ಎಂಬ ಆರೋಪಗಳು ಸ್ಥಳೀಯರಲ್ಲಿವೆ.

'ಗೆದ್ದನಂತರ ನಮ್ಮ ಊರಿನಲ್ಲಿ ಕೃತಜ್ಞತಾ ಸಮಾವೇಶ ಮಾಡುವುದಾಗಿ ಮಾತು ಕೊಟ್ಟಿದ್ದರು. ನಮ್ಮ ಬೂತ್‌ನಲ್ಲಿ ಲೀಡ್ ಕೊಟ್ಟಿದ್ದೆವು. ಆದರೆ, ಅವರು ಮಾತು ಉಳಿಸಿಕೊಳ್ಳಲಿಲ್ಲ' ಎಂದು ಮಂಡ್ಯ ತಾಲ್ಲೂಕು ಆಲಕೆರೆ ಗ್ರಾಮದ ರೈತ ಮಹಿಳೆ ರಾಣಿ ರುದ್ರೇಶ್ ಹೇಳಿದರು.

ಮಂಡ್ಯ ಬಿಡಲು ಇಷ್ಟವಿಲ್ಲ: ಸುಮಲತಾ

ಬೆಂಗಳೂರು: 'ಮಂಡ್ಯ ಬಿಟ್ಟು ಬರಲು ನನಗೆ ಇಷ್ಟ ಇಲ್ಲ. ಬೆಂಬಲಿಗರೂ ಕೂಡಾ ಮಂಡ್ಯ ಬಿಟ್ಟು ಹೋಗಬಾರದು ಎಂದಿದ್ದಾರೆ. ಅಲ್ಲಿ ಬಿಜೆಪಿಯ ಗೆಲುವಿಗೆ ಪೂರಕ ವಾತಾವರಣವಿದೆ' ಎಂದು ಸಂಸದೆ ಸುಮಲತಾ ಅಂಬರೀಷ್ ಇಲ್ಲಿ ಹೇಳಿದರು.

ತಮ್ಮ ನಿವಾಸದಲ್ಲಿ ಭಾನುವಾರ ನಡೆದ ಬೆಂಬಲಿಗರ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬೆಂಗಳೂರು ಉತ್ತರ ಕ್ಷೇತ್ರದಲ್ಲಿ ಸ್ಪರ್ಧಿಸಿದರೆ ಗೆಲ್ಲಬಹುದು. ಆದರೆ, ನನ್ನ ಆದ್ಯತೆ ಮಂಡ್ಯಕ್ಷೇತ್ರ. ಅಂಬರೀಷ್ ಅವರು 25 ವರ್ಷ ಮಂಡ್ಯದಲ್ಲೇ ರಾಜಕಾರಣ ಮಾಡಿಕೊಂಡು ಬಂದಿದ್ದು, ಹೀಗಾಗಿ ಮಂಡ್ಯ ಕ್ಷೇತ್ರವನ್ನು ಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದರು.

'ಸಾಮಾಜಿಕ ಜಾಲತಾಣದಲ್ಲಿ ಕೆಲವರು ಊಹಾಪೋಹಗಳನ್ನು ಹರಿಬಿಡುತ್ತಿದ್ದಾರೆ. ನಾವು ಎಲ್ಲರೂ ಪರಸ್ಪರ ವಿಶ್ವಾಸದಲ್ಲೇ ಇದ್ದೇವೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಪರ ಪ್ರಚಾರ ಮಾಡಿದ್ದೆ. ಚಿತ್ರ ನಟ ದರ್ಶನ್ ಅವರು ಕೂಡಾ ಜತೆಗೆ ಇರುವುದಾಗಿ ಹೇಳಿದ್ದಾರೆ. ಪ್ರಧಾನಿ ಮೋದಿ ದೇಶಕ್ಕಾಗಿ ಅತ್ಯುತ್ತಮ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರ ಬಗ್ಗೆ ಅಪಾರ ಗೌರವವಿದೆ. ಎಲ್ಲ ದೇಶಗಳ ನಾಯಕರೂ ಅವರಿಗೆ ಗೌರವ ನೀಡುತ್ತಾರೆ. ವಿಶ್ವಗುರುವಿನ ಸ್ಥಾನದಲ್ಲಿದ್ದಾರೆ. ದೇಶದ ಮುನ್ನಡೆಯ ಕೀರ್ತಿ ಅವರಿಗೆ ಸಲ್ಲುತ್ತದೆ' ಎಂದು ಸುಮಲತಾ ಹೇಳಿದರು.

ಸುದ್ದಿ 2 ನಿಮಿಷ

ಕೊಪ್ಪಳ ಲೋಕಸಭಾ ಕ್ಷೇತ್ರ ಇಕ್ಬಾಲ್ ಅನ್ಸಾರಿ ಅಸಮಾಧಾನ

ಕೊಪ್ಪಳ: ಲೋಕಸಭಾ ಚುನಾವಣೆಗೆ ಕೆಲ ದಿನಗಳಷ್ಟೇ ಬಾಕಿಯಿರುವ ಹೊತ್ತಿನಲ್ಲಿ ಜಿಲ್ಲೆಯ ಗಂಗಾವತಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್‌ನಲ್ಲಿ ಅಸಮಾಧಾನ ಸ್ಫೋಟಗೊಂಡಿದೆ.

ಸ್ವಪಕ್ಷದ ನಾಯಕರ ವಿರುದ್ಧ ಇಷ್ಟು ದಿನ ಪರೋಕ್ಷ ವಾಗ್ದಾಳಿ ನಡೆಸುತ್ತಿದ್ದ ಮಾಜಿ ಸಚಿವ ಇಕ್ಬಾಲ್ ಅನ್ಸಾರಿ ಈಗ ಬಹಿರಂಗವಾಗಿಯೇ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಆಡಿಯೊ ಬಿಡುಗಡೆ ಮಾಡಿರುವ ಅವರು, '2023ರ ವಿಧಾನಸಭಾ ಚುನಾವಣೆಯಲ್ಲಿ ಗಂಗಾವತಿ ಕ್ಷೇತ್ರದಿಂದ ನಾನು ಸೋಲಲು ನಮ್ಮ ಪಕ್ಷದವರೇ ಕಾರಣ' ಎಂದು ಆರೋಪಿಸಿದ್ದಾರೆ.

'ಕಾಂಗ್ರೆಸ್‌ನಲ್ಲಿದ್ದುಕೊಂಡೇ ನನ್ನ ವಿರುದ್ಧ ಕೆಲಸ ಮಾಡಿದವರ ಕುತಂತ್ರದಿಂದಾಗಿ ಸೋಲಾಗಿದೆ. ಇದನ್ನು ಇಲ್ಲಿಗೆ ಬಿಡುವುದಿಲ್ಲ. ಮುಸ್ಲಿಂ ಸಮಾಜದ ವ್ಯಕ್ತಿ ಗೆಲ್ಲಬಾರದು ಎಂದು ಪಕ್ಷದ ಬ್ಲಾಕ್ ಘಟಕದ ಅಧ್ಯಕ್ಷ, ಗಂಗಾವತಿ ಹಾಗೂ ಕೊಪ್ಪಳದ ಮುಖಂಡರು ಸೇರಿಯೇ ಸೋಲಿನ ಬಲೆ ಹೆಣೆದಿದ್ದಾರೆ. ಮುಂಬರುವ ಚುನಾವಣೆಗೆ ಅವರಿಗೆಲ್ಲ ತಕ್ಕ ಪಾಠ ಕಲಿಸುತ್ತೇನೆ. ಮುಸ್ಲಿಂ ಸಮುದಾಯದವರ ಮನೆಮನೆಗೆ ಹೋಗಿ ಸೋಲಿಸಿದವರ ಕಥೆ ಹೇಳುತ್ತೇನೆ' ಎಂದಿದ್ದಾರೆ.

ವಿಧಾನಮಂಡಲ ಅಧಿವೇಶನ ಬುಧವಾರದವರೆಗೆ ವಿಸ್ತರಣೆ

ಬೆಂಗಳೂರು: ಸುರಪುರ ಶಾಸಕ ರಾಜಾ ವೆಂಕಟಪ್ಪ ನಾಯಕ ಅವರು ನಿಧನರಾಗಿರುವ ಕಾರಣದಿಂದ ವಿಧಾನಮಂಡಲ ಅಧಿವೇಶನವು ಬುಧವಾರದವರೆಗೆ ವಿಸ್ತರಣೆಯಾಗಲಿದೆ.

ಬಜೆಟ್ ಮೇಲಿನ ಚರ್ಚೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೋಮವಾರ ಉತ್ತರ ನೀಡಬೇಕಿತ್ತು. ಆ ಬಳಿಕ ಬಜೆಟ್ ಮತ್ತು ಪ್ರಸಕ್ತ ವರ್ಷದ ಪೂರಕ ಅಂದಾಜುಗಳಿಗೆ ಒಪ್ಪಿಗೆ ಪಡೆದು, ಅಧಿವೇಶನವನ್ನು ಮುಕ್ತಾಯಗೊಳಿಸಲು ತೀರ್ಮಾನಿಸಲಾಗಿತ್ತು.

ವೆಂಕಟಪ್ಪ ನಾಯಕ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಬಳಿಕ ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಸಿದ್ದರಾಮಯ್ಯ, 'ಹಾಲಿ ಶಾಸಕ ನಿಧನರಾಗಿರುವುದರಿಂದ ಸೋಮವಾರದ ಅಧಿವೇಶನವನ್ನು ಸಂತಾಪ ಸೂಚಕವಾಗಿ ಒಂದು ದಿನ ಮುಂದೂಡಲಾಗುವುದು. ಮಂಗಳವಾರ ರಾಜ್ಯಸಭಾ ಚುನಾವಣೆ ಇರುವುದರಿಂದ ಕಲಾಪ ನಡೆಯುವುದಿಲ್ಲ, ಬುಧವಾರಕ್ಕೆ ಅಧಿವೇಶನ ಮುಂದೂಡಬೇಕಾಗುತ್ತದೆ' ಎಂದರು.

3–4 ದಿನಗಳಲ್ಲಿ ಬಿಜೆಪಿ ಪಟ್ಟಿ

ಪ್ರಜಾವಾಣಿ ವಾರ್ತೆ

ಬಿ.ಎಸ್. ಯಡಿಯೂರಪ್ಪ

ಚಿಕ್ಕಮಗಳೂರು: ಲೋಕಸಭೆ ಚುನಾವಣೆಯ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಇನ್ನು ಮೂರ್ನಾಲ್ಕು ದಿನಗಳಲ್ಲಿ ಬಿಡುಗಡೆಯಾಗಲಿದೆ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದ 28 ಕ್ಷೇತ್ರ ಗಳಲ್ಲೂ ನಮ್ಮ ಅಭ್ಯರ್ಥಿಗಳು ಗೆಲ್ಲುವ ವಾತಾವರಣ ಇದೆ. ಸಣ್ಣಪುಟ್ಟ ಗೊಂದಲಗಳು ಪರಿಹಾರವಾಗಲಿವೆ. ಮಂಡ್ಯ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಬಗ್ಗೆ ಚರ್ಚೆಯಾಗಿಲ್ಲ. ಎರಡು ದಿನಗಳಲ್ಲಿ ಎಲ್ಲವೂ ಗೊತ್ತಾಗಲಿದೆ' ಎಂದರು.

'ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಿರುದ್ಧ ಪತ್ರ ಚಳವಳಿ ಹಿಂದೆ ವ್ಯವಸ್ಥಿತ ಪಿತೂರಿ ಇದೆ. ಯಾರು ಮಾಡಿಸುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ. ಇದಕ್ಕೆಲ್ಲ ಅವರು ಧೃತಿಗೆಡುವುದಿಲ್ಲ. ಕೇಂದ್ರ ಸಚಿವೆಯಾಗಿ ಉತ್ತಮ ಕೆಲಸ ಮಾಡಿದ್ದಾರೆ. ಕಳೆದ ಬಾರಿಗಿಂತ ಹೆಚ್ಚು ಮತಗಳ ಅಂತರದಲ್ಲಿ ಗೆಲುವು ಸಾಧಿಸುತ್ತಾರೆ. ಈ ಬಗ್ಗೆ ಅನುಮಾನ ಬೇಡ' ಎಂದು ಸ್ಪಷ್ಟಪಡಿಸಿದರು.

ಮಾರ್ಚ್ 10ರೊಳಗೆ ಕಾಂಗ್ರೆಸ್ ಪಟ್ಟಿ

ತುಮಕೂರು: ಲೋಕಸಭಾ ಚುನಾವಣೆಗೆ ಸ್ಪರ್ಧಿಸುವ ಕಾಂಗ್ರೆಸ್ ಅಭ್ಯರ್ಥಿಗಳ ಪಟ್ಟಿ ಮಾರ್ಚ್ 10ರ ಒಳಗೆ ಘೋಷಣೆಯಾಗುವ ನಿರೀಕ್ಷೆ ಇದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಭಾನುವಾರ ತುಮಕೂರಿನಲ್ಲಿ ತಿಳಿಸಿದ್ದಾರೆ.

ಮಾದಾರ ಶ್ರೀ ಸ್ಪರ್ಧೆ ಬಗ್ಗೆ ಚರ್ಚೆಯಾಗಿಲ್ಲ

ಚಿತ್ರದುರ್ಗ: 'ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಮಾದಾರ ಚನ್ನಯ್ಯ ಸ್ವಾಮೀಜಿಯವರನ್ನು ಚಿತ್ರದುರ್ಗ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ' ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ರಾಜ್ಯ ಸಚಿವ ಎ.ನಾರಾಯಣಸ್ವಾಮಿ ಸ್ಪಷ್ಟಪಡಿಸಿದರು.

'ಬಿಜೆಪಿಯ ಯಾವ ನಾಯಕರೂ ಮಾದಾರ ಶ್ರೀ ಅವರನ್ನು ಭೇಟಿ ಮಾಡಿ ರಾಜಕೀಯಕ್ಕೆ ಬರುವಂತೆ ಆಹ್ವಾನ ನೀಡಿಲ್ಲ. ಚಿತ್ರದುರ್ಗ ಲೋಕಸಭಾ ಕ್ಷೇತ್ರದಿಂದ ಯಾರನ್ನು ಕಣಕ್ಕಿಳಿಸಬೇಕು ಎಂಬುದರ ಬಗ್ಗೆ ಇನ್ನೂ ಚರ್ಚೆಯೇ ಆಗಿಲ್ಲ' ಎಂದು ಸುದ್ದಿಗಾರರಿಗೆ ಭಾನುವಾರ ತಿಳಿಸಿದರು.

'ಮಾದಾರ ಚನ್ನಯ್ಯ ಮಠವು ಜಾತ್ಯತೀತವಾಗಿರಬೇಕು ಎಂಬುದು ನಮ್ಮೆಲ್ಲರ ಆಸೆ. ರಾಜಕೀಯಕ್ಕಾಗಿ ಈ ಮಠವನ್ನು ಬಳಸಿಕೊಳ್ಳಬಾರದು. ಈ ಮಠ ಯಾವುದೇ ಒಂದು ಪಕ್ಷಕ್ಕೆ ಸೀಮಿತವಾಗಿಲ್ಲ. ಇಡೀ ಸಮಾಜಕ್ಕೆ ಮಾರ್ಗದರ್ಶನ ನೀಡುವಂತಹ ಮಠವಾಗಿ ಬೆಳೆಯಬೇಕು ಎಂಬುದು ನಮ್ಮೆಲ್ಲರ ಆಶಯ' ಎಂದರು.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರಿಗೆ ತಮ್ಮ ಪಕ್ಷದ ಶಾಸಕರ ಮೇಲೆ ನಂಬಿಕೆಯೇ ಇಲ್ಲ. ರಾಜ್ಯಸಭಾ ಚುನಾವಣೆ ಹಿನ್ನೆಲೆಯಲ್ಲಿ ಅವರಲ್ಲಿ ಸೋಲಿನ ಭೀತಿ ಶುರುವಾಗಿದೆ. ಈ ಕಾರಣಕ್ಕೆ ತಮ್ಮ ಶಾಸಕರನ್ನು ರೆಸಾರ್ಟ್‌ಗಳಿಗೆ ಕರೆದೊಯ್ಯುತ್ತಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿ ಅಭ್ಯರ್ಥಿ ಗೆಲ್ಲುವುದು ನಿಶ್ಚಿತ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್‌ಗೆ ಕುಮಾರ್ ಸೇರ್ಪಡೆ ವದಂತಿ: ಪ್ರತಿಕ್ರಿಯೆಗೆ ನಿರಾಕರಣೆ

ಪ್ರಜಾವಾಣಿ ವಾರ್ತೆ

ಬೀರೂರು (ಚಿಕ್ಕಮಗಳೂರು): ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರು ಕಾಂಗ್ರೆಸ್ ಸೇರಲಿದ್ದಾರೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಲು ಸಚಿವ ಮಧು ಬಂಗಾರಪ್ಪ ನಿರಾಕರಿಸಿದರು.

'ನಿಮ್ಮ ಸಹೋದರ ಕುಮಾರ್ ಬಂಗಾರಪ್ಪ ಕಾಂಗ್ರೆಸ್ ಸೇರಿ ಶಿವಮೊಗ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗುವ ವದಂತಿ ಹರಡಿದೆಯಲ್ಲ' ಎಂದು ಭಾನುವಾರ ಇಲ್ಲಿ ಪತ್ರಕರ್ತರು ಪ್ರಶ್ನಿಸಿದರು.

'ಕುಮಾರ್ ಬಂಗಾರಪ್ಪ ಅವರನ್ನು ಕಾಂಗ್ರೆಸ್‌ಗೆ ಕರೆತರುವ ಪ್ರಯತ್ನ ನಡೆದಿದೆ' ಎಂದು ಕಾಂಗ್ರೆಸ್ ಶಾಸಕ ಗೋಪಾಲಕೃಷ್ಣ ಬೇಳೂರು ಶನಿವಾರ ಹೇಳಿಕೆ ನೀಡಿದ್ದರು.

ಕುಮಾರ್ ಬಂಗಾರಪ್ಪ ಬಿಜೆಪಿ ಬಿಡಲ್ಲ: 'ಮಾಜಿ ಸಚಿವ ಕುಮಾರ್ ಬಂಗಾರಪ್ಪ ಅವರು ಬಿಜೆಪಿ ತೊರೆಯುವ ಪ್ರಶ್ನೆಯೇ ಇಲ್ಲ' ಎಂದು ಸಂಸದ ಬಿ.ವೈ. ರಾಘವೇಂದ್ರ ಸ್ಪಷ್ಟಪಡಿಸಿದರು.

'ಪುತ್ರನ ಸಿನಿಮಾ ಚಿತ್ರೀಕರಣಕ್ಕಾಗಿ ಅವರು ಹೆಚ್ಚಿನ ಸಮಯ ಮೀಸಲಿಟ್ಟಿದ್ದಾರೆ. ಆದ್ದರಿಂದ ಪಕ್ಷದ ಕೆಲಸಗಳು ಹಾಗೂ ಕಾರ್ಯಕ್ರಮಗಳಲ್ಲಿ ಕಾಣಿಸಿಕೊಳ್ಳುತ್ತಿಲ್ಲ. ಲೋಕಸಭೆ ಚುನಾವಣೆಯ ಪ್ರಚಾರ ಕಾರ್ಯದಲ್ಲಿ ಅವರು ಶೀಘ್ರವೇ ಪಾಲ್ಗೊಳ್ಳಲಿದ್ದಾರೆ' ಎಂದು ಸುದ್ದಿಗಾರರಿಗೆ ಭಾನುವಾರ ಹೇಳಿದರು.

ಅನುದಾನ ತಾರತಮ್ಯ: ಚುನಾವಣಾ ಗಿಮಿಕ್

ಪ್ರಜಾವಾಣಿ ವಾರ್ತೆ

ಜಗದೀಶ ಶೆಟ್ಟರ್

ಹುಬ್ಬಳ್ಳಿ: 'ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರ ಅನುದಾನ ತಾರತಮ್ಯದ ಹೆಸರಿನಲ್ಲಿ ಸುಳ್ಳು ಹೇಳುತ್ತಿದೆ. ಕೇಂದ್ರದಲ್ಲಿ ಯುಪಿಎ ಸರ್ಕಾರ ಇದ್ದಿದ್ದರೆ ಸಿದ್ದರಾಮಯ್ಯ ಅನುದಾನ ತಾರತಮ್ಯದ ಬಗ್ಗೆ ಮಾತನಾಡುತ್ತಿರಲಿಲ್ಲ' ಎಂದು ಬಿಜೆಪಿ ಮುಖಂಡ ಜಗದೀಶ ಶೆಟ್ಟರ್ ಟೀಕಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಮೋದಿ ಅತ್ಯಂತ ಜನಪ್ರಿಯ ನಾಯಕರಾಗಿದ್ದು, 10 ವರ್ಷ ಉತ್ತಮ ಆಡಳಿತ ನೀಡಿದ್ದನ್ನು ಇವರಿಗೆ ಸಹಿಸಲಾಗುತ್ತಿಲ್ಲ, ಹೀಗಾಗಿಯೇ ಅಧಿಕಾರಕ್ಕೆ ಬಂದು ಇಷ್ಟು ಸಮಯವಾದ ನಂತರ ಈಗ ಆರೋಪ ಮಾಡುತ್ತಿದ್ದಾರೆ' ಎಂದು ದೂರಿದರು.

'ಅನುದಾನ ನೀಡಿಕೆ ಬಗ್ಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ ನೀಡಿದ್ದಾರೆ. ನೀತಿ ಆಯೋಗದಲ್ಲಿ ರಾಜ್ಯದ ಹಣಕಾಸು ಮಂತ್ರಿ ಇರುವುದರಿಂದ ಅಲ್ಲಿ ಪ್ರಶ್ನಿಸಲಿ. ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕಾಂಗ್ರೆಸ್ ಸಂಸದರು ಲೋಕಸಭೆಯಲ್ಲಿ ಧ್ವನಿ ಎತ್ತಲಿಲ್ಲ. ಕಾನೂನು ಪ್ರಕಾರ ಹೋರಾಡುವುದು ಬಿಟ್ಟು ಕೇಂದ್ರದ ವಿರುದ್ಧ ಎರಡು ನಿರ್ಣಯ ಕೈಗೊಂಡಿದ್ದು ಪ್ರಜಾತಂತ್ರ ವ್ಯವಸ್ಥೆಗೆ ಕೊಡಲಿ ಏಟು ಬಿದ್ದಂತಾಗಿದೆ' ಎಂದರು.

'ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರು ಇದ್ದಾಗ ಕಾಂಗ್ರೆಸ್ ಪರಿಸ್ಥಿತಿ ಏನಿತ್ತು ಎಂಬುದನ್ನು ಸಿದ್ದರಾಮಯ್ಯ ತಿಳಿದುಕೊಳ್ಳಬೇಕು. ಆಗ, ಕಾಂಗ್ರೆಸ್‌ನಲ್ಲಿ ಇದ್ದದ್ದು ಒಬ್ಬರೇ ಗಂಡಸು, ಅದು ಇಂದಿರಾ ಎಂಬ ಜೋಕ್ ಇತ್ತು. ದೇಶದಲ್ಲಿ ಸಿದ್ದರಾಮಯ್ಯ ಅವರದ್ದೇ ಕೊನೆಯ ಕಾಂಗ್ರೆಸ್ ಸರ್ಕಾರ. ಮುಂದೆ ಕಾಂಗ್ರೆಸ್ ಸರ್ಕಾರ ಬರಲ್ಲ' ಎಂದು ಶೆಟ್ಟರ್ ಟೀಕೆ ಮಾಡಿದರು.

ನಿರ್ಣಯ ಕೈಗೊಂಡಿದ್ದೇವೆ: ಶಾಸಕ ಬಸವರಾಜ ಬೊಮ್ಮಾಯಿ ನಗರದಲ್ಲಿ ಮಾತನಾಡಿ, 'ಕೇಂದ್ರದ ವಿರುದ್ಧ ರಾಜ್ಯ ಸರ್ಕಾರ ಕೈಗೊಂಡ ನಿರ್ಣಯಕ್ಕೆ ನಾವೂ ಪ್ರತಿ ನಿರ್ಣಯ ಮಾಡಿದ್ದೇವೆ. ಯುಪಿಎ ಸರ್ಕಾರದ ಅವಧಿಯಲ್ಲಿ ರಾಜ್ಯಕ್ಕಾದ ಅನ್ಯಾಯದ ಬಗ್ಗೆ ನಾವೂ ಅಂಕಿ–ಸಂಖ್ಯೆ ಬಿಡುಗಡೆ ಮಾಡುತ್ತೇವೆ' ಎಂದರು.

ಡಾ.ಮಹಾಜಬೀನಗೆ ರೇಣುಕಾಚಾರ್ಯ ಪ್ರಶಸ್ತಿ

ಬಾಳೆಹೊನ್ನೂರು (ಚಿಕ್ಕಮಗಳೂರು): ರೇಣುಕಾಚಾರ್ಯ ಜಯಂತಿ, ಮಹಾ ರಥೋತ್ಸವದ ಅಂಗವಾಗಿ ಪ್ರತಿವರ್ಷ ನೀಡುವ 'ಶ್ರೀ ಜಗದ್ಗುರು ರೇಣುಕಾಚಾರ್ಯ ಪ್ರಶಸ್ತಿ'ಯನ್ನು ಈ ವರ್ಷ ಬಾಗಲಕೋಟೆಯ ಅಂಗವಿಕಲ ವೈದ್ಯೆ ಡಾ.ಮಹಾಜಬೀನ ಎಸ್. ಮಧುರಕರ ಅವರಿಗೆ ಪ್ರದಾನ ಮಾಡಲಾಗುವುದು ಎಂದು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ತಿಳಿಸಿದರು. 'ಅಂಗವಿಕಲರಿಗಾಗಿ ವಿಶೇಷ ಸೇವೆ ಸಲ್ಲಿಸಿರುವುದನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಪ್ರಶಸ್ತಿಯು ಸ್ಮರಣಿಕೆ ಹಾಗೂ ₹1 ಲಕ್ಷ ನಗದು ಒಳಗೊಂಡಿದೆ. ಮಾ.22ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಹೇಳಿದರು

ಅನಂತಕುಮಾರ ಹೆಗಡೆ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಕಾರವಾರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಏಕವಚನದಿಂದ ನಿಂದಿಸುವ ಜತೆಗೆ ಅಪಮಾನಕರ ಮಾತುಗಳನ್ನಾಡಿದ ಕಾರಣಕ್ಕೆ ಸಂಸದ ಅನಂತಕುಮಾರ ಹೆಗಡೆ ವಿರುದ್ಧ ಮುಂಡಗೋಡ ಠಾಣೆ ಪೊಲೀಸರು ಶನಿವಾರ ರಾತ್ರಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪಾಳಾದಲ್ಲಿ ಶುಕ್ರವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ್ದ ಅನಂತಕುಮಾರ ಹೆಗಡೆ ಅವರು ಸಿದ್ದರಾಮಯ್ಯ ಅವರನ್ನು 'ಸಿದ್ರಾಮುಲ್ಲಾ ಖಾನ್' ಎಂದು ಕರೆದಿದ್ದರು. ಅಲ್ಲದೆ ದೆಹಲಿಯಲ್ಲಿ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಖಾಲಿಸ್ತಾನಿಗಳೆಂದು ಹೇಳಿದ್ದರು.

'ಧಾರ್ಮಿಕ, ಸಾಮಾಜಿಕವಾಗಿ ಅಪಮಾನಕರ ಮಾತುಗಳನ್ನಾಡಿರುವ ಹಿನ್ನೆಲೆಯಲ್ಲಿ ಸಂಸದರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ವಿಷ್ಣುವರ್ಧನ್ ತಿಳಿಸಿದ್ದಾರೆ.

ಕೆಲ ದಿನಗಳ ಹಿಂದಷ್ಟೆ ಕುಮಟಾದಲ್ಲಿ ನಡೆದಿದ್ದ ಸಭೆಯಲ್ಲಿಯೂ ಅನಂತಕುಮಾರ ಹೆಗಡೆ ಅವರು ಪ್ರಚೋದನಕಾರಿ ಮಾತನಾಡಿದ್ದಕ್ಕೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು.

> **ಸಂವಿಧಾನ ಬದಲಿಸುತ್ತೇವೆ, ಜನ ಅದಕ್ಕಾಗಿಯೇ ನಮಗೆ ವೋಟು ಹಾಕಿರೋದು ಎಂದು ಹೇಳಿದ್ದ ಸಂಸದ ಅನಂತ್‌ಕುಮಾರ್ ಹೆಗಡೆ ಮನುಷ್ಯನೇ ಅಲ್ಲ**
> **ಕೆ.ಎನ್.ರಾಜಣ್ಣ,** ಸಚಿವ

ಧರ್ಮದ ಹೆಸರಿನಲ್ಲಿ ರಾಜಕೀಯ ಜನ ಒಪ್ಪಲ್ಲ: ಯತೀಂದ್ರ ಸಿದ್ದರಾಮಯ್ಯ

ಗದಗ: 'ಯಾರು ಯಾವ ಸಮುದಾಯಕ್ಕೋಸ್ಕರವಾಗಿ ಹೆಚ್ಚು ಕೆಲಸ ಮಾಡುತ್ತಾರೋ ಅವರನ್ನು ಒಂದು ಸಮುದಾಯದ ಪರ ಅಂತ ಬಿಂಬಿಸುವುದು ಬಿಜೆಪಿ ನಾಯಕರ ಹಳೆಯ ವರಸೆ' ಎಂದು ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಸಂಸದ ಅನಂತಕುಮಾರ್ ಹೆಗಡೆ ಅವರು ಸಿಎಂಗೆ 'ಸಿದ್ರಾಮುಲ್ಲಾಖಾನ್' ಎಂದು ಕರೆದಿದ್ದಕ್ಕೆ ನಗರದಲ್ಲಿ ಭಾನುವಾರ ಪ್ರತಿಕ್ರಿಯಿಸಿದರು.

'ಸಂಸದ ಅನಂತ ಕುಮಾರ್ ಹೆಗಡೆ ಐದು ವರ್ಷಗಳ ಕಾಲ ಏನೂ ಕೆಲಸ ಮಾಡಿಲ್ಲ, ಜನರ ಮುಂದೆ ಬಂದಿಲ್ಲ. ಸಂಸತ್ತಿನಲ್ಲಿ ಒಂದು ಪ್ರಶ್ನೆಯನ್ನೂ ಕೇಳಿಲ್ಲ. ಈಗ ಚುನಾವಣೆ ಬಂದಿದೆ ಅಂತ ಹಿಂದೂ ಮುಸ್ಲಿಂ ಸಮುದಾಯಗಳ ಮಧ್ಯೆ ಭಿನ್ನಾಭಿಪ್ರಾಯ ಹುಟ್ಟುಹಾಕಲು ಮಾತನಾಡುತ್ತಿದ್ದಾರೆ' ಎಂದು ದೂರಿದರು.

'ಧರ್ಮದ ಹೆಸರಿನಲ್ಲಿ ರಾಜಕೀಯ ಮಾಡುವುದನ್ನು ಜನರು ಎಂದಿಗೂ ಒಪ್ಪುವುದಿಲ್ಲ. ಕರ್ನಾಟಕದ ಜನರ ಪರ ಒಂದೇ ಒಂದು ಪ್ರಶ್ನೆ ಕೇಳದ ಅನಂತ ಕುಮಾರ್ ಅವರಿಗೆ ಜನರು ಬುದ್ಧಿ ಕಲಿಸುತ್ತಾರೆ' ಎಂದರು.



ಮಂಗಳೂರಿನಲ್ಲಿ ಭಾನುವಾರ ಬಿಡುಗಡೆಗೊಂಡ ಯಕ್ಷಗಾನದ ಅಂಚೆ ಚೀಟಿ

'ಕೈ' ಶಾಸಕರು ಇಂದು ಹೋಟೆಲ್‌ಗೆ

ಒಂದನೇ ಪುಟದಿಂದ

ಕೋರಮಂಗಲದ ಎಂಬೆಸಿ ಗಾಲ್ಫ್ ಲಿಂಕ್ಸ್ ಬ್ಯುಸಿನೆಸ್ ಪಾರ್ಕ್‌ನಲ್ಲಿರುವ ಹಿಲ್ಟನ್ ಹೋಟೆಲ್‌ನಲ್ಲಿ ಕಾಂಗ್ರೆಸ್‌ನ ಎಲ್ಲ ಶಾಸಕರ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಶಾಸಕಾಂಗ ಪಕ್ಷದ ಸಭೆ: ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಹಿಲ್ಟನ್ ಹೋಟೆಲ್‌ನಲ್ಲಿ ಸೋಮವಾರ ಸಂಜೆ 6 ಗಂಟೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಯಾವ ಶಾಸಕರು ಯಾವ ಅಭ್ಯರ್ಥಿಗೆ ಮತ ಚಲಾಯಿಸಬೇಕು ಎಂದು ಅಲ್ಲಿ ಅಖೈರುಗೊಳಿಸಲಾಗುತ್ತದೆ ಎಂದು ಮೂಲಗಳು ಹೇಳಿವೆ.

ರಾಜ್ಯಸಭೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳಾಗಿರುವ ಅಜಯ್ ಮಾಕನ್, ಸೈಯದ್ ನಾಸಿರ್ ಹುಸೇನ್ ಮತ್ತು ಜಿ.ಸಿ.ಚಂದ್ರಶೇಖರ್ ಕೂಡಾ ಸಭೆಯಲ್ಲಿ ಪಾಲ್ಗೊಳ್ಳುವರು. ಪ್ರತಿ ಶಾಸಕರಿಗೂ ಪ್ರಾಶಸ್ತ್ಯದ ಮತಗಳ ಹಂಚಿಕೆ ಪಟ್ಟಿಯನ್ನು ನೀಡಲು ತಯಾರಿ ನಡೆದಿದೆ.

ಸಚಿವರಿಗೆ ಹೊಣೆ: ಶಾಸಕರನ್ನು ಹೋಟೆಲ್‌ಗೆ ಕರೆತರುವ ಜವಾಬ್ದಾರಿಯನ್ನು ಬೈರತಿ ಸುರೇಶ್, ಕೃಷ್ಣ ಬೈರೇಗೌಡ ಸೇರಿದಂತೆ ಕೆಲವು ಸಚಿವರಿಗೆ ವಹಿಸಲಾಗಿದೆ. ಆಯಾ ಜಿಲ್ಲೆಯ ಕಾಂಗ್ರೆಸ್ ಶಾಸಕರು ಸೋಮವಾರ ಬೆಳಿಗ್ಗೆ ಕಡ್ಡಾಯವಾಗಿ ವಿಧಾನಸಭೆ ಕಲಾಪಕ್ಕೆ ಹಾಜರಾಗಿ, ಹೋಟೆಲ್ ತಲುಪುವಂತೆ ನಿಗಾ ಇರಿಸುವ ಹೊಣೆಯನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ನೀಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ, ಪಕ್ಷೇತರ ಶಾಸಕರಾದ ಲತಾ ಮಲ್ಲಿಕಾರ್ಜುನ ಮತ್ತು ಕೆ.ಎಚ್. ಪುಟ್ಟಸ್ವಾಮಿಗೌಡ ಅವರನ್ನೂ ಹಿಲ್ಟನ್ ಹೋಟೆಲ್‌ಗೆ ಕರೆದೊಯ್ಯುವ ಕಸರತ್ತಿನಲ್ಲಿ ಕಾಂಗ್ರೆಸ್ ನಾಯಕರು ನಿರತರಾಗಿದ್ದಾರೆ.

ಟೆಂಡರ್ ತರಾತುರಿಗೆ ತಕರಾರು

ಒಂದನೇ ಪುಟದಿಂದ

ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ಹಾಗೂ ರಾಷ್ಟ್ರೀಯ ವನ್ಯಜೀವಿ ಮಂಡಳಿಯ ಒಪ್ಪಿಗೆ ಇಲ್ಲದೆ ಕಾಮಗಾರಿ ಆರಂಭಿಸಲಾಗದು. ಯೋಜನೆಗೆ ಅಗತ್ಯವಿರುವ ಜಮೀನುಗಳ ಸ್ವಾಧೀನ ಪ್ರಕ್ರಿಯೆಯೂ ಪೂರ್ಣಗೊಂಡಿಲ್ಲ. ಕಡ್ಡಾಯವಾಗಿ ಬೇಕಿರುವ ಅನುಮತಿ ಮತ್ತು ಭೂಸ್ವಾಧೀನದ ಕೊರತೆಯ ಮಧ್ಯೆಯೇ ಟೆಂಡರ್ ಪ್ರಕ್ರಿಯೆಯು ಶರವೇಗದಲ್ಲಿ ನಡೆಯುತ್ತಿದೆ.

ಅಸಲಿಗೆ ಸಿಕ್ಕಿದ್ದು ನಾಲ್ಕೇ ದಿನ: 'ಶರಾವತಿ ಪಂಪ್ಡ್ ಸ್ಟೋರೇಜ್' ಯೋಜನೆ ಕಾಮಗಾರಿಗಳಿಗೆ ಗುತ್ತಿಗೆದಾರರಿಂದ ಬಿಡ್ ಆಹ್ವಾನಿಸಿ ಫೆಬ್ರುವರಿ 2ರಂದು ಟೆಂಡರ್ ಪ್ರಕಟಿಸಲಾಗಿದೆ. ಆಸಕ್ತ ಗುತ್ತಿಗೆದಾರರು, ಯೋಜನೆಗೆ ಸಂಬಂಧಿಸಿದ ಸ್ಪಷ್ಟನೆಗಳನ್ನು ಕೇಳಲು ಫೆ. 9ರವರೆಗೂ ಅವಧಿ ಇತ್ತು. ಸ್ಪಷ್ಟನೆ ಬಯಸಿ 250ಕ್ಕೂ ಕೋರಿಕೆಗಳು ಸಲ್ಲಿಕೆಯಾಗಿದ್ದವು. ಫೆ.17ರಂದು ಕೆಪಿಸಿ ಸ್ಪಷ್ಟನೆಗಳನ್ನು ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿತ್ತು.

ಫೆ.21ರಂದು ಬಿಡ್ ಸಲ್ಲಿಕೆಗೆ ಕೊನೆಯ ದಿನ. ಕೆಪಿಸಿಯು ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಸ್ಪಷ್ಟನೆಗಳನ್ನು ಪ್ರಕಟಿಸುವವರೆಗೂ ಗುತ್ತಿಗೆದಾರರು ಬಿಡ್ ಸಲ್ಲಿಕೆಯ ನಿರ್ಧಾರಕ್ಕೆ ಬರಲು ಅಸಾಧ್ಯವಾಗಿತ್ತು. ಇದರಿಂದಾಗಿ ಕೊನೆಯ ನಾಲ್ಕು ದಿನಗಳಷ್ಟೇ ಬಿಡ್ ಸಲ್ಲಿಕೆಗೆ ಸಿಕ್ಕಿದೆ.

ತರಾತುರಿಯಲ್ಲಿ ಟೆಂಡರ್ ಕುರಿತ ಪ್ರಶ್ನೆಗಳಿಗೆ ಪ್ರತಿಕ್ರಿಯೆ ಪಡೆಯಲು ಇಂಧನ ಸಚಿವ ಕೆ.ಜೆ. ಜಾರ್ಜ್ ಸಂಪರ್ಕಕ್ಕೆ ಲಭ್ಯವಾಗಲಿಲ್ಲ. ಕೆಪಿಸಿ ವ್ಯವಸ್ಥಾಪಕ ನಿರ್ದೇಶಕರೂ ಆಗಿರುವ ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಅವರು, ದೂರವಾಣಿ ಕರೆಗಳಿಗೆ ಉತ್ತರಿಸಲಿಲ್ಲ. ವಾಟ್ಸ್ ಆ್ಯಪ್ ಮೂಲಕ ಕಳುಹಿಸಿದ ಪ್ರಶ್ನೆಗಳಿಗೂ ಉತ್ತರ ನೀಡಲಿಲ್ಲ.

ರಥೋತ್ಸವ

ಹಾಸನ ಜಿಲ್ಲೆ ಸಕಲೇಶಪುರದಲ್ಲಿ ಭಾನುವಾರ ಸಕಲೇಶ್ವರಸ್ವಾಮಿ ರಥೋತ್ಸವವು ಅಪಾರ ಭಕ್ತರ ಸಮ್ಮುಖದಲ್ಲಿ ನಡೆಯಿತು –ಪ್ರಜಾವಾಣಿ ಚಿತ್ರ

ಗ್ಯಾರಂಟಿಯ ಪ್ರಭಾವ ಎಂಬ ಆರೋಪ: ಹಲವು ಮನವಿ ಸಲ್ಲಿಸಿದರೂ ದೊರಕದ ಸ್ಪಂದನೆ

ಗೈಡ್‌ಗಳಿಗೆ 5 ತಿಂಗಳಿಂದ ಬಂದಿಲ್ಲ ಗೌರವಧನ

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿರುವ 151 ಮಂದಿ ಸಹಿತ ರಾಜ್ಯದ 398 ಪ್ರವಾಸಿ ಮಾರ್ಗದರ್ಶಿಗಳಿಗೆ ಕಳೆದ ಐದು ತಿಂಗಳುಗಳಿಂದ ಮಾಸಿಕ ₹ 5 ಸಾವಿರ ಗೌರವಧನ ಸಿಕ್ಕಿಲ್ಲ.

ಬಿರು ಬಿಸಿಲು ಆರಂಭವಾಗಿದ್ದು, ಪ್ರವಾಸಿಗರು ಸ್ಮಾರಕಗಳನ್ನು ನೋಡಲು ಬರುವ ಪ್ರಮಾಣ ಇಳಿಮುಖವಾಗತೊಡಗಿದೆ. ಮುಂದಿನ ತಿಂಗಳಿನಿಂದ ಪರೀಕ್ಷೆಗಳು ಆರಂಭವಾಗಲಿವೆ. ಮತ್ತೆ ಪ್ರವಾಸಿಗರು ಬರುವುದು ಆಗಸ್ಟ್ ನಂತರವೇ. ಹೀಗಾಗಿ ಸುಮಾರು ಆರು ತಿಂಗಳ ಕಾಲ ಸರ್ಕಾರ ನೀಡುವ ಗೌರವಧನವೇ ಅದೆಷ್ಟೋ ಮಂದಿಯ ಜೀವನಾಧಾರವಾಗಿದ್ದು, ಯಾವಾಗ ಅದು ಬರುತ್ತದೆ ಎಂಬ ಕಾತರದಲ್ಲಿ ಕುಟುಂಬವರಿದ್ದಾರೆ.

'2023ರ ಸೆಪ್ಟೆಂಬರ್‌ನಲ್ಲಿ ಪಡೆದ ಗೌರವಧನವೇ ಕೊನೆಯದು. ಬಳಿಕ ಸಂದಾಯವಾಗಿಯೇ ಇಲ್ಲ. ಸರ್ಕಾರಕ್ಕೆ ಸಾಕಷ್ಟು ಬಾರಿ ಮನವಿ ಸಲ್ಲಿಸಿದ್ದೇವೆ, ಆದರೂ ಹಣ ಬಿಡುಗಡೆ ಆಗಿಲ್ಲ' ಎಂದು ಕರ್ನಾಟಕ ರಾಜ್ಯ ಪ್ರವಾಸಿ ಮಾರ್ಗದರ್ಶಿಗಳ ಸಂಘದ ಅಧ್ಯಕ್ಷ ಜಿ.ಮಂಜುನಾಥ ಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ: 'ಬಜೆಟ್‌ಗಿಂತ ಮೊದಲಾಗಿ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ್ ಅವರನ್ನೂ ಭೇಟಿ ಮಾಡಿ ನಮ್ಮ ಕಷ್ಟ ಹೇಳಿಕೊಂಡಿದ್ದೇವೆ. ಗೌರವ ಧನವನ್ನು ಇನ್ನೂ ₹2 ಸಾವಿರ ಹೆಚ್ಚಿಸಬೇಕೆಂದು ಕೋರಿಕೆ ಸಲ್ಲಿಸಿದ್ದೇವೆ. ಬಜೆಟ್‌ನಲ್ಲಿ ನಮ್ಮ ಬೇಡಿಕೆಗೆ ಸ್ಪಂದನೆ ಸಿಕ್ಕಿಲ್ಲ. ನೀಡುತ್ತಿದ್ದ ಗೌರವಧನವನ್ನೇ ತಡೆಹಿಡಿದಿರುವುದರಿಂದ ನಮಗೆ ಬಹಳ ತೊಂದರೆಯಾಗಿದೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷ ವಿ.ಹಂಪಿ ಹೇಳಿದರು.

2023ರ ಜುಲೈನಲ್ಲೂ ಇದೇ ಸ್ಥಿತಿ ನೆಲೆಸಿತ್ತು. ಆಗ ನಾಲ್ಕು ತಿಂಗಳಿಂದ ಗೌರವಧನ ಸಿಕ್ಕಿರಲಿಲ್ಲ. ವಿಧಾನಸಭಾ ಚುನಾವಣೆ, ಫಲಿತಾಂಶ, ಜಿ–20 ಸಭೆಗಳ ಕಾರಣ ಗೌರವಧನ ನೀಡಿಕೆ ವಿಳಂಬವಾಗಿತ್ತು. 2023ರ ಜುಲೈ 27ರಂದು ಈ ಕುರಿತು 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾದ ಕೆಲವೇ ದಿನಗಳಲ್ಲಿ ಗೌರವಧನ ಬಿಡುಗಡೆಯಾ ಗಿತ್ತು. ಮತ್ತೆ ಮುಂದಿನ ಎರಡು ತಿಂಗಳಷ್ಟೇ ಗೌರವಧನ ಬಿಡುಗಡೆಯಾಗಿದ್ದು, ಅಕ್ಟೋಬರ್‌ನಿಂದೀಚೆಗೆ ಗೌರವಧನ ಸಿಕ್ಕಿಲ್ಲ.

2 ವರ್ಷದಿಂದ ಕಾಯುತ್ತಿದ್ದಾರೆ 56 ಮಂದಿ

ಪ್ರವಾಸಿ ಮಾರ್ಗದರ್ಶಕರಾಗಲು ಅಗತ್ಯವಿರುವ ತರಬೇತಿ ಪಡೆದು, ಅರ್ಹ ಮಾರ್ಗದರ್ಶಕರು ಎಂದು ಪ್ರವಾಸೋದ್ಯಮ ಇಲಾಖೆಯಿಂದಲೇ ಗುರುತಿಸಲಾಗಿರುವ ಹಂಪಿಯ 28 ಮಂದಿ ಪ್ರವಾಸಿ ಮಾರ್ಗದರ್ಶಿಗಳ ಸಹಿತ ರಾಜ್ಯದ 56 ಮಂದಿ ಕಳೆದ ಎರಡು ವರ್ಷಗಳಿಂದ ಈ ₹5 ಸಾವಿರ ಗೌರವಧನಕ್ಕಾಗಿ ಕಾಯುತ್ತಲೇ ಇದ್ದಾರೆ.

'ಸ್ಟೇಟ್ ಕಾರ್ಡ್ ಪಡೆದರೆ ಅವರ ಹೆಸರಲ್ಲೂ ಬಜೆಟ್‌ನಲ್ಲಿ ಹಣ ತೆಗೆದಿರಿಸುವ ಕೆಲಸ ಆಗಿಬಿಡುತ್ತದೆ. ಆದರೆ ಈ 56 ಮಂದಿಗೆ ಇನ್ನೂ ಸ್ಟೇಟ್ ಕಾರ್ಡ್ ವಿತರಿಸಿಲ್ಲ. ಸಂಘದ ವತಿಯಿಂದ ಈ ಬಗ್ಗೆಯೂ ಒತ್ತಾಯಿಸಲಾಗಿದೆ' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ವಿರೂಪಾಕ್ಷಿ ವಿ.ಹಂಪಿ ಹೇಳಿದರು.

> **ಇಡೀ ರಾಜ್ಯದ ಸಮಸ್ಯೆ ಇದು. ಇಲಾಖೆಯ ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಶೀಘ್ರ ಗೌರವಧನ ಬಿಡುಗಡೆಯಾಗುವ ವಿಶ್ವಾಸ ಇದೆ**
> **ಪ್ರಭುಲಿಂಗ ತಳಕೇರಿ,** ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ

> **ಗ್ಯಾರಂಟಿಗಳಿಂದಾಗಿ ಈ ಸ್ಥಿತಿ ಒದಗಿತೋ ಗೊತ್ತಿಲ್ಲ, ನಮ್ಮ ಕಷ್ಟವನ್ನೂ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಸ್ಪಂದಿಸದಿದ್ದರೆ ಹೋರಾಟ ಅನಿವಾರ್ಯವಾಗುತ್ತದೆ**
> **ಡಿ.ಕೆ. ರಾಮಕೃಷ್ಣ,** ಹಂಪಿ ಪ್ರವಾಸಿ ಮಾರ್ಗದರ್ಶಿ

ಶಾಸಕ ರಾಜಾ ವೆಂಕಟಪ್ಪ ನಾಯಕ ನಿಧನ

ರಾಜಾ ವೆಂಕಟಪ್ಪ ನಾಯಕ

ಯಾದಗಿರಿ: ಜಿಲ್ಲೆಯ ಸುರಪುರ ಕ್ಷೇತ್ರದ ಹಾಲಿ ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯಕ (67) ಹೃದಯಾಘಾತದಿಂದ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಭಾನುವಾರ ನಿಧನರಾದರು.

ಕಳೆದ 20 ದಿನಗಳಿಂದ ಮೈಸೂರು, ಬೆಂಗಳೂರು ಆಸ್ಪತ್ರೆಗಳಲ್ಲಿ ಚಿಕಿತ್ಸೆಗಾಗಿ ದಾಖಲಾಗಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ನಾಲ್ಕು ಬಾರಿ ಶಾಸಕ: ರಾಜಾ ವೆಂಕಟಪ್ಪ ನಾಯಕ ಅವರು ನಾಲ್ಕು ಬಾರಿ ಸುರಪುರ ಮತಕ್ಷೇತ್ರದಿಂದ ಆಯ್ಕೆಯಾಗಿದ್ದರು. ಕೆಲಕಾಲ ಜನತಾದಳದಲ್ಲಿ ಗುರುತಿಸಿಕೊಂಡಿದ್ದರು. 1994ರಲ್ಲಿ ಕರ್ನಾಟಕ ಕಾಂಗ್ರೆಸ್ ಪಾರ್ಟಿ (ಕೆಸಿಪಿ)ಯಿಂದ, 1999, 2013, 2023ರಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾದ್ದರು. 2004, 2008 ಮತ್ತು 2018ರಲ್ಲಿ ಪರಾಭವಗೊಂಡಿದ್ದರು. ಒಂದು ಬಾರಿ ರಾಯಚೂರು ಲೋಕಸಭಾ ಕ್ಷೇತ್ರಕ್ಕೂ ಸ್ಪರ್ಧಿಸಿ ಸೋತಿದ್ದರು. ಪ್ರಸ್ತುತ ಕಾಂಗ್ರೆಸ್ ಸರ್ಕಾರದಲ್ಲಿ ಕರ್ನಾಟಕ ಉಗ್ರಾಣ ನಿಗಮದ ಅಧ್ಯಕ್ಷರಾಗಿ ಕೆಲ ದಿನಗಳ ಹಿಂದೆ ಅಧಿಕಾರ ಸ್ವೀಕರಿಸಿದ್ದರು.

ಸೋಮವಾರ (ಫೆ.26) ಸಂಜೆ 4ಕ್ಕೆ ಸುರಪುರದ ವಾಲ್ಮೀಕಿ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನಿಧನ ಸುದ್ದಿ ತಿಳಿಯುತ್ತಿದ್ದಂತೆ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೃಷಿ ಮಾರುಕಟ್ಟೆ ಹಾಗೂ ಜವಳಿ ಸಚಿವ ಶಿವಾನಂದ ಪಾಟೀಲ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹಾಗೂ ಪಕ್ಷದ ಶಾಸಕರು ಭೇಟಿ ನೀಡಿ ಅಂತಿಮ ದರ್ಶನ ಪಡೆದರು.

ಪರ್ಕಳದ ಶ್ರೀ ಅಂಬಾಭವಾನಿ ಮರಾಠಿ ಸಾಂಸ್ಕೃತಿಕ ಕಲಾ ವೇದಿಕೆಯವರು ಪ್ರಸ್ತುತಪಡಿಸಿದ ಕರಾವಳಿ ಕಲಾ ವೈಭವ ನೃತ್ಯ ರೂಪಕ (ಎಡಚಿತ್ರ) ಹಗ್ಗಜಗ್ಗಾಟ –ಪ್ರಜಾವಾಣಿ ಚಿತ್ರಗಳು

‘ನಮ್ಮ ಕರಾವಳಿ ಉತ್ಸವ’ದಲ್ಲಿ ಕಡಲ ತಟದವರ ಸಂಸ್ಕೃತಿಯ ಅನಾವರಣ

ನಗರದಲ್ಲಿ ಕರಾವಳಿ ಪ್ರಭಾವಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾದ್ಯಮೇಳಕ್ಕೆ ತಕ್ಕಂತೆ ಹುಲಿ ವೇಷಧಾರಿಗಳು ಹೆಜ್ಜೆ ಹಾಕುತ್ತಿದ್ದರೆ, ನೋಡುಗರ ಮನದಲ್ಲೂ ಕುಣಿತದ ಭಾವ. ಒಂದೆಡೆ ‘ಹಗ್ಗಜಗ್ಗಾಟ’ ನಡೆಯುತ್ತಿದ್ದರೆ, ಮತ್ತೊಂದೆಡೆ ಮಹಿಳೆಯರು ಚುಕ್ಕಿ ಜೋಡಿಸುತ್ತಾ ರಂಗೋಲಿ ಬಿಡಿಸುವ ಸ್ಪರ್ಧೆಯಲ್ಲಿ ಮಗ್ನರಾಗಿದ್ದರು.. ಪ್ರಾಂಗಣದ ತುಂಬಾ ಕಡಲ ತಡಿಯ ಆಹಾರದ ಘಮ... ವೇದಿಕೆಯಲ್ಲಿ ತಾಳಮದ್ದಳೆ, ಯಕ್ಷಗಾನ, ನೃತ್ಯ, ಹಾಸ್ಯದ ರಸದೌತಣ...!

ಬೆಂಗಳೂರಿನ ಕರಾವಳಿಗರ ಒಕ್ಕೂಟ ಜೆ.ಪಿ. ನಗರದ ಆರ್‌ಬಿಐ ಲೇಔಟ್‌ನಲ್ಲಿರುವ ಬಿಬಿಎಂಪಿ ಆಟದ ಮೈದಾನದಲ್ಲಿ ಭಾನುವಾರ ಆಯೋಜಿಸಿದ್ದ 'ನಮ್ಮ ಕರಾವಳಿ ಉತ್ಸವ'ದಲ್ಲಿ ಕಂಡುಬಂದ ದೃಶ್ಯಗಳಿವು. ಆ ಆಟದ ಮೈದಾನದಲ್ಲಿ ಕರಾವಳಿಯ ಗ್ರಾಮೀಣ ಕಲೆ–ಸಂಸ್ಕೃತಿ ಅನಾವರಣಗೊಂಡಿತು.

ಬೆಂಗಳೂರಿನಲ್ಲಿ ನೆಲೆಸಿರುವ ಸಾವಿರಾರು ‘ಕರಾವಳಿ’ಗರು ಕಡಲ ತಡಿಯ ಹಬ್ಬದಲ್ಲಿ ಪಾಲ್ಗೊಂಡು, ಸಂಭ್ರಮಿಸಿದರು. ಮೇಳಕ್ಕೆ ಬಂದಿದ್ದ ಆಪ್ತೇಷ್ಟರೊಂದಿಗೆ ಊರಿನ ನೆನಪುಗಳನ್ನು ಮೆಲುಕು ಹಾಕಿದರು. ಉತ್ಸವವನ್ನು ಬಿಬಿಎಂಪಿ ವಿಶೇಷ ಆಯುಕ್ತ ಹರೀಶ್ ಕುಮಾರ್ ಉದ್ಘಾಟಿಸಿದರು.

ಬೆಳಿಗ್ಗೆಯಿಂದಲೇ ವಿವಿಧ ಸ್ಪರ್ಧೆಗಳು ನಡೆದವು. ‘ಹಗ್ಗ ಜಗ್ಗಾಟ’ ಸ್ಪರ್ಧೆ ನಡೆಯಿತು. ಮೇಳಕ್ಕೆ ಬಂದವರು ಸ್ಪರ್ಧೆಯಲ್ಲಿ ಅತ್ಯುತ್ಸಾಹದಿಂದ ಪಾಲ್ಗೊಂಡರು. ಅಲ್ಲಿ ಸ್ಪರ್ಧೆಗಿಂತ ಸಂಭ್ರಮವೇ ಹೆಚ್ಚಾಗಿತ್ತು. ಚುಕ್ಕಿ ರಂಗೋಲಿ ಸ್ಪರ್ಧೆಯಲ್ಲಿ ಮಹಿಳೆಯರು ವಿಶಿಷ್ಟ ರಂಗೋಲಿಗಳನ್ನು ಬಿಡಿಸಿದರು. ಮಡಕೆ ಒಡೆಯುವ ಸ್ಪರ್ಧೆ, ಹಲಸಿನ ಎಲೆಯಿಂದ ಕೊಟ್ಟೆ ಕಟ್ಟುವ ಸ್ಪರ್ಧೆಯಲ್ಲೂ ಸಂಭ್ರಮದಿಂದ ಪಾಲ್ಗೊಂಡರು.

ವೇದಿಕೆಯಲ್ಲಿ ನಡೆದ ‘ನಗೆ ಹಬ್ಬ’ದಲ್ಲಿ ಮನು ಹಂದಾಡಿ ಅವರ ಹಾಸ್ಯ ಚಟಾಕಿಗೆ ಜನರು ಬಿದ್ದು ಬಿದ್ದು ನಕ್ಕರು. ‘ಕಾಮಿಡಿ ಕಿಲಾಡಿಗಳು’ ಖ್ಯಾತಿಯ ರಾಕೇಶ್ ಪೂಜಾರಿ, ಹಾಸ್ಯಭರಿತ ನಟನೆಯೊಂದಿಗೆ ಪ್ರೇಕ್ಷಕರನ್ನು ರಂಜಿಸಿದರು. ಅಂಬಾಭವಾನಿ ಮರಾಠಿ ಸಾಂಸ್ಕೃತಿಕ ಕಲಾ ವೇದಿಕೆಯ ಪರ್ಕಳ ಅವರ ಕರಾವಳಿ ಕಲಾ ವೈಭವ ಪ್ರೇಕ್ಷಕರ ಮನಸೂರೆಗೊಂಡಿತು.

ಮನರಂಜನೆಯ ಜೊತೆಗೆ, ವೈವಿಧ್ಯಮಯ ತಿನಿಸುಗಳ ಆಹಾರ ಮೇಳ ಉತ್ಸವದ ಮತ್ತೊಂದು ಆಕರ್ಷಣೆ. ಕರಾವಳಿಯ ಸ್ವಾದಿಷ್ಟ ತಿನಿಸುಗಳನ್ನು ಪರಿಚಯಿಸುವ ಹತ್ತಾರು ಆಹಾರ ಮಳಿಗೆಗಳಿದ್ದವು. ಸಸ್ಯಾಹಾರಿ ಪ್ರಿಯರಿಗೆ, ಕೊಟ್ಟೆ ಕಡುಬು, ಗೋಳಿ ಬಜೆ, ನೀರ್ ದೋಸೆಯಂತಹ ಕರಾವಳಿಯ ಜನಪ್ರಿಯ ಖಾದ್ಯಗಳಿದ್ದವು. ಮಾಂಸಾಹಾರಿಗಳಿಗೆ ಕೋರಿ ರೊಟ್ಟಿ, ಸುಕ್ಕ, ಮೀನಿನ ಫ್ರೈನಂತಹ ಖಾದ್ಯಗಳಿದ್ದವು. ಸ್ಥಳೀಯ ಜನಪ್ರಿಯ ತಿಂಡಿ–ತಿನಿಸುಗಳು ಇದ್ದವು.

‘ಕರಾವಳಿ ಸಂಸ್ಕೃತಿ ಕಲೆಯನ್ನು ಬೆಂಗಳೂರಿನಲ್ಲಿ ಕಂಡು ಖುಷಿಯಾಯ್ತು. ಕರಾವಳಿಯ ಆಹಾರ ಬಹಳ ಇಷ್ಟವಾಯಿತು. ಇನ್ನಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಒಟ್ಟಾರೆ ಉತ್ಸವ ಖುಷಿಕೊಟ್ಟಿತು’ ಎಂದು ಜಯನಗರದ ಅಮಿತ ಸಂಭ್ರಮ ಹಂಚಿಕೊಂಡರು. ‘ನಮ್ಮ ಕರಾವಳಿಯ ಸಂಸ್ಕೃತಿಯನ್ನು ಅನಾವರಣಗೊಳಿಸುವ ಇಂಥ ಕಾರ್ಯಕ್ರಮಗಳು ಇನ್ನಷ್ಟು ಆಗಬೇಕು’ ಎಂದರು ಬನಶಂಕರಿಯ ಪ್ರವೀಣ್.

‘ಪ್ರಾದೇಶಿಕ ಉತ್ಸವಗಳು ಅಗತ್ಯ’

‘ಮೂಲ ಸೊಗಡನ್ನು ಮುಂದಿನ ಪೀಳಿಗೆಗೆ ವರ್ಗಾಯಿಸುವ ದೃಷ್ಟಿಯಿಂದ ಹಾಗೂ ಎಲ್ಲರನ್ನೂ ಒಳಗೊಳ್ಳುವ ಆಚರಣೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮಹಾನಗರಗಳಲ್ಲಿ ಪ್ರಾದೇಶಿಕ ಉತ್ಸವಗಳು ನಡೆಯಬೇಕು’ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಹರೀಶ್ ಕುಮಾರ್ ಅಭಿಪ್ರಾಯಪಟ್ಟರು.

ಭಾನುವಾರ ಜೆ.ಪಿ. ನಗರದ ಆರ್‌ಬಿಐ ಲೇಔಟ್ ಬಿಬಿಎಂಪಿ ಆಟದ ಮೈದಾನದಲ್ಲಿ ಕರಾವಳಿಗರ ಒಕ್ಕೂಟ ಆಯೋಜಿಸಿದ್ದ ‘ನಮ್ಮ ಕರಾವಳಿ ಉತ್ಸವ’ ಉದ್ಘಾಟಿಸಿ ಅವರು ಮಾತನಾಡಿದರು. ‘ಎಲ್ಲರನ್ನೂ ಒಳಗೊಳ್ಳುವ ಉತ್ಸವಗಳು, ಕಾರ್ಯಕ್ರಮಗಳು ನಡೆಯಬೇಕು’ ಎಂದರು.

ನಿವೃತ್ತ ಪೊಲೀಸ್ ಅಧಿಕಾರಿ ಜಿ.ಎ.ಬಾವಾ, ‘ರಾಜಕೀಯ ಕಾರಣಕ್ಕೆ ಕರಾವಳಿಯಲ್ಲಿ ವೈಮನಸ್ಸು ಉಂಟಾಗಲು ಅವಕಾಶ ಕೊಡಬಾರದು. ಹಿಂದಿನಿಂದ ನಮ್ಮಲ್ಲಿರುವ ಸೌಹಾರ್ದವನ್ನು ಹೆಚ್ಚು ಪೋಷಿಸುವ ಅಗತ್ಯವಿದೆ’ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕರಾವಳಿ ಒಕ್ಕೂಟದ ಗೌರವಾಧ್ಯಕ್ಷ ಸುರೇಶ್ ಜಿ.ಕೆ., ‘ಕರಾವಳಿಯ ಜನ ತಮ್ಮೂರನ್ನು ಬಿಟ್ಟು ಬಂದಾಗ ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಸಲಹೆ –ಸಹಕಾರ, ನೆರವು ನೀಡುವ ನಿಟ್ಟಿನಲ್ಲಿ ಸಂಘ ಮುಂದಿನ ದಿನಗಳಲ್ಲಿ ಕೆಲಸ ಮಾಡಲಿದೆ’ ಎಂದು ಹೇಳಿದರು.



‘ನಮ್ಮ ಕರಾವಳಿ ಉತ್ಸವ’ದಲ್ಲಿ ಹುಲಿವೇಷಧಾರಿಗಳು

ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಡಾ.ವೈ.ನವೀನ್ ಭಟ್, ಡಿಸಿಪಿ ಅಬ್ದುಲ್ ಅಹದ್, ಬಿಎಂಟಿಎಫ್ ಜಂಟಿ ಆಯುಕ್ತೆ ಗಾಯತ್ರಿ ನಾಯಕ್, ಕರಾವಳಿ ಒಕ್ಕೂಟದ ಅಧ್ಯಕ್ಷ ಕೆ. ಸುಬ್ರಾಯ ಭಟ್, ಉದ್ಯಮಿ ದಿನೇಶ ವೈದ್ಯ ಅಂಪಾರು, ಕಾರ್ಯದರ್ಶಿ ಚರಣ್ ಬೈಂದೂರು ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕಾರ್ಯಕ್ರಮದಲ್ಲಿ ‘ಎರ್ಸಿಕ್ಯಾಮ್–2024’ ಅಂತರರಾಷ್ಟ್ರೀಯ ಸಮ್ಮೇಳನ ಕುರಿತ ಪುಸ್ತಕ ಬಿಡುಗಡೆ ಮಾಡಲಾಯಿತು

ನಿಟ್ಟೆ ಮೀನಾಕ್ಷಿ ಕಾಲೇಜಿನಲ್ಲಿ ‘ಎರ್ಸಿಕ್ಯಾಮ್’

ಪ್ರಜಾವಾಣಿ ವಾರ್ತೆ

ಯಲಹಂಕ: ಆರೋಗ್ಯ, ಸುಸ್ಥಿರತೆ ಸೇರಿದಂತೆ ವಿವಿಧ ಕ್ಷೇತ್ರಗಳ ತಾಂತ್ರಿಕ ವಿಭಾಗವನ್ನು ಪರಿವರ್ತಿಸುವಲ್ಲಿ ಕೃತಕ ಬುದ್ಧಿಮತ್ತೆಯು ಮಹತ್ವದ ಪಾತ್ರ ವಹಿಸುತ್ತಿದೆ ಎಂದು ಗುಜರಾತಿನ ವಡೋದರದ ಜಿಎಸ್‌ಎಫ್‌ಸಿ ವಿಶ್ವವಿದ್ಯಾಲಯದ ಕುಲಪತಿ ಡಾ.ಜಿ. ಆರ್.ಸಿನ್ಹಾ ಅಭಿಪ್ರಾಯಪಟ್ಟರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಕಂಪ್ಯೂಟಿಂಗ್, ಮಾಹಿತಿ, ಸಂವಹನ, ಕೃತಕ ಬುದ್ಧಿಮತ್ತೆ ಹಾಗೂ ಮಿಷನ್ ಲರ್ನಿಂಗ್ ಕ್ಷೇತ್ರದಲ್ಲಿನ ನೂತನ ಸಂಶೋಧನೆಗಳ ಕುರಿತಾದ ‘ಎರ್ಸಿಕ್ಯಾಮ್–2024’ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘5ಜಿ’ ಮತ್ತು ‘6ಜಿ’ ತಂತ್ರಜ್ಞಾನದ ಕಾಲಘಟ್ಟದಲ್ಲಿದ್ದೇವೆ. ಇದರಿಂದ ಗ್ರಾಮೀಣ ಭಾರತದ ಆರೋಗ್ಯ ಕ್ಷೇತ್ರದಲ್ಲಿ ಎಐ ನೆರವು ಪಡೆಯುತ್ತಿದ್ದೇವೆ. ಇಂತಹ ಬೆಳವಣಿಗೆಯ ಸಂದರ್ಭದಲ್ಲಿ ಉದ್ಯಮ ಮತ್ತು ಶಿಕ್ಷಣವನ್ನು ಜೊತೆಗೆ ಕೊಂಡೊಯ್ಯುವುದು ಈ ಕ್ಷಣದ ಅಗತ್ಯವಾಗಿದೆ’ ಎಂದರು.

ಆಸ್ಟ್ರೇಲಿಯದ ಸ್ವಿನ್‌ಬರ್ನ್ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕಿ ಡಾನಾ ರೆಜಾಜಾಡೆಗನ್ ಅವರು, ಕೃತಕ ಬುದ್ಧಿಮತ್ತೆಯ ಜಗತ್ತು ಹಾಗೂ ನಮ್ಮ ಭವಿಷ್ಯವನ್ನು ಮರು ರೂಪಿಸಬಹುದಾದ ‘ಅವಕಾಶಗಳು ಮತ್ತು ಅಪಾಯಗಳು’ ಕುರಿತು ಮಾತನಾಡಿದರು.

ಬೆಂಗಳೂರು ನಗರ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಕೆ.ಆರ್. ವೇಣುಗೋಪಾಲ್ ಮಾತನಾಡಿದರು. ಪ್ರಾಂಶುಪಾಲ ಎಚ್.ಸಿ. ನಾಗರಾಜ್, ಕಂಪ್ಯೂಟರ್ ಸೈನ್ಸ್ ಆ್ಯಂಡ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಡಾ.ಎನ್.ನಳಿನಿ ಇದ್ದರು.

ಸುಟ್ಟ ಸ್ಥಿತಿಯಲ್ಲಿ ಯುವಕನ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ಬಳಿ ಹಾದು ಹೋಗಿರುವ ರೈಲು ಹಳಿ ಸಮೀಪದಲ್ಲಿ ಯುವಕರೊಬ್ಬರ ಮೃತದೇಹ ಸುಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಸಾವಿನ ಬಗ್ಗೆ ಹಲವು ಅನುಮಾನಗಳು ವ್ಯಕ್ತವಾಗಿವೆ.

‘ಕೊಂಡಪ್ಪ ಲೇಔಟ್‌ನ ಸಾಗರ್ (33) ಮೃತರು. ಹಳಿಗೆ ಹೊಂದಿಕೊಂಡಿರುವ ಜಾಗದಲ್ಲಿ ಮೃತದೇಹ ಕಂಡಿದ್ದ ರೈಲ್ವೆ ಸಿಬ್ಬಂದಿ ಠಾಣೆಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಹೋಗಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಯಶವಂತಪುರ ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

‘ಸಾಗರ್ ಅವರು ಮಾನಸಿಕ ಅಸ್ವಸ್ಥರಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇದು ಕೊಲೆಯೋ, ಆತ್ಮಹತ್ಯೆಯೋ ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು ಎಲ್ಲ ಆಯಾಮದಲ್ಲಿ ತನಿಖೆ ನಡೆಸಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಗುಲಾಬಿ ಹೂಗಳನ್ನು ಕೊಟ್ಟು ನಿವೇಶನಗಳ ದಾಖಲೆ ಪಡೆದುಕೊಂಡ ಅನುಭವ ಕಥನ

‘ಗಾಂಧಿಗಿರಿ’ ಹೋರಾಟ ತೆರೆದಿಡುವ ಪುಸ್ತಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಸಚ್ಚಿದಾನಂದ ನಗರದ ನಿವಾಸಿಗಳ ‘ಗಾಂಧಿಗಿರಿ’ ಹೋರಾಟದ ಚಿತ್ರಣವನ್ನು ತೆರೆದಿಡುವ ‘ಬೆಂಗಳೂರಿನ ಭೂ ಮಾಫಿಯಾ ಭ್ರಷ್ಟಾಚಾರದ ಚಕ್ರವ್ಯೂಹ’ ಪುಸ್ತಕವನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.

ತಮ್ಮ ನಿವೇಶನಗಳ ಕಂದಾಯ ದಾಖಲೆಗಳನ್ನು ಪಡೆಯಲು ಸಚ್ಚಿದಾನಂದ ನಗರದವರು ಅನುಭವಿಸಿದ್ದ ಯಾತನೆ ಹಾಗೂ ಭ್ರಷ್ಟಾಚಾರದ ವಿರುದ್ಧ ನಡೆಸಿದ್ದ 14 ವರ್ಷಗಳ ಹೋರಾಟವು ಈ ಪುಸ್ತಕದಲ್ಲಿ ಅಡಕವಾಗಿದೆ.

ಗ್ಲೋಬಲ್ ಅಕಾಡೆಮಿ ಆಫ್ ಟೆಕ್ನಾಲಜಿ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಿ.ವಿ. ಗುರುಪ್ರಸಾದ್ ಅವರು ಪುಸ್ತಕ ಬಿಡುಗಡೆ ಮಾಡಿದರು.

‘ಸಚ್ಚಿದಾನಂದ ನಗರ ನ್ಯಾಯಪರ ಆಂದೋಲನ’ ಹೆಸರಿನಲ್ಲಿ ಆರಂಭವಾದ ಹೋರಾಟದ ಬಗ್ಗೆ ಮಾತನಾಡಿದ ಡಾ. ಶಂಕರ್ ಕೆ. ಪ್ರಸಾದ್, ‘ನಮ್ಮ ಹಕ್ಕು ಕೇಳಲು 2009ರಲ್ಲಿ ಮನೆಯೊಂದರಲ್ಲಿ ಆಂದೋಲನದ ಮೊದಲ ಸಭೆ ನಡೆಯಿತು. ಅಂದು 900 ಮಂದಿ ಹೋರಾಟದಲ್ಲಿದ್ದರು. 14 ವರ್ಷಗಳ ಹೋರಾಟದಿಂದ ಹಲವರಿಗೆ ಭೂ ದಾಖಲೆಗಳು ಸಿಕ್ಕಿವೆ. ಆದರೆ, ಕೆಲವರು ಇಂದಿಗೂ ದಾಖಲೆ ಪಡೆಯಲು ಹೋರಾಡುತ್ತಲೇ ಇದ್ದಾರೆ’ ಎಂದು ತಿಳಿಸಿದರು.

‘ಗಾಂಧಿಗಿರಿಯ ಹೋರಾಟ ನಮ್ಮದಾಗಿತ್ತು. ಗುಲಾಬಿ ಹಿಡಿದು ಕಚೇರಿಯಿಂದ ಕಚೇರಿಗೆ ಅಲೆಯುತ್ತಿದ್ದೆವು. ಗುಮಾಸ್ತನಿಂದ ಹಿಡಿದು ಹಿರಿಯ ಅಧಿಕಾರಿಗೂ ಗುಲಾಬಿ ಕೊಟ್ಟು, ಸಮಸ್ಯೆ ಬಗೆಹರಿಸುವಂತೆ ಕೋರುತ್ತಿದ್ದೆವು. ಅಧಿಕಾರಿಗಳು, ಜನಪ್ರತಿನಿಧಿಗಳು, ವಕೀಲರು, ನ್ಯಾಯಾಲಯ, ಪತ್ರಿಕಾ ಸಂಸ್ಥೆಗಳು ಎಲ್ಲ ಕಡೆಯೂ ಅಲೆದಾಡಿದ್ದೆವು. ಲಂಚ ನೀಡಲಿಲ್ಲ’ ಎಂದರು.

‘ಪರಿಸ್ಥಿತಿ ಕೈ ಮೀರಿ ಹೋದಾಗ, ಬಿಬಿಎಂಪಿ ಮುಖ್ಯ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ಆರಂಭಿಸಿದ್ದೆವು. ಸಂಜೆ ಕೆಲಸ ಮುಗಿಸಿ ಮನೆಗೆ ಹೋಗಿದ್ದ ಸಿಬ್ಬಂದಿ, ರಾತ್ರಿ ಕಚೇರಿಗೆ ಓಡೋಡಿ ಬಂದರು. ತಡರಾತ್ರಿಯವರೆಗೂ ಕೆಲಸ ಮಾಡಿ ನಮಗೆ ಖಾತೆ ದಾಖಲೆ ಮಾಡಿಕೊಟ್ಟರು. ಇದು ನಮಗೆ ಸಿಕ್ಕ ದೊಡ್ಡ ಗೆಲುವಾಗಿತ್ತು. ಹೋರಾಟದ ಪ್ರತಿಯೊಂದು ಹಂತವನ್ನು ಪುಸ್ತಕದಲ್ಲಿ ದಾಖಲಿಸಲಾಗಿದೆ. ಇಂದಿನ ಸಮಾಜದ ಪ್ರತಿಯೊಬ್ಬ ನಾಗರಿಕರು, ತಮ್ಮ ಹಕ್ಕಿನ ಬಗ್ಗೆ ತಿಳಿಯಲು ಈ ಪುಸ್ತಕ ಓದಬೇಕು’ ಎಂದು ಅವರು ಕೋರಿದರು.

ಡಿ.ವಿ.ಗುರುಪ್ರಸಾದ್ ಮಾತನಾಡಿ, ‘ಅನೇಕರು ಮಾನವೀಯ ಮೌಲ್ಯ ಕಳೆದುಕೊಂಡಿದ್ದಾರೆ. ಇನ್ನಾದರೂ ಎಲ್ಲರೂ ಬದಲಾಗಬೇಕು. ನಮ್ಮ ಕೆಲಸ ಆಗಲಿ ಬಿಡಲಿ, ಯಾರಿಗೂ ಲಂಚ ಕೊಡುವುದಿಲ್ಲವೆಂದು ಶಪಥ ಮಾಡಿ, ಅದರಂತೆ ನಡೆದುಕೊಳ್ಳಬೇಕು’ ಎಂದರು.

ನೀತಿ ಶಿಕ್ಷಣದ ಪಾಠ ಅಗತ್ಯ: ವರ್ಚುವಲ್ ವೇದಿಕೆಯಲ್ಲಿ ಮಾತನಾಡಿದ ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ, ‘ಭ್ರಷ್ಟಾಚಾರ ಹೆಚ್ಚಳಕ್ಕೆ ಸಮಾಜವೇ ಕಾರಣವಾಗುತ್ತಿದೆ. ಶ್ರೀಮಂತಿಕೆಗೆ ಬೆಲೆ ಸಿಗುತ್ತಿದೆ. ಪ್ರಾಮಾಣಿಕರಿಗೆ ಸಮಾಜ ಗೌರವ ನೀಡುತ್ತಿಲ್ಲ. ದುರಾಸೆಯ ರೋಗ ಹೆಚ್ಚಾಗಿದ್ದು, ಇದರಿಂದಲೇ ಸಮಸ್ಯೆಗಳು ಉದ್ಭವಿಸುತ್ತಿವೆ’ ಎಂದರು.



‘ಬೆಂಗಳೂರಿನ ಭೂಮಾಫಿಯಾ ಭ್ರಷ್ಟಾಚಾರದ ಚಕ್ರವ್ಯೂಹ’ ಪುಸ್ತಕದ ಪ್ರತಿಯೊಂದನ್ನು ಶಂಕರ ಕೆ.ಪ್ರಸಾದ್ (ಬಲದಿಂದ ಎರಡನೆಯವರು) ಅವರು ಡಿ.ವಿ.ಗುರುಪ್ರಸಾದ್ ಅವರಿಗೆ ನೀಡಿದರು. ಪತ್ರಕರ್ತ ನೆತ್ರಕೆರೆ ಉದಯಶಂಕರ (ಬಲ ಬದಿ), ಚಾಣಕ್ಯ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಪ್ರೊ.ಸದಾನಂದ ಜಾನೆಕೆರೆ, ನಟ ಅರುಣ್ ಮೂರ್ತಿ ಇದ್ದರು – ಪ್ರಜಾವಾಣಿ ಚಿತ್ರ

ಪುಸ್ತಕ ಹೆಸರು: ಬೆಂಗಳೂರಿನ ಭೂ ಮಾಫಿಯಾ ಭ್ರಷ್ಟಾಚಾರದ ಚಕ್ರವ್ಯೂಹ
ಲೇಖಕರು: ಡಾ. ಶಂಕರ್ ಕೆ. ಪ್ರಸಾದ್ ಹಾಗೂ ಪತ್ರಕರ್ತ ನೆತ್ರಕೆರೆ ಉದಯಶಂಕರ
ಪ್ರಕಾಶಕರು: ಸಂಪೂರ್ಣ ಸ್ವರಾಜ್ ಫೌಂಡೇಶನ್
ಪುಟಗಳು: 637
ಬೆಲೆ: ₹ 695

ಕೆ.ಆರ್.ಪುರದ ನಿಸರ್ಗ ಬಡಾವಣೆಯಲ್ಲಿ ಘಟನೆ • ಮಗಳ ಜೊತೆ ವಾಸವಿದ್ದ ವೃದ್ಧೆ

ಶವ ತುಂಡರಿಸಿ ಡ್ರಮ್‌ನಲ್ಲಿಟ್ಟರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ವೃದ್ಧೆಯೊಬ್ಬರನ್ನು ಹತ್ಯೆ ಮಾಡಲಾಗಿದ್ದು, ಮೃತದೇಹವನ್ನು ತುಂಡರಿಸಿ ಡ್ರಮ್‌ನಲ್ಲಿಟ್ಟು ಆರೋಪಿಗಳು ಪರಾರಿಯಾಗಿದ್ದಾರೆ.

'ನಿಸರ್ಗ ಲೇಔಟ್‌ನ ಸರೋಜಮ್ಮ (78) ಮೃತರು. ಇವರು ವಾಸವಿದ್ದ ಮನೆಯಿಂದ ಭಾನುವಾರ ದುರ್ವಾಸನೆ ಬರುತ್ತಿತ್ತು. ಅನುಮಾನಗೊಂಡ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ಮನೆಗೆ ಹೋಗಿ ಪರಿಶೀಲಿಸಿದಾಗ, ಡ್ರಮ್‌ನಲ್ಲಿ ಮೃತದೇಹ ಪತ್ತೆಯಾಗಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಶಿವಕುಮಾರ್ ಗುಣಾರೆ 'ಪ್ರಜಾವಾಣಿ'ಗೆ ತಿಳಿಸಿದರು.

ಮೃತದೇಹ ತುಂಡರಿಸಿರುವ ಆರೋಪಿಗಳು: 'ಸರೋಜಮ್ಮ ಅವರಿಗೆ ಇಬ್ಬರು ಮಕ್ಕಳಿದ್ದಾರೆ. ಮಗ, ಪ್ರತ್ಯೇಕವಾಗಿ ವಾಸವಿದ್ದಾರೆ. ಮಗಳ ಜೊತೆ ಸರೋಜಮ್ಮ ನೆಲೆಸಿದ್ದರು. ಇವರ ಕೊಲೆಗೆ ಕಾರಣ ವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ' ಎಂದು ಪೊಲೀಸರು ಹೇಳಿದರು.

'ಸರೋಜಮ್ಮ ಅವರನ್ನು ಎರಡು ದಿನಗಳ ಹಿಂದೆಯೇ ಕೊಲೆ ಮಾಡಿರುವ ಸಂಶಯವಿದೆ. ಕೊಲೆ ನಂತರ, ಮೃತದೇಹವನ್ನು ತುಂಡರಿಸಿ ಡ್ರಮ್‌ನಲ್ಲಿ ತುಂಬಿಟ್ಟಿರುವ ಅನುಮಾನವಿದೆ. ಪರಿಚಯಸ್ಥರೇ ಕೃತ್ಯ ಎಸಗಿರುವ ಮಾಹಿತಿ

ಅಪರಾಧ ಸುದ್ದಿ

ಇದ್ದು, ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿದೆ' ಎಂದು ತಿಳಿಸಿದರು.

ಡ್ರಮ್ ಸಮೇತ ಆಸ್ಪತ್ರೆಗೆ ಸಾಗಣೆ: 'ಮೃತದೇಹವನ್ನು ಹಲವು ಭಾಗಗಳಾಗಿ ತುಂಡರಿಸಿ ಡ್ರಮ್‌ನಲ್ಲಿಡಲಾಗಿದೆ. ಹೀಗಾಗಿ, ಡ್ರಮ್ ಸಮೇತ ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ವರದಿ ಬಂದ ನಂತರ ಸಾವಿನ ಬಗ್ಗೆ ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದರು.

'ಆಸ್ತಿ ಹಾಗೂ ಕೌಟುಂಬಿಕ ವಿಚಾರಕ್ಕೆ ಕೊಲೆ ನಡೆದಿರುವ ಬಗ್ಗೆ ಸಂಶಯವಿದೆ. ಮಗಳು ಹಾಗೂ ಮಗನನ್ನೂ ವಿಚಾರಣೆಗೆ ಒಳಪಡಿಸಬೇಕಿದೆ' ಎಂದು ಹೇಳಿದರು.

ಜನರಿಗೆ ಆತಂಕ: ವೃದ್ಧೆಯ ಮೃತದೇಹವನ್ನು ತುಂಡರಿಸಿ ಡ್ರಮ್‌ನಲ್ಲಿಟ್ಟಿದ್ದ ಮಾಹಿತಿ ತಿಳಿದ ಹತ್ತಿರದ ನಿವಾಸಿಗಳು ಮನೆ ಎದುರು ಜಮಾಯಿಸಿದ್ದರು.

'ವೃದ್ಧೆಯನ್ನು ಅಮಾನುಷವಾಗಿ ಕೊಲೆ ಮಾಡಲಾಗಿದೆ. ಇದರಿಂದ ನಾವೆಲ್ಲರೂ ಆತಂಕಗೊಂಡಿದ್ದೇವೆ. ಆರೋಪಿಗಳನ್ನು ಪೊಲೀಸರು ತ್ವರಿತವಾಗಿ ಬಂಧಿಸಬೇಕು' ಎಂದು ಅವರು ಆಗ್ರಹಿಸಿದರು.

ಕಾಣೆಯಾಗಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿ ಶವವಾಗಿ ಪತ್ತೆ

ಆನೇಕಲ್: ಇಲ್ಲಿಗೆ ಸಮೀಪದ ಅಲಯನ್ಸ್ ವಿಶ್ವವಿದ್ಯಾಲಯದ ಹಾಸ್ಟೆಲ್‌ನಿಂದ ಕಾಣೆಯಾಗಿದ್ದ ಎಂಜಿನಿಯರಿಂಗ್ ವಿದ್ಯಾರ್ಥಿಯ ಶವ ಭಾನುವಾರ ಕಾಳನಾಯಕನಹಳ್ಳಿಯ ನೀಲಗಿರಿ ತೋಪಿನಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಪತ್ತೆಯಾಗಿದೆ.

ಹರ್ಷಿತ್ ಕೊಟ್ನಾಲಾ(21) ಮೃತ ವಿದ್ಯಾರ್ಥಿ. ಉತ್ತರಾಖಂಡದ ಹಲ್ದ್ವಾನಿಯ ಹರ್ಷಿತ್ ಕೊಟ್ನಾಲಾ, ಅಲಯನ್ಸ್ ವಿಶ್ವವಿದ್ಯಾಲಯದಲ್ಲಿ ಬಿ.ಇ. ಓದುತ್ತಿದ್ದ. ಈತ ಆನೇಕಲ್ ಸಮೀಪದ ಗಡಿಭಾಗದಲ್ಲಿರುವ ತಮಿಳುನಾಡಿನ ತಮ್ಮಾಪುರದ ಅಲಯನ್ಸ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ನಿಲಯದಲ್ಲಿದ್ದ. ಫೆ.21ರಂದು ವಿದ್ಯಾರ್ಥಿನಿಲಯದಿಂದ ಹೊರಗೆ ಹೋಗಿದ್ದ ವಿದ್ಯಾರ್ಥಿ ವಾಪಸ್ ಬಂದಿರಲಿಲ್ಲ. ವಿದ್ಯಾರ್ಥಿನಿಲಯದ ಸಿಸಿಟಿವಿ ಕ್ಯಾಮೆರಾದಲ್ಲಿ ವಿದ್ಯಾರ್ಥಿ ಕೊನೆಯ ಬಾರಿಗೆ ಹಾಸ್ಟೆಲ್‌ನಿಂದ ಹೊರಗೆ ಹೋಗುವ ದೃಶ್ಯ ಸೆರೆಯಾಗಿದೆ.

ಹರ್ಷಿತ್

ತಮಿಳುನಾಡಿನ ಥಳೀ ನಗರದ ಪೊಲೀಸ್ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಾಗಿತ್ತು. ಈ ಮಾಹಿತಿಯನ್ನು ವಿದ್ಯಾರ್ಥಿಯ ತಂದೆ-ತಾಯಿಗೆ ತಿಳಿಸಲಾಗಿತ್ತು.

ಉತ್ತರಾಖಂಡದಲ್ಲಿ ಬ್ಯಾಂಕ್ ಉದ್ಯೋಗಿಯಾಗಿರುವ ವಿದ್ಯಾರ್ಥಿಯ ತಂದೆ ಎರಡು ದಿನಗಳ ಹಿಂದೆ ಆನೇಕಲ್‌ಗೆ ಬಂದು, ಮಗನಿಗಾಗಿ ಹುಡುಕಾಟ ನಡೆಸಿದ್ದರು. ಭಾನುವಾರ ಬೆಳಿಗ್ಗೆ ಕಾಳನಾಯಕನಹಳ್ಳಿ ಬಳಿ ನೀಲಗಿರಿ ತೋಪಿನಲ್ಲಿ ಸುಟ್ಟು ಕರಕಲಾದ ಸ್ಥಿತಿಯಲ್ಲಿ ಶವವೊಂದು ಪತ್ತೆಯಾಗಿತ್ತು.

ಆನೇಕಲ್ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಸ್ಥಳದಲ್ಲಿ ಹರ್ಷಿತ್ ಬ್ಯಾಗ್ ಮತ್ತು ಮೊಬೈಲ್ ಪತ್ತೆಯಾಗಿತ್ತು. ಇದು ಕಾಣೆಯಾದ ವಿದ್ಯಾರ್ಥಿಯ ಕಳೇಬರ ಎಂದು ಪೊಲೀಸರು ಗುರುತಿಸಿದ್ದಾರೆ.

ಬೇರೆ ಕಡೆ ಕೊಲೆ ಮಾಡಿ, ಕಾಳನಾಯಕನಹಳ್ಳಿಯ ನೀಲಗಿರಿ ತೋಪಿಗೆ ಶವ ತಂದು ಸುಟ್ಟಿರುವ ಶಂಕೆಯನ್ನು ಪೊಲೀಸರು ವ್ಯಕ್ತಪಡಿಸಿದ್ದಾರೆ. ಆನೇಕಲ್ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಆಸ್ಟ್ರೇಲಿಯಾ ಪ್ರಜೆ ಅಪಹರಣ ಆರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾ ಪ್ರಜೆಯೊಬ್ಬರನ್ನು ಅಪಹರಿಸಿ ₹1.50 ಲಕ್ಷ ಸುಲಿಗೆ ಮಾಡಿದ್ದ ಆರೋಪದಡಿ ಆರು ಆರೋಪಿಗಳನ್ನು ಬೊಮ್ಮನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಪರಪ್ಪನ ಅಗ್ರಹಾರ ಸಮೀಪದ ಚನ್ನಕೇಶವ ನಗರದ ಮೋನಿಶ್ ಅಲಿಯಾಸ್ ಮನು (24), ಹೊಂಗಸಂದ್ರದ ಲೋಕೇಶ್ (24), ಬೊಮ್ಮನಹಳ್ಳಿಯ ಕಿಶೋರ್ ಶಿವ (19), ಎಂ.ಆದಿ (21), ಜಯನಗರದ ದಿಲೀಪ್ ಕುಮಾರ್ (26) ಹಾಗೂ ತಿಲಕನಗರದ ಸತೀಶ್ (25) ಬಂಧಿತರು.

'ಆಸ್ಟ್ರೇಲಿಯಾ ಪ್ರಜೆ ಅಲೋಕ್ ರಾಣಾ ಅವರನ್ನು ಫೆ. 5ರಂದು ಅಪಹರಿಸಿದ್ದ ಆರೋಪಿಗಳು, ಹಣ ಸುಲಿಗೆ ಮಾಡಿ ಪರಾರಿಯಾಗಿದ್ದರು. ಕೃತ್ಯದ ಸಂಬಂಧ ಸಹೋದರ ಬೆಂಗಳೂರಿನ ಅಮಿತ್ ಅವರು ದೂರು ನೀಡಿದ್ದರು. ದೂರು ದಾಖಲಾದ ಕೆಲವೇ ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಗಾಂಜಾ ಖರೀದಿಸುತ್ತಿದ್ದ ಸಂತ್ರಸ್ತ: 'ಬೆಂಗಳೂರಿನ ಅಲೋಕ್ ರಾಣಾ, ಸುಮಾರು ವರ್ಷಗಳ ಹಿಂದೆಯೇ ಆಸ್ಟ್ರೇಲಿಯಾಗೆ ಹೋಗಿ ನೆಲೆಸಿದ್ದಾರೆ. ಅಲ್ಲಿಯ ಪೌರತ್ವವನ್ನೂ ಪಡೆದಿದ್ದಾರೆ. ಆಗಾಗ ಬೆಂಗಳೂರಿಗೆ ಬಂದು ಹೋಗುತ್ತಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಂಧಿತ ಆರೋಪಿ ಮೋನಿಶ್, ಕಾಲ್ ಸೆಂಟರ್ ಉದ್ಯೋಗಿ. ಈತ ಗಾಂಜಾ ಸಹ ಮಾರುತ್ತಿದ್ದ. ಬೆಂಗಳೂರಿಗೆ ಬಂದಾಗಲೆಲ್ಲ ಮೋನಿಶ್‌ನಿಂದ ಅಲೋಕ್ ರಾಣಾ ಗಾಂಜಾ ಖರೀದಿಸುತ್ತಿದ್ದರು. ಕೇಳಿದಷ್ಟು ಹಣವನ್ನೂ ನೀಡುತ್ತಿದ್ದರು. ಅಲೋಕ್ ಬಳಿ ಹೆಚ್ಚಿನ ಹಣ ಇರಬಹುದೆಂದು ತಿಳಿದು ಮೋನಿಶ್ ಹಾಗೂ ಇತರರು ಸುಲಿಗೆ ಮಾಡಲು ಸಂಚು ರೂಪಿಸಿದ್ದರು' ಎಂದು ಹೇಳಿವೆ.

ಕಾರಿನ ಜಿಪಿಎಸ್ ಸುಳಿವು: 'ಗಾಂಜಾ ನೀಡುವುದಾಗಿ ಅಲೋಕ್ ಅವರನ್ನು ಕರೆಸಿಕೊಂಡಿದ್ದ ಆರೋಪಿಗಳು, ಅವರದ್ದೇ ಕಾರಿನಲ್ಲಿ ಅಪಹರಿಸಿ ಮನೆಯೊಂದಕ್ಕೆ ಕರೆದೊಯ್ದಿದ್ದರು. ಹಣ ನೀಡುವಂತೆ ಪೀಡಿಸಿ ಹಲ್ಲೆ ಮಾಡಿದ್ದರು. ₹ 1.50 ಲಕ್ಷ ಸುಲಿಗೆ ಮಾಡಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸಹೋದರ ಮನೆಗೆ ಬಾರದಿದ್ದರಿಂದ ಅನುಮಾನಗೊಂಡಿದ್ದ ದೂರುದಾರ ಅಮಿತ್, ಕಾರಿನ ಜಿಪಿಎಸ್ ಆಧರಿಸಿ ಸ್ಥಳಕ್ಕೆ ಹೋಗಿದ್ದರು. ಅವರನ್ನು ನೋಡಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದರು. ಹಲ್ಲೆಯಿಂದ ತೀವ್ರ ಗಾಯಗೊಂಡಿದ್ದ ಸಹೋದರನಿಗೆ ಚಿಕಿತ್ಸೆ ಕೊಡಿಸಿದ ನಂತರವೇ ಠಾಣೆಗೆ ದೂರು ನೀಡಿದ್ದಾರೆ' ಎಂದು ಹೇಳಿವೆ.

ಗಾಂಜಾ ಪೆಡ್ಲರ್ ಬಂಧನ: 'ಆರೋಪಿ ಮೋನಿಶ್ ನೀಡಿದ್ದ ಮಾಹಿತಿ ಆಧರಿಸಿ ಡ್ರಗ್ಸ್ ಪೆಡ್ಲರ್ ಸತ್ಯನಾರಾಯಣ ಮೆಹತೊನನ್ನು (25) ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಿಹಾರದ ಸತ್ಯನಾರಾಯಣನಿಂದ 410 ಗ್ರಾಂ ಗಾಂಜಾ, ಮೊಬೈಲ್ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ. ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ ಈತ, ಗಾಂಜಾ ಮಾರುವುದನ್ನೇ ವೃತ್ತಿ ಮಾಡಿಕೊಂಡಿದ್ದ. ಈತನ ಬಳಿಯೇ ಮೋನಿಶ್ ಗಾಂಜಾ ಖರೀದಿಸಿ ಗ್ರಾಹಕರಿಗೆ ಮಾರುತ್ತಿದ್ದ' ಎಂದು ತಿಳಿಸಿದರು.

ಹಳೆ ವೈಷಮ್ಯ: ಯುವಕನ ಕೊಲೆ

ಆನೇಕಲ್: ತಾಲ್ಲೂಕಿನ ಮರಸೂರು ಬಳಿ ಭಾನುವಾರ ಬೆಳಗಿನ ಜಾವ ಯುವಕನೊಬ್ಬನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಲಾಗಿದೆ.

ವಿಜಯ್ ಕುಮಾರ್ (27) ಕೊಲೆಯಾದ ಯುವಕ. 2017ರಲ್ಲಿ ನಡೆದಿದ್ದ ಮನೋಜ್ ಕುಮಾರ್ ಎಂಬುವವರ ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಈತ ಏಳು ತಿಂಗಳ ಹಿಂದೆ ಜೈಲಿನಿಂದ ಬಿಡುಗಡೆ ಆಗಿದ್ದ.

ಭಾನುವಾರ ಬೆಳಗಿನ ಜಾವ 4 ಗಂಟೆಗೆ ವಿಜಯ್‌ನನ್ನು ಮನೆಯಿಂದ ಹೊರಗೆ ಕರೆಯಿಸಿಕೊಂಡ ದುಷ್ಕರ್ಮಿಗಳು ಮನೆಯ ಎದುರಿನ ರಸ್ತೆಯಲ್ಲಿ ಭೀಕರವಾಗಿ ಕೊಚ್ಚಿ ಕೊಲೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಹಿಂದೆ ಕೊಲೆ ಆಗಿದ್ದ ಮನೋಜ್ ಕಡೆಯವರು ಹಳೆ ವೈಷ್ಯಮ್ಯದಿಂದ ಕೊಲೆ ಮಾಡಿರಬಹುದು ಎಂದು ಶಂಕಿಸಲಾಗಿದೆ. ಆರೋಪಿಗಳು ನಾಪತ್ತೆಯಾಗಿದ್ದು, ಪತ್ತೆಗೆ ಪೊಲೀಸರ ಕಾರ್ಯಾಚರಣೆ ಕೈಗೊಂಡಿದ್ದಾರೆ. ಸೂರ್ಯಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎರಡೂವರೆ ಕೆ.ಜಿ ಚಿನ್ನದ ಆಭರಣ ಕಿತ್ತು ಪರಾರಿ

ಬಂಗಾರಪೇಟೆ: ಚಿನ್ನದ ಅಂಗಡಿಗಳಿಗೆ ಆಭರಣ ಮಾರಾಟ ಮಾಡಲು ಹೊರಟಿದ್ದ ವ್ಯಾಪಾರಿಯಿಂದ ಎರಡೂವರೆ ಕೆ.ಜಿ. ಚಿನ್ನದ ಆಭರಣಗಳನ್ನು ಬೈಕ್‌ನಲ್ಲಿ ಬಂದ ದುಷ್ಕರ್ಮಿಗಳು ಭಾನುವಾರ ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಪಟ್ಟಣದ ಬಸ್ ನಿಲ್ದಾಣದ ಬಳಿ ಈ ಘಟನೆ ನಡೆದಿದೆ. ಬೆಂಗಳೂರಿನ ತಮ್ಮ ಅಂಗಡಿಯಲ್ಲಿ ತಯಾರಿಸಿದ ಚಿನ್ನಾಭರಣಗಳನ್ನು ಬಂಗಾರಪೇಟೆ ಮತ್ತು ಕೆಜಿಎಫ್ ಚಿನ್ನದ ಅಂಗಡಿಗಳಿಗೆ ಕೊಡಲು ಚಿನ್ನಾಭರಣ ವರ್ತಕ ಗೌತಮ್ ಚಂದ್ ಎಂಬುವವರು ಭಾನುವಾರ ಮಧ್ಯಾಹ್ನ ಬೈಕ್‌ನಲ್ಲಿ ಬಂಗಾರಪೇಟೆಯಿಂದ ಕೆಜಿಎಫ್‌ಗೆ ಹೊರಟಿದ್ದರು.

ಮಾರ್ಗಮಧ್ಯೆ ಪಟ್ಟಣದ ಬಸ್ ನಿಲ್ದಾಣದ ಬಳಿ ಟೊಮೆಟೊ ಖರೀದಿಸಲು ಬೈಕ್ ನಿಲ್ಲಿಸಿದ್ದರು. ಬೈಕ್‌ನಲ್ಲಿಯೇ ಕುಳಿತು ಟೊಮೆಟೊ ಖರೀದಿ ಮಾಡುತ್ತಿದ್ದಾಗ ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದಿದ್ದ ಇಬ್ಬರು ಚಿನ್ನಾಭರಣ ಇದ್ದ ಬ್ಯಾಗ್ ಕಿತ್ತುಕೊಂಡು ಪರಾರಿಯಾದರು. ಚಿನ್ನಾಭರಣ ವರ್ತಕ ಗೌತಮ್ ಚಂದ್ ಅವರು ಬಂಗಾರಪೇಟೆ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಎಂ. ಶಾಂತರಾಜು ಸ್ಥಳಕ್ಕೆ ಭೇಟಿ ನೀಡಿದ್ದರು. ಬಂಗಾರಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೆಂಗಳೂರು ವಕೀಲರ ಸಂಘ ಶನಿವಾರ ನಗರದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿದ್ದ ಪಿ.ಎಸ್.ದಿನೇಶ್ ಕುಮಾರ್ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. (ನಿಂತವರು ಎಡದಿಂದ) 'ಬೆಂಗಳೂರು ವಕೀಲರ ಸಂಘ'ದ ಪ್ರಧಾನ ಕಾರ್ಯದರ್ಶಿ ಟಿ.ಜಿ ರವಿ, ಕಾರ್ಯಕಾರಿ ಸಮಿತಿ ಸದಸ್ಯ ಚಂದ್ರಕಾಂತ ಪಾಟೀಲ್ ಕಾನೂರು ಗೌಡ, ಎಸ್.ರಾಜು, ಕರ್ನಾಟಕ ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ವಿಶಾಲ್ ರಘು, ಹೈಕೋರ್ಟ್ ಘಟಕದ ಉಪಾಧ್ಯಕ್ಷ ಎ.ಎಸ್.ಹರೀಶ್, ಅಕ್ಕಿ ಮಂಜುನಾಥ ಗೌಡ, ನ್ಯಾಯಮೂರ್ತಿ ಕೆ.ಸೋಮಶೇಖರ್, ಅಡ್ವೋಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಮತ್ತು 'ಬೆಂಗಳೂರು ವಕೀಲರ ಸಂಘ'ದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ ಇದ್ದರು –ಪ್ರಜಾವಾಣಿ ಚಿತ್ರ

ವಿಮಾನ ನಿಲ್ದಾಣದಲ್ಲಿ ಚಿನ್ನ ಹಸ್ತಾಂತರ: ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್‌ನಲ್ಲಿ ವಿದೇಶಿ ಪ್ರಯಾಣಿಕನೊಬ್ಬ ದೇಶಿ ಪ್ರಯಾಣಿಕನಿಗೆ ಚಿನ್ನ ಹಸ್ತಾಂತರ ಮಾಡುವ ವೇಳೆ ಕಸ್ಟಮ್ಸ್ ಅಧಿಕಾರಿಗಳಿಗೆ ಸಿಕ್ಕಿ ಬಿದ್ದಿದ್ದಾನೆ.

ಫೆ.23 ರಂದು ಪೇಸ್ಟ್ ರೂಪದಲ್ಲಿದ್ದ 288 ಗ್ರಾಂ ಚಿನ್ನವನ್ನು ಕಸ್ಟಮ್ಸ್ ಪರಿಶೀಲನೆಗೂ ಮೊದಲೇ ದೇಶಿ ಪ್ರಯಾಣಿಕನಿಗೆ ನೀಡುವಾಗ ಕಸ್ಟಮ್ಸ್ ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಇಬ್ಬರೂ ಆರೋಪಿಗಳಿಂದ ₹18.47 ಲಕ್ಷ ಮೌಲ್ಯದ ಚಿನ್ನ ಜಪ್ತಿ ಮಾಡಲಾಗಿದೆ. ವಿಮಾನ ನಿಲ್ದಾಣ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಅಗ್ಗದ ಬೆಲೆಗೆ ಮೊಟ್ಟೆ ಆಮಿಷ ₹ 48 ಸಾವಿರ ಕಳೆದುಕೊಂಡ ಮಹಿಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: '₹49 ಪಾವತಿಸಿ 48 ಮೊಟ್ಟೆ ಖರೀದಿಸಿ' ಎಂಬುದಾಗಿ ಇ-ಮೇಲ್ ಮೂಲಕ ಬಂದಿದ್ದ ಸಂದೇಶ ನಂಬಿ ಮಹಿಳೆಯೊಬ್ಬರು ₹ 48 ಸಾವಿರ ಕಳೆದುಕೊಂಡಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ವಸಂತನಗರದ ಮಹಿಳೆಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಮಹಿಳೆಯ ಇ-ಮೇಲ್‌ಗೆ ಫೆ.17ರಂದು ಸಂದೇಶ ಬಂದಿತ್ತು. ಅದರಲ್ಲಿದ್ದ ಲಿಂಕ್ ಕ್ಲಿಕ್ ಮಾಡಿದ್ದ ಮಹಿಳೆ, ವಿಳಾಸ ಹಾಗೂ ವೈಯಕ್ತಿಕ ಮಾಹಿತಿಗಳನ್ನು ನಮೂದಿಸಿದ್ದರು. ನಂತರ, ಆನ್‌ಲೈನ್ ಮೂಲಕ ₹ 49 ಪಾವತಿಸಿದ್ದರು. ಇದಾದ ಕೆಲ ನಿಮಿಷಗಳಲ್ಲಿ ಮಹಿಳೆಯ ಖಾತೆಯಿಂದ ₹ 48 ಸಾವಿರ ಕಡಿತವಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇ- ಕಾಮರ್ಸ್ ಜಾಲತಾಣವೊಂದರ ಹೆಸರಿನಲ್ಲಿ ಸಂದೇಶ ಕಳುಹಿಸಿ ಹಣ ದೋಚಲಾಗಿದೆ. ಆಮಿಷವೊಡ್ಡಿ ಹಣ ದೋಚುವ ಜಾಲದ ಬಗ್ಗೆ ಜನರು ಎಚ್ಚರಿಕೆ ವಹಿಸಬೇಕು' ಎಂದು ಹೇಳಿವೆ.

ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ಏಳು ಮಹಿಳೆಯರ ರಕ್ಷಣೆ

ಬೆಂಗಳೂರು: ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪದಡಿ 'ರೋರಾ ಲಕ್ಷುರಿ ಥಾಯ್' ಸ್ಪಾ ಮೇಲೆ ಯಲಹಂಕ ಠಾಣೆ ಪೊಲೀಸರು ದಾಳಿ ಮಾಡಿದ್ದು, ಏಳು ವಿದೇಶಿ ಮಹಿಳೆಯರನ್ನು ರಕ್ಷಿಸಿದ್ದಾರೆ.

'ಯಲಹಂಕ ಉಪನಗರದಲ್ಲಿರುವ ಸ್ಪಾನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ಮಾಡಿ ಮಹಿಳೆಯರನ್ನು ರಕ್ಷಿಸಲಾಗಿದೆ. ಸ್ಪಾ ವ್ಯವಸ್ಥಾಪಕ ಕಿಶೋರ್‌ನನ್ನು ಬಂಧಿಸಲಾಗಿದೆ. ಸ್ಪಾ ಮಾಲೀಕ ಸೇರಿ ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಥಾಯ್ಲೆಂಡ್‌ನಿಂದ ಮಹಿಳೆಯರನ್ನು ಪ್ರವಾಸ ವೀಸಾದಡಿ ನಗರಕ್ಕೆ ಕರೆಸುತ್ತಿದ್ದ ಆರೋಪಿಗಳು, ಸ್ಪಾನಲ್ಲಿ ಕೆಲಸಕ್ಕೆ ಇರಿಸುತ್ತಿದ್ದರು. ಸ್ಪಾ ಹೆಸರಿನಲ್ಲಿ ಮಧ್ಯವರ್ತಿಗಳ ಮೂಲಕ ಗ್ರಾಹಕರನ್ನು ಆಹ್ವಾನಿಸಿ ವೇಶ್ಯಾವಾಟಿಕೆ ನಡೆಸುತ್ತಿದ್ದರು' ಎಂದರು.

ಜವಳಿ ಸಚಿವಾಲಯ
ಭಾರತ ಸರ್ಕಾರ

Bharat tex 2024
Global Textile Expo
New Delhi | Feb 26-29

TEXTILES
FASHION
SUSTAINABILITY

ಭಾರತದಲ್ಲಿ ಬೃಹತ್ ಜಾಗತಿಕ ಜವಳಿ ಕಾರ್ಯಕ್ರಮ

ಉದ್ಘಾಟನೆ

ಭಾರತ್ ಟೆಕ್ಸ್-2024

ಉದ್ಘಾಟಕರು

ನರೇಂದ್ರ ಮೋದಿ
ಪ್ರಧಾನಮಂತ್ರಿ

26ನೇ ಫೆಬ್ರವರಿ, 2024 ಬೆಳಗ್ಗೆ 10:30

ಭಾರತ ಮಂಟಪ, ನವದೆಹಲಿ

10,000+	3,000+	50+	3,500+
ಜವಳಿ ಉತ್ಪನ್ನಗಳು	ಖಂಡಾಂತರ ಖರೀದಿದಾರರು	ಸಮಾವೇಶಗಳು ಮತ್ತು ಸೆಮಿನಾರ್‌ಗಳು	ಬ್ರಾಂಡ್‌ಗಳ ಪಾಲ್ಗೊಳ್ಳುವಿಕೆ

ಪ್ರಧಾನಮಂತ್ರಿಗಳ ದೂರದೃಷ್ಟಿ ನಾಯಕತ್ವದ ಅಡಿಯಲ್ಲಿನ ಪರಿವರ್ತನಕಾರಿ ಚಾಲನೆಗಳು

- **ಪಿಎಂ ಮಿತ್ರ ಪಾರ್ಕ್** ಯೋಜನೆಯು ಮೂಲಸೌಕರ್ಯವನ್ನು ಬಲಪಡಿಸುತ್ತದೆ ಮತ್ತು ರೂ. 70,000 ಕೋಟಿ ಹೂಡಿಕೆಯನ್ನು ಆಕರ್ಷಿಸುತ್ತದೆ ಹಾಗೂ 20 ಲಕ್ಷ ಹೆಚ್ಚುವರಿ ಉದ್ಯೋಗಗಳನ್ನು ಸೃಷ್ಟಿಸುತ್ತದೆ.
- **ಸಮರ್ಥ ಸ್ಕೀಮ್** ಕೌಶಲ್ಯಾಭಿವೃದ್ಧಿಗಾಗಿ ಮತ್ತು ಉದ್ಯೋಗವಕಾಶಕ್ಕಾಗಿ; 87% ಮಹಿಳಾ ಫಲಾನುಭವಿಗಳು
- **ನ್ಯಾಷನಲ್ ಟೆಕ್ನಿಕಲ್ ಟೆಕ್ಸ್‌ಟೈಲ್ ಮಿಷನ್** - ರೂ. 1,480 ಕೋಟಿ ಮೌಲ್ಯದ ಯೋಜನೆ ಭಾರತದಲ್ಲಿ ಟೆಕ್ನಿಕಲ್ ಟೆಕ್ಸ್‌ಟೈಲ್‌ಗಳನ್ನು ಸಶಕ್ತಗೊಳಿಸುತ್ತದೆ.
- ನೇಕಾರರಿಗೆ ಮತ್ತು ಕಲಾವಿದರಿಗೆ **65 ಲಕ್ಷ ಆಧಾರ್ ಆಧಾರಿತ ಗುರುತಿನ ಪತ್ರಗಳು**
- **ರಾಜ್ಯ ಮತ್ತು ಕೇಂದ್ರಿಯ ತೆರಿಗೆಗಳ ಮತ್ತು ಕರಗಳ (ಆರ್‌ಒಎಸ್‌ಸಿಟಿಎಲ್)** ವಿನಾಯಿತಿ ಮಾರ್ಚ್ 2026 ರವರೆಗೆ ವಿಸ್ತರಣೆ
- **ಪ್ರೊಡಕ್ಷನ್ ಲಿಂಕ್ಡ್ ಇನ್ಸೆಂಟೀವ್ (ಪಿಎಲ್ಐ) ಸ್ಕೀಮ್** ಎಂಎಂಎಫ್ ಮತ್ತು ಟೆಕ್ನಿಕಲ್ ಟೆಕ್ಸ್‌ಟೈಲ್ ಉತ್ತೇಜನಕ್ಕಾಗಿ – ಇದರಿಂದಾಗಿ ರೂ. 25,000 ಕೋಟಿ ಹೂಡಿಕೆ ಲಭಿಸುತ್ತದೆ, 2.5 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಗೊಳ್ಳುತ್ತವೆ.

ಡಿಡಿ ನ್ಯೂಸ್ ವಾಹಿನಿಯಲ್ಲಿ ನೇರಪ್ರಸಾರ

ಕನ್ಸೋರ್ಷಿಯಂ ಆಫ್ ಟೆಕ್ಸ್‌ಟೈಲ್ ಎಕ್ಸ್‌ಪೋರ್ಟ್ ಪ್ರಮೋಷನ್ ಕೌನ್ಸಿಲ್ (ಇಪಿಸಿ)

ನೋಂದಣಿಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

ಸಮ್ಮೇಳನಾಧ್ಯಕ್ಷರಾಗಿ ಟಿ. ಗೋವಿಂದರಾಜು ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ಘಟಕದ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಜನಪದ ತಜ್ಞ ಟಿ. ಗೋವಿಂದರಾಜು ಆಯ್ಕೆಯಾಗಿದ್ದಾರೆ.

ಸಮ್ಮೇಳನದ ದಿನಾಂಕ, ಸ್ಥಳ ಮತ್ತು ಇತರ ಮಾಹಿತಿಗಳನ್ನು ಮುಂದಿನ ದಿನಗಳಲ್ಲಿ ತಿಳಿಸಲಾಗುವುದು ಎಂದು ಕಸಾಪ ದಾಸರಹಳ್ಳಿ ವಿಧಾನಸಭೆ ಕ್ಷೇತ್ರ ಘಟಕದ ಅಧ್ಯಕ್ಷ ಲಿಂಗರಾಜು ಎ. ಕಾಳೇಹಳ್ಳಿ ತಿಳಿಸಿದ್ದಾರೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

BUSINESS

Business to Business

Business

WANTED BUSINESS Partners Saree Business Contact: 8892501007/ 9606701007

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted&, Agriculture Lands Call:7204995189

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

WE, GANGARAJU N and Lakshmidevi N.V R/at. Machohalli, Magadi Road, Bengaluru-91, have changed our minor son's name from Chinmaye Gowda G to CHINMAYGOWDA G vide affidavit dated 23-02-2024 before notary S. Samuel Solomon, Bengaluru.

PROPERTY CORNER

LAND FOR SALE (BANGALORE URBAN - ANEKAL)

73 Guntas of Land with clear titles attached to Residential area near Electronic City and Jigani Industrial Area, Anekal - Bannergatta Ring Road.

CONTACT: 87623 81993

JOB OPPORTUNITIES

Accounts & Finance

WANTED FEMALE Office Assistant Knowing Accounts with Tally Having Fluency In English & Hindi In & Around Rajajinagar Contact: 9108458798/ 23384085

Drivers

WANTED EXPERIENCED DRIVERS for Water Tankers in Bangalore South. Contact Immediately. Call 9448171416

DH Classifieds More value, more impact | ಪ್ರಜಾವಾಣಿ

RECRUITMENT

BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY

@ 2481/-* FOR 15 WORDS

*Conditions apply

www.dhclassifieds.com BOOK NOW

For more details contact: +91 9886213331 | +91 9901641752 | +91 9845114560

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager, The Printers (Mysore) Pvt. Ltd. Bengaluru

ಜೆಡಿಎಸ್: ಎಚ್‌ಡಿಕೆ ಮನೆಯಲ್ಲಿ ಸಭೆ– ಪಕ್ಷಕ್ಕೇ ಕ್ಷೇತ್ರ ಖಚಿತವೆಂದ ಜಿಟಿಡಿ, ಪುಟ್ಟರಾಜು

ಮಂಡ್ಯಕ್ಕಾಗಿ ಮುಖಂಡರ ಪಟ್ಟು

ಪ್ರಜಾವಾಣಿ ವಾರ್ತೆ

ರಾಮನಗರ: ಮೈತ್ರಿ ಪಕ್ಷಗಳಾದ ಬಿಜೆಪಿ ಮತ್ತು ಜೆಡಿಎಸ್ ನಡುವೆ ಮಂಡ್ಯ ಲೋಕಸಭಾ ಕ್ಷೇತ್ರದ ಟಿಕೆಟ್ ಹಗ್ಗಜಗ್ಗಾಟ ಮುಂದುವರಿದೆ. ಇದರ ನಡುವೆ ಭಾನುವಾರ ತಾಲ್ಲೂಕಿನ ಕೇತಗಾನ-ಹಳ್ಳಿಯಲ್ಲಿರುವ ಜೆಡಿಎಸ್ ಅಧ್ಯಕ್ಷ ಎಚ್‌.ಡಿ. ಕುಮಾರಸ್ವಾಮಿ ಅವರ ತೋಟದ ಮನೆಯಲ್ಲಿ ಪಕ್ಷದ ನಾಯಕರು ಹಾಗೂ ಮಂಡ್ಯ ಮುಖಂಡರ ಸಭೆ ನಡೆದಿದೆ.

ಜಿಲ್ಲೆಯಿಂದ ಬಂದಿದ್ದ ಪಕ್ಷದ ಪದಾಧಿಕಾರಿಗಳು, ಮಂಡ್ಯವನ್ನು ಯಾವುದೇ ಕಾರಣಕ್ಕೂ ಬಿಜೆಪಿಗೆ ಬಿಡಬಾರದು. ನಿಖಿಲ್ ಕುಮಾರಸ್ವಾಮಿ ಅವರೇ ಮತ್ತೆ ಕಣಕ್ಕಿಳಿಯಬೇಕು. ಅವರನ್ನು ಗೆಲ್ಲಿಸುವ ಜವಾಬ್ದಾರಿ ನಮ್ಮದು. ಮೈತ್ರಿ ಬಲದಿಂದ ಅವರ ಗೆಲುವು ಖಚಿತ ಎಂದು ಮುಖಂಡರು ಕುಮಾರಸ್ವಾಮಿ ಅವರ ಬಳಿ ಪಟ್ಟು ಹಿಡಿದಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಸಭೆ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಶಾಸಕ ಜಿ.ಟಿ. ದೇವೇಗೌಡ, ‘ಮಂಡ್ಯ ಟಿಕೆಟ್ ಜೆಡಿಎಸ್‌ಗೆ ಖಚಿತವಾಗಿದೆ. ಅಲ್ಲಿನ ಸ್ಥಳೀಯ ನಾಯಕರ ಜೊತೆ ಚುನಾವಣೆ ಸಿದ್ಧತೆ ಕುರಿತು ಸಭೆ ನಡೆಸುತ್ತಿದ್ದೇವೆ. ಅಭ್ಯರ್ಥಿ ಯಾರಾಗಬೇಕೆಂಬುದರ ಬಗ್ಗೆಯೂ ಅಭಿಪ್ರಾಯ ಸಂಗ್ರಹಿಸುತ್ತಿದ್ದೇವೆ’ ಎಂದು ಹೇಳಿದರು.

ಟಿಕೆಟ್‌ಗಾಗಿ ಸುಮಲತಾ ಅವರು ಸಭೆ ನಡೆಸಿರುವ ವಿಷಯ ಕುರಿತು ಪ್ರತಿಕ್ರಿಯಿಸಿದ ಅವರು, ‘ಸುಮಲತಾ ಅವರು ಬಿಜೆಪಿಯ ಅಧಿಕೃತ ಸಂಸದೆಯಲ್ಲ. ಆದರೂ, ಟಿಕೆಟ್ ಕೇಳುವುದರಲ್ಲಿ ತಪ್ಪಿಲ್ಲ. ಮಂಡ್ಯ ಕೇಳಿದರೆ ಬೆಂಗಳೂರು ಉತ್ತರ-ದಲ್ಲಾದರೂ ಕೊಡಬಹುದು ಎಂಬ ಲೆಕ್ಕಾಚಾರ ಇರಬಹುದು. ಈ ಬಗ್ಗೆ ನನಗೂ ಕೆಲವರು ಹೇಳುತ್ತಿದ್ದಾರೆ’ ಎಂದು ಹೇಳಿದರು.

ಮುಖಂಡ ಸಿ.ಎಸ್. ಪುಟ್ಟರಾಜು ಮಾತನಾಡಿ, ‘ಮೊದಲ ಹಂತದಲ್ಲೇ ಹಾಸನ ಮತ್ತು ಮಂಡ್ಯ ಟಿಕೆಟ್ ವಿಷಯ ಇತ್ಯರ್ಥ ಆಗಲಿದೆ. ಮತಗಳ ಆಧಾರದ ಮೇಲೆ ತೀರ್ಮಾನ ಮಾಡಿದರೂ ಎರಡೂ ಕಡೆ ಜೆಡಿಎಸ್‌ಗೆ ಸಿಗಲಿದೆ. ನಮ್ಮಲ್ಲೂ ಸ್ಪರ್ಧೆಗೆ ಪ್ರಬಲ ಆಕಾಂಕ್ಷಿಗಳಿದ್ದಾರೆ. ಹಾಗಾಗಿ, ಚುನಾವಣೆ ಕುರಿತು ಚರ್ಚಿಸಲು ಸಭೆ ಕರೆದಿದ್ದಾರೆ’ ಎಂದು ಹೇಳಿದರು.

ಆಕಾಂಕ್ಷಿ ಅಲ್ಲ: ‘ನಾನು ಮಂಡ್ಯ ಟಿಕೆಟ್ ಆಕಾಂಕ್ಷಿಯಲ್ಲ. ಪಕ್ಷದ ತೀರ್ಮಾನಕ್ಕೆ ಬದ್ಧವಾಗಿದ್ದೇನೆ. ನಿಖಿಲ್ ಕುಮಾರಸ್ವಾಮಿ ಅವರನ್ನು ಮಂಡ್ಯಕ್ಕೆ ಕರೆತರಲು ಎಲ್ಲಾ ರೀತಿಯ ಪ್ರಯತ್ನ ಮಾಡುತ್ತೇವೆ. ಸಭೆಯಲ್ಲೂ ಅವರ ಮನವೊಲಿಸುವ ಪ್ರಯತ್ನ ಮಾಡಿದ್ದೇವೆ. ಅಂತಿಮವಾಗಿ ಅವರೇನು ನಿರ್ಧಾರ ಕೈಗೊಳ್ಳುತ್ತಾರೊ ನೋಡಬೇಕು’ ಎಂದು ಹೇಳಿದರು.

‘ಟಿಕೆಟ್‌ಗಾಗಿ ಸುಮಲತಾ ಅವರು ಸಭೆ ಮಾಡುವುದನ್ನೇ ತಪ್ಪೆನ್ನಲಾಗದು. ಅಂತಿಮವಾಗಿ ಎರಡೂ ಪಕ್ಷಗಳ ನಾಯಕರು ತೀರ್ಮಾನ ಮಾಡುತ್ತಾರೆ. ಅದಕ್ಕೆ ನಾವು ತಲೆ ಬಾಗುತ್ತೇವೆ’ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಜಿಲ್ಲೆಯ ಮುಖಂಡ ಸುರೇಶ್ ಗೌಡ, ‘ಮಂಡ್ಯ ಟಿಕೆಟ್ ಕುರಿತು ಅಂತಿಮವಾಗಿ ಮೈತ್ರಿ ನಾಯಕರು ನಿರ್ಧರಿಸಲಿದ್ದಾರೆ’ ಎಂದು ಹೇಳಿದರು.

ತೋಟದ ಮನೆಯಲ್ಲೇ ನಾಯಕರು ಹಾಗೂ ಮುಖಂಡರಿಗೆ ರಾತ್ರಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಊಟದ ಬಳಿಕವೂ ಸಭೆ ಮುಂದುವರಿಯಲಿದೆ ಎಂದು ಮೂಲಗಳು ತಿಳಿಸಿವೆ.

ನಗರದಲ್ಲಿ ಇಂದು

‘ನೀಲಗಿರಿ ಬೆಟ್ಟಗಳ’ ಕುರಿತು ಛಾಯಾಚಿತ್ರ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10ರಿಂದ

ಸಮಾ ಉತ್ಸವದ ಉದ್ಘಾಟನೆ: ಕೊಳಲು: ರವಿಚಂದ್ರ ಕೊಳೂರ್, ಪಿಟೀಲು: ಆರ್. ರಘುರಾಮ್, ತವಿಲ್: ವಿ. ಮಣಿ, ಮೃದಂಗ: ಕೆ.ಯು. ಜಯಚಂದ್ರ ರಾವ್, ಘಟ: ಗಿರಿಧರ್ ಉಡುಪ, ಹಾಸ್ಯರಸ ಸಿಂಚನ: ವೈ.ವಿ. ಗುಂಡೂರಾವ್, ಅತಿಥಿಗಳು: ಕುಮಾರ್ ಎನ್. ರಾಮಮೋಹನ್, ಆನಂದ್ ರಾಜ್, ಗಾಯನ: ನಾಗವಲ್ಲಿ ನಾಗರಾಜ್, ಪಿಟೀಲು: ಜಿ. ವೆಂಕಟೇಶ ಜೋಸಿಯರ್, ಮೃದಂಗ: ರೇಣುಕ ಪ್ರಸಾದ್, ‘ಸಮಾ ಪುರಸ್ಕಾರ–2024’: ವಿ. ಮಣಿ, ವಾಸುದೇವ ರಾವ್, ಕೆ.ಯು. ರಾಘವೇಂದ್ರ ರಾವ್, ಇಡಗುಂಜಿ ಗಣೇಶ್ ಎಲ್. ಭಟ್, ಆಯೋಜನೆ: ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಬೆಳಿಗ್ಗೆ 10ರಿಂದ

ಯುವ ಸಮೃದ್ಧಿ ಸಮ್ಮೇಳನ ಬೃಹತ್ ಉದ್ಯೋಗ ಮೇಳ– 2024: ಉದ್ಘಾಟನೆ: ಸಿದ್ದರಾಮಯ್ಯ, ಮೇಳದ ಲಾಂಛನದ ಅನಾವರಣ: ಡಿ.ಕೆ. ಶಿವಕುಮಾರ್, ಅತಿಥಿಗಳು: ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಉಪಸ್ಥಿತಿ: ಡಾ.ಶರಣಪ್ರಕಾಶ ಪಾಟೀಲ, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಜಮೀರ್ ಅಹಮದ್ ಖಾನ್, ಸುರೇಶ್ ಬಿ.ಎಸ್., ಆಯೋಜನೆ: ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸ್ಥಳ: ಅರಮನೆ ಮೈದಾನ, ಬೆಳಿಗ್ಗೆ 11.30ರಿಂದ

ಸಂಸ್ಥಾಪಕರ ದಿನಾಚರಣೆ, ‘ಶಿವಲಿಂಗ ಪ್ರಶಸ್ತಿ’ ಪ್ರದಾನ: ಉದ್ಘಾಟನೆ: ಎಚ್.ಎಸ್. ಶಿವಪ್ರಕಾಶ್, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರಶಸ್ತಿ ಪುರಸ್ಕೃತರು: ರವೀಂದ್ರ ಸೊರಗಾವಿ, ಪ್ರಶಸ್ತಿ ಪ್ರದಾನ: ಧರಣಿದೇವಿ ಮಾಲಗತ್ತಿ, ಅತಿಥಿಗಳು: ಜಯವಿಭವಸ್ವಾಮಿ, ಬಲವಂತರಾವ್ ಪಾಟೀಲ್, ಬನಶಂಕರಿ ಅಂಗಡಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಸಂಸ ಬಯಲು ರಂಗಮಂದಿರ, ರವೀಂದ್ರ ಕಲಾಕ್ಷೇತ್ರ ಹಿಂಭಾಗ, ಜೆ.ಸಿ. ರಸ್ತೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸಿದ್ದಿ ಯುವಕನ ಕೊಲೆ: 6 ಮಂದಿ ಸೆರೆ

ಪ್ರಜಾವಾಣಿ ವಾರ್ತೆ

ಯಲ್ಲಾಪುರ (ಉತ್ತರ ಕನ್ನಡ): ತಾಲ್ಲೂಕಿನ ಹುಣಸೆಟ್ಟಿಕೊಪ್ಪದಲ್ಲಿ ಬೈಕ್ ಓವರ್‌ಟೇಕ್ ಮಾಡಿದ ಕ್ಷುಲ್ಲಕ ಕಾರಣಕ್ಕೆ ಎರಡು ಗುಂಪಿನ ನಡುವೆ ಹೊಡೆದಾಟ ನಡೆದು ಯುವಕನೊಬ್ಬನನ್ನು ಶನಿವಾರ ರಾತ್ರಿ ಕೊಲೆ ಮಾಡಿರುವ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರು ಆರೋಪಿಗಳನ್ನು ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಪ್ರಜ್ವಲ ಕಕ್ಕೇರಿಕರ

ಹಳಿಯಾಳ ತಾಲ್ಲೂಕಿನ ಕಾಕತಿಕೊಪ್ಪದ ಸಿದ್ದಿ ಸಮುದಾಯಕ್ಕೆ ಸೇರಿದ ಪ್ರಜ್ವಲ ಪ್ರಕಾಶ ಕಕ್ಕೇರಿಕರ (24) ಕೊಲೆಗೀಡಾದ ಯುವಕ. ಹುಣಶೆಟ್ಟಿಕೊಪ್ಪ ಗ್ರಾಮದ ಸಾಣಾ ಮರಾಠಿ, ರಿತೇಶ ಪಾಟೀಲ, ಪಾಂಡುರಂಗ ಕಳಸೂರಕರ, ಪ್ರಶಾಂತ ಕಳಸೂರಕರ, ರೂಪೇಶ, ವಿನಾಯಕ ಬೊವಿವಡ್ಡರ ಬಂಧಿತರು. ಪ್ರಕರಣದ ಎರಡನೇ ಆರೋಪಿ ಅನಿಕೇತ ಮಿರಾಶಿ ತಲೆಮರೆಸಿಕೊಂಡಿದ್ದಾನೆ.

‘ಗಲಾಟೆ ನಡೆಸಿದ ಗುಂಪಿನಲ್ಲಿರುವ ಯುವಕನೊಬ್ಬ ಶಾಸಕ ಶಿವರಾಮ ಹೆಬ್ಬಾರ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡ ವ್ಯಕ್ತಿಯೊಬ್ಬರ ಪುತ್ರನಾಗಿದ್ದು, ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ ಎಂದು ಸಿದ್ದಿ ಸಮುದಾಯದವರು ಆರೋಪಿಸಿದ್ದಾರೆ.

ಚಿತ್ರಾವಳಿ

ಸೇಂಟ್ ಜೋಸೆಫ್ಸ್ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಮೈಸೂರು ವಿಶ್ವವಿದ್ಯಾಲಯದಲ್ಲಿ ನಡೆದ ರಾಜ್ಯ ಮಟ್ಟದ ಯುವಜನೋತ್ಸವದಲ್ಲಿ ಪ್ರಬಂಧ, ನೃತ್ಯ ಸೇರಿ ವಿವಿಧ ಸ್ಪರ್ಧೆಗಳಲ್ಲಿ ಬಹುಮಾನಗಳನ್ನು ಪಡೆದರು. ದ್ರಾವಿಡ್, ಗೊಹಿಲ್ ಜೆಮಿನ್ ಕುಮಾರ್, ವರ್ಧಿತ, ರೋಹಿಣಿ ಅವರಿಗೆ ವಿಶ್ವವಿದ್ಯಾಲಯದ ಕುಲಸಚಿವೆ ವಿ.ಆರ್. ಶೈಲಜ ಹಾಗೂ ಹಣಕಾಸಿನ ಅಧಿಕಾರಿ ರೇಖಾ ಕೆ.ಎಸ್. ಬಹುಮಾನ ವಿತರಿಸಿದರು.

ಮೈಸೂರಿನ ಮುಲಕನಾಡು ಸಭಾ ಚಾರಿಟಬಲ್ ಟ್ರಸ್ಟ್ ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಲಾ ವಿಮರ್ಶಕ ಎಂ.ಸೂರ್ಯಪ್ರಸಾದ್ ಅವರಿಗೆ ‘ಶ್ರೀ ತ್ಯಾಗರಾಜ ಪ್ರಶಸ್ತಿ’ಯನ್ನು ಸಾಹಿತಿ ಟಿ.ವಿ. ವೆಂಕಟಾಚಲಶಾಸ್ತ್ರಿ ಪ್ರದಾನ ಮಾಡಿದರು.

‘ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ ಹೆಜ್ಜೆ ಗುರುತುಗಳು’ ಗೋಷ್ಠಿಯಲ್ಲಿ ಶಶಿಕಾಂತ್ ಪಟ್ಟಣ್ ಒತ್ತಾಯ

‘ವೈದಿಕ ಪ್ರೇರಿತ ವಚನಗಳ ಪರಿಷ್ಕರಣೆ ಅಗತ್ಯ’

ಪ್ರಜಾವಾಣಿ ವಾರ್ತೆ

ಗೋಷ್ಠಿಯಲ್ಲಿ ಭಾಗವಹಿಸಿದ್ದ ಪುರುಷೋತ್ತಮ ಬಿಳಿಮಲೆ, ಶಶಿಕಾಂತ ಆರ್ ಪಟ್ಟಣ್, ಎಸ್‌ಜಿ. ಸಿದ್ಧರಾಮಯ್ಯ, ಎಲ್‌ಎನ್ ಮುಕುಂದರಾಜ್ ಮತ್ತು ಚಿನ್ನಸ್ವಾಮಿ ಸೋಸಲೆ —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ವಚನಗಳಲ್ಲಿ ನುಸುಳಿರುವ ವೈದಿಕ ಪ್ರೇರಿತ ವಿಚಾರಗಳನ್ನು ತೆಗೆಯುವುದಕ್ಕಾಗಿ ಕೆಲವು ವಚನಗಳ ಪರಿಷ್ಕರಣೆ ಅಗತ್ಯವಾಗಿದೆ’ ಎಂದು ಪ್ರವರ್ ರೂರಲ್ ಕಾಲೇಜ್ ಆಫ್ ಫಾರ್ಮಸಿಯ ಪ್ರಾಂಶುಪಾಲ ಶಶಿಕಾಂತ್ ಆರ್. ಪಟ್ಟಣ್ ಒತ್ತಾಯಿಸಿದರು.

‘ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶ’ದಲ್ಲಿ ಭಾನುವಾರ ನಡೆದ ‘ಕರ್ನಾಟಕದಲ್ಲಿ ಸಾಮಾಜಿಕ ನ್ಯಾಯದ ಹೆಜ್ಜೆ ಗುರುತುಗಳು’ ಎಂಬ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ವಚನಗಳ ಪರಿಷ್ಕರಣೆಗೆ ಒಂದು ಆಯೋಗ ರಚಿಸಬೇಕು. ವಚನ ವಿಶ್ವ ವಿದ್ಯಾಲಯ ಸ್ಥಾಪಿಸಬೇಕು. ವಚನಗಳನ್ನು ಭಾಷಾಂತರ ಮಾಡುವುದರ ಮೂಲಕ ಬಸವಣ್ಣ ಮತ್ತು ಶರಣರ ವಿಚಾರಧಾರೆಗಳನ್ನು ಇಡೀ ವಿಶ್ವಕ್ಕೆ ಪಸರಿಸುವ ಕೆಲಸ ಮಾಡಬೇಕು’ ಎಂದರು.

‘ಲಿಂಗಾಯತ ಅಥವಾ ಬಸವಾದಿ ಪರಂಪರೆಯ ಚಳವಳಿಯು ಕೇಸರೀಕರಣವಾಗುತ್ತಿದೆ. ಬಸವೋತ್ತರ ಕಾಲದಲ್ಲಿ ಮತ್ತೆ ವೈದಿಕ ಆಚರಣೆಗಳು ಮುನ್ನೆಲೆಗೆ ಬರುತ್ತಿವೆ. ಬಸವಣ್ಣನವರು ಒಬ್ಬ ನಾಸ್ತಿಕ, ಸಮಾಜವಾದಿ ಆಗಿದ್ದರು. ಪೌರೋಹಿತ್ಯವನ್ನು ಮುಂಬಾಗಿಲಿನಿಂದ ಒದ್ದು ಓಡಿಸಿದ್ದರು. ಆದರೆ ಅದೇ ಪೌರೋಹಿತ್ಯ ಹಿಂಬಾಗಿಲಿನಿಂದ ಒಳಗೆ ಪ್ರವೇಶಿಸುತ್ತಿದೆ. ಬಸವಣ್ಣನವರು ಒಪ್ಪದ ಸಿದ್ಧಾಂತವನ್ನು ಅಪ್ಪಿಕೊಂಡು, ಅವರು ಎತ್ತಿ ಹಿಡಿದಿದ್ದ ಸಿದ್ಧಾಂತವನ್ನು ಇಂದು ಸಮಾಧಿ ಮಾಡಲಾಗುತ್ತಿದೆ’ ಎಂದು ಬೇಸರಿಸಿದರು.

ಲೇಖಕ ಪುರುಷೋತ್ತಮ ಬಿಳಿಮಲೆ, ‘2022ರಲ್ಲಿ ಜನಗಣತಿ ಆಗಿದ್ದರೆ ರಾಜ್ಯದಲ್ಲಿರುವ 28 ಲೋಕಸಭೆ ಕ್ಷೇತ್ರಗಳ ಸಂಖ್ಯೆ ಹೆಚ್ಚಾಗುತ್ತಿದ್ದವು. ಇಡೀ ದಕ್ಷಿಣ ಭಾರತದಲ್ಲಿ 170 ಲೋಕಸಭೆ ಕ್ಷೇತ್ರಗಳಿವೆ. ಆದರೆ, ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಒಟ್ಟು ಸಂಸತ್ ಕ್ಷೇತ್ರಗಳು ದಕ್ಷಿಣ ಭಾರತದ ಲೋಕಸಭಾ ಕ್ಷೇತ್ರಗಳ ಸಂಖ್ಯೆಗೆ ಸಮಾನವಾಗುತ್ತವೆ. ಆದ್ದರಿಂದ ಅಲ್ಲಿನ ಸಂಸದರಿಗೆ ಸಿಗುವ ಗೌರವ ಈ ಭಾಗದವರಿಗೂ ಸಿಗಬೇಕು. ಇದು ಒಕ್ಕೂಟ ವ್ಯವಸ್ಥೆಯ ಉದ್ದೇಶ. ಇಲ್ಲದಿದ್ದರೆ, ಪ್ರಸ್ತುತ ದೇಶದ ಈಶಾನ್ಯ ರಾಜ್ಯಗಳಲ್ಲಿ ಏನಾಗುತ್ತಿದೆಯೊ ಅದು ಮುಂದಿನ ಹತ್ತು ವರ್ಷಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲೂ ಆಗಲಿದೆ’ ಎಂದು ಕಳವಳ ವ್ಯಕ್ತಪಡಿಸಿದರು.

> ಮಹಿಳೆಯರು, ದಲಿತರು, ದಮನಿತರ ಪರವಾಗಿ ಮಾತನಾಡಿದ್ದ ಎಲ್ಲರನ್ನೂ ದೇಶದಿಂದ ಓಡಿಸಲಾಗಿದೆ ಅಥವಾ ನಿರ್ನಾಮ ಮಾಡಲಾಗಿದೆ
>
> **ಎಲ್.ಎನ್. ಮುಕುಂದರಾಜ್,** ಕವಿ

‘ದೇಶದಲ್ಲಿರುವ 19,569 ಮಾತೃಭಾಷೆಗಳಿಗೆ ಡಾ.ಬಿ.ಆರ್. ಅಂಬೇಡ್ಕರ್ ಅವರು ಬರೆದಿರುವ ಸಂವಿಧಾನವೇ ವ್ಯಾಕರಣವಾಗಿದೆ. ದೇಶದಲ್ಲಿ ಒಂದು ಕಥೆ ಸೃಷ್ಟಿಯಾದರೆ ಅದು ಪ್ರಾದೇಶಿಕವಾಗಿ ಹೇಗೆ ಬೇಕೋ ಆ ರೀತಿಯಾಗಿ ಮರುಸೃಷ್ಟಿ ಆಗುತ್ತದೆ. ಇದೇ ಒಕ್ಕೂಟ ವ್ಯವಸ್ಥೆಯ ಉದ್ದೇಶ’ ಎಂದರು.

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಅವರು ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಕವಿ ಎಲ್.ಎನ್. ಮುಕುಂದರಾಜ್, ಪ್ರಾಧ್ಯಾಪಕ ಚಿನ್ನಸ್ವಾಮಿ ಸೋಸಲೆ ಭಾಗವಹಿಸಿದ್ದರು.

‘ಗ್ಯಾರಂಟಿ: ಕುಟುಂಬಕ್ಕೆ 7 ಸಾವಿರ’

ಗೋಷ್ಠಿಯಲ್ಲಿ ಸಂತೋಷ್ ಮೆಹ್ರೋತ್ರಾ ಮತ್ತು ಕೃಷ್ಣರಾಜ್ ಭಾಗವಹಿಸಿದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಸರ್ಕಾರ ಐದು ಗ್ಯಾರಂಟಿಗಳನ್ನು ನೀಡುವುದರ ಮೂಲಕ ಪ್ರತಿ ತಿಂಗಳು ಪ್ರತಿ ಕುಟುಂಬಕ್ಕೆ ₹6 ಸಾವಿರದಿಂದ ₹7 ಸಾವಿರ ಆದಾಯ ಹಂಚಿಕೆ ಮಾಡುತ್ತಿದೆ’ ಎಂದು ಪ್ರಾಧ್ಯಾಪಕ ಕೃಷ್ಣರಾಜ್ ಅವರು ಹೇಳಿದರು.

ಸಮಾವೇಶದಲ್ಲಿ ಭಾನುವಾರ ನಡೆದ ‘ಆದಾಯದ ಅಸಮಾನತೆ ಮತ್ತು ಸಾರ್ವತ್ರಿಕ ಮೂಲ ಆದಾಯ’ ಎಂಬ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಸರ್ಕಾರದ ಪಂಚ ಗ್ಯಾರಂಟಿಗಳಿಂದ ಪ್ರತಿಯೊಬ್ಬರೂ ಕನಿಷ್ಠ ಆದಾಯ ಪಡೆಯುತ್ತಿದ್ದಾರೆ. ಆದರೆ, ಕೇಂದ್ರ ಸರ್ಕಾರ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಆದ್ಯತೆ ನೀಡುವ ಮೂಲಕ ಕಾರ್ಪೊರೇಟ್ ಮತ್ತು ಕೈಗಾರಿಕಾ ವಲಯಗಳನ್ನು ಬೆಂಬಲಿಸುತ್ತಿದೆ. ಕೇಂದ್ರ ಸರ್ಕಾರದ ನೀತಿಗಳು ಕೈಗಾರಿಕೆ ಹಾಗೂ ಕಾರ್ಪೊರೇಟ್ ಕ್ಷೇತ್ರಗಳಿಗೆ ಪೂರಕವಾಗಿವೆ’ ಎಂದು ಹೇಳಿದರು.

ಶಿಕ್ಷಣ ತಜ್ಞ, ಯುಜಿಸಿ ಮಾಜಿ ಅಧ್ಯಕ್ಷ ಸುಖದೇವ್ ಥೋರಟ್ ಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದರು. ಆರ್ಥಿಕ ತಜ್ಞ ಸಂತೋಷ್ ಮೆಹ್ರೋತ್ರಾ, ಕಾನೂನು ತಜ್ಞ ಬಾಬು ಮ್ಯಾಥ್ಯೂ ಪಾಲ್ಗೊಂಡಿದ್ದರು.

ಕೇಂದ್ರದ ವಿರುದ್ಧ ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ ಆಕ್ರೋಶ

‘ಪ್ರಧಾನಿಯಿಂದ ಉದ್ಯಮಿಗಳಿಗೆ ಭೂಮಿ’

ಪ್ರಜಾವಾಣಿ ವಾರ್ತೆ

ಗೋಷ್ಠಿಯಲ್ಲಿ ಜಿಗ್ನೇಶ್ ಮೇವಾನಿ ಮಾತನಾಡಿದರು. ಜೆಎನ್‌ಯು ಸಹಾಯಕ ಪ್ರಾಧ್ಯಾಪಕ ಅಮಿತ್ ಥೋರಟ್, ಅರ್ಥಶಾಸ್ತ್ರಜ್ಞ ವಿನೋಜ್ ಅಬ್ರಹಾಂ, ಕೆ. ರಾಜು ಹಾಗೂ ಪತ್ರಕರ್ತೆ ಸೀಮಾ ಚಿಸ್ತಿ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಭೂ ಸುಧಾರಣೆಗೆ ಸಂಬಂಧಿಸಿದಂತೆ ಅಂಬೇಡ್ಕರ್ ಅವರು ಉಳುವವರಿಗೆ ಭೂಮಿ ನೀಡಬೇಕೆಂದು ಸಲಹೆ ನೀಡಿದ್ದರು. ಆದರೆ, ಇದನ್ನು ಉದ್ಯಮಗಳಿಗೆ ಎಂದು ನರೇಂದ್ರ ಮೋದಿ ಬದಲಾಯಿಸಿದ್ದಾರೆ’ ಎಂದು ಗುಜರಾತ್ ಶಾಸಕ ಜಿಗ್ನೇಶ್ ಮೇವಾನಿ ಅವರು ಆಕ್ರೋಶ ವ್ಯಕ್ತಪಡಿಸಿದರು.

ಸಮಾಜ ಕಲ್ಯಾಣ ಇಲಾಖೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶ’ದಲ್ಲಿ ‘ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರಿಗೆ ನಿಶ್ಚಯಾತ್ಮಕ ಕ್ರಮಗಳು’ ಗೋಷ್ಠಿಯಲ್ಲಿ ಭಾಗವಹಿಸಿ, ಮಾತನಾಡಿದರು.

‘ಸಮಾಜದಲ್ಲಿ ಸಮಾನತೆ ತರಲು ಭೂ ರಹಿತ ದಲಿತರು ಹಾಗೂ ಇತರ ಹಿಂದುಳಿದ ವರ್ಗದವರಿಗೆ ಭೂಮಿ ಒದಗಿಸಬೇಕು. ಇದರಿಂದ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನ ದೊರೆಯುತ್ತದೆ. ಭೂಮಿ ಎನ್ನುವುದು ಸ್ವಾಭಿಮಾನದ ಸಂಕೇತವಾಗಿದೆ. ಆದರೆ, ದಲಿತರಿಗೆ ಹಂಚಿಕೆಯಾದ ಭೂಮಿಯನ್ನು ಕಾನೂನು ಬಾಹಿರವಾಗಿ ವಶಪಡಿಸಿಕೊಳ್ಳಲಾಗುತ್ತಿದೆ’ ಎಂದು ಹೇಳಿದರು.

‘ಜಾಗತೀಕರಣದ ಬಳಿಕ ಕೃಷಿ ಲಾಭದಾಯಕವಲ್ಲ ಎಂದು ಯುವಜನರು ಅದಾನಿ, ಅಂಬಾನಿ ಅವರ ಕಂಪನಿಗಳಲ್ಲಿ ಕೆಲಸಕ್ಕೆ ಸೇರಿಕೊಂಡರು. ಈಗ ಪರಿಸ್ಥಿತಿ ಸಂಪೂರ್ಣ ಬದಲಾಗಿದೆ. ಕೃಷಿ ಕೂಡ ಲಾಭದಾಯಕವಾಗುವತ್ತ ಮುಖಮಾಡಿದೆ. ಆದರೆ, ಭೂ ಸುಧಾರಣೆಗೆ ಸಂಬಂಧಿಸಿದಂತೆ ಯಾವುದೇ ಸರ್ಕಾರ ಆದ್ಯತೆ ನೀಡುತ್ತಿಲ್ಲ. ಇದಕ್ಕೆ ಬೇರೆ ಬೇರೆ ಒತ್ತಡಗಳು ಕಾರಣವಾಗಿವೆ’ ಎಂದು ಅವರು ತಿಳಿಸಿದರು.

ಎಐಸಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಇತರ ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿಭಾಗದ ರಾಷ್ಟ್ರೀಯ ಸಂಯೋಜಕ ಕೆ. ರಾಜು, ‘ದೇಶದಲ್ಲಿ ಅಸಮಾನತೆ ಹೆಚ್ಚಿದೆ. ಸಂಪತ್ತು ಕೆಲವರ ಬಳಿ ಕೇಂದ್ರೀಕೃತವಾಗಿದೆ. ಎಲ್ಲ ಕ್ಷೇತ್ರಗಳನ್ನೂ ಖಾಸಗೀಕರಣ ಮಾಡಲಾಗುತ್ತಿದೆ. ಆದ್ದರಿಂದ ಖಾಸಗಿ ವಲಯದಲ್ಲಿಯೂ ಮೀಸಲಾತಿಗೆ ಆಗ್ರಹಿಸಬೇಕಿದೆ’ ಎಂದು ಮೇವಾನಿ ಅವರು ಹೇಳಿದರು.

ರಾಷ್ಟ್ರೀಯ ಏಕತಾ ಸಮಾವೇಶ

ಸಂವಿಧಾನ ರೂಪಕ ಸಮಾವೇಶದ ಸಮಾರೋಪದಲ್ಲಿ ಕಲಾವಿದರು, ಯಕ್ಷಗಾನದ ಮೂಲಕ ಸಂವಿಧಾನ ಕುರಿತು ನೃತ್ಯ ರೂಪಕ ಪ್ರಸ್ತುತ ಪಡಿಸಿದರು –ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

‘ಅಲ್ಪಸಂಖ್ಯಾತರು ಹೊರೆಯೆಂದು ಬಿಂಬಿತ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇವತ್ತಿನ ಸಂದರ್ಭದಲ್ಲಿ ಅಲ್ಪಸಂಖ್ಯಾತರು ಅಭಿವೃದ್ಧಿಗೆ ಕೊಡುಗೆ ನೀಡುತ್ತಿಲ್ಲ, ಅವರು ಈ ಸಮಾಜಕ್ಕೆ ಹೊರೆ ಎಂಬ ಸಂಗತಿಯನ್ನು ‘ವಾಟ್ಸ್‌ಆ್ಯಪ್’ ವಿಶ್ವವಿದ್ಯಾಲಯಗಳಲ್ಲಿ ಹರಡಲಾಗುತ್ತಿದೆ. ಆದರೆ, ಇದು ವಾಸ್ತವವಲ್ಲ’ ಎಂದು ಅಂಕಣಕಾರ ಮುಜಾಫರ್ ಅಸ್ಸಾದಿ ತಿಳಿಸಿದರು.

ಸಮಾವೇಶದಲ್ಲಿ ‘ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರು’ ಗೋಷ್ಠಿಯಲ್ಲಿ ಮಾತನಾಡಿದರು.

‘ಕರ್ನಾಟಕದ ಸಂದರ್ಭದಲ್ಲಿ ಅಲ್ಪಸಂಖ್ಯಾತರು ಅಭಿವೃದ್ಧಿಯ ಭಾಗವಾಗಿದ್ದಾರೆ. ಅಲ್ಪಸಂಖ್ಯಾತರ ಮಾದರಿಗಳಲ್ಲಿ ದಕ್ಷಿಣ ಕನ್ನಡದ ಮಂಗಳೂರಿನ ಬ್ಯಾರಿ ಸಮುದಾಯ ಉತ್ತಮ ಉದಾಹರಣೆ. ಸಣ್ಣ ವ್ಯಾಪಾರ ಮಾಡುತ್ತಿದ್ದ ಈ ಸಮುದಾಯದವರು ಈಗ ದೊಡ್ಡದಾಗಿ ಬೆಳೆದಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಅಲ್ಪಸಂಖ್ಯಾತರಲ್ಲಿ ಬಹುತ್ವವಿಲ್ಲ, ಪ್ರತಿಯೊಬ್ಬ ಅಲ್ಪಸಂಖ್ಯಾತನೂ ಏಕರೂಪಿ ಎಂಬ ಪರಿಕಲ್ಪನೆ ಹೊಂದಲಾಗುತ್ತಿದೆ. ಒಂದೇ ಧರ್ಮ, ಒಂದೇ ಸಾಮಾಜಿಕ ಮೌಲ್ಯ ಹೊಂದಿದ ಸಮುದಾಯವೆಂದು ಚಿತ್ರಿಸಲಾಗುತ್ತಿದೆ. ಇದು ಒಂದು ರೀತಿಯ ತಪ್ಪು ಕಲ್ಪನೆ’ ಎಂದರು.

ಸಾಮಾಜಿಕ ಹೋರಾಟಗಾರ್ತಿ ದು. ಸರಸ್ವತಿ, ‘ಟಾಟಾ, ಬಿರ್ಲಾ ಅವರ ಪರಂಪರೆಯಿಂದ ಅಂಬಾನಿ, ಅದಾನಿ ಅವರ ಪರಂಪರೆಗೆ ಬಂದಿದ್ದೇವೆ. ಎಲ್ಲ ಸಾರ್ವಜನಿಕ ಉದ್ದಿಮೆಗಳು ಸ್ಥಗಿತವಾಗಿ ಮೂರ್ನಾಲ್ಕು ದಶಕಗಳಾಗಿವೆ. ಖಾಸಗಿ ವಲಯದಲ್ಲಿ ಸಾಮಾಜಿಕ ನ್ಯಾಯದ ಬಗ್ಗೆ ಮಾತನಾಡುವುದು ಅಪಹಾಸ್ಯವಾಗಿದೆ. ಅಸಂಘಟಿತ ವಲಯದಲ್ಲಿ ಹೆಚ್ಚಿನ ಮಹಿಳೆಯರು ಕಾರ್ಯನಿರ್ವಹಿಸುತ್ತಿದ್ದಾರೆ. ಪೌರಕಾರ್ಮಿಕರಿಗೆ ಸೂಕ್ತ ಮೂಲಸೌಕರ್ಯಗಳನ್ನು ಒದಗಿಸಲಾಗುತ್ತಿಲ್ಲ. ಆಶಾ, ಅಂಗನವಾಡಿ, ಬಿಸಿಯೂಟದ ಕಾರ್ಯಕರ್ತೆಯರಿಗೆ ಸಹಾಯಧನ ಮಾತ್ರ ಒದಗಿಸಲಾಗುತ್ತಿದೆ. ಅಗತ್ಯವಿರುವ ಕೆಲಸಕ್ಕೆ ಕನಿಷ್ಠ ವೇತನವನ್ನೂ ಒದಗಿಸದಿರುವುದೂ ವಿಪರ್ಯಾಸ’ ಎಂದರು.

ಅಂಕಣಕಾರ ಕೆ.ಎನ್. ಲಿಂಗಪ್ಪ, ‘ಶಾಶ್ವತ ಹಿಂದುಳಿದ ಆಯೋಗವು ಪ್ರತಿ ವರ್ಷ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಮಾಡಬೇಕು. ಆದರೆ, ಆ ಸಮೀಕ್ಷೆ ನಡೆದಿಲ್ಲ. ಅಲೆಮಾರಿ, ಅರೆ ಅಲೆಮಾರಿಗಳ ಸ್ಥಿತಿ ಶೋಚನೀಯವಾಗಿದೆ’ ಎಂದು ಬೇಸರಿಸಿದರು.

ಬ್ರಿಟನ್ ಪ್ರೊಫೆಸರ್‌ಗೆ ಪ್ರವೇಶ ನಿರಾಕರಣೆ

ಪ್ರಜಾವಾಣಿ ವಾರ್ತೆ

ನಿತಾಶಾ ಕೌಲ್

ನವದೆಹಲಿ: ಏಕತಾ ಸಮಾವೇಶದಲ್ಲಿ ಪಾಲ್ಗೊಳ್ಳಲು ಕರ್ನಾಟಕ ಸರ್ಕಾರದ ಆಹ್ವಾನದ ಮೇರೆಗೆ ಬಂದಿದ್ದ ತಮ್ಮನ್ನು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಾಪಸ್ ಕಳುಹಿಸಿದರು ಎಂದು ಬ್ರಿಟನ್‌ನ ವೆಸ್ಟ್‌ಮಿನಿಸ್ಟರ್ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿರುವ ಭಾರತೀಯ ಸಂಜಾತೆ ನಿತಾಶಾ ಕೌಲ್ ಆರೋಪಿಸಿದ್ದಾರೆ.

‘ಮಾನ್ಯತೆ ಇರುವ ವೀಸಾ ತಮ್ಮಲ್ಲಿದ್ದರೂ ಸಕಾರಣವನ್ನು ನೀಡದೆ ವಾಪಸ್ ತೆರಳಲು ವಲಸೆ ವಿಭಾಗದ ಅಧಿಕಾರಿಗಳು ಹೇಳಿದರು. ತಾವು ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಕುರಿತು ಹಿಂದೆ ಟೀಕಿಸಿದ್ದನ್ನು ಅನೌಪಚಾರಿಕವಾಗಿ ಉಲ್ಲೇಖಿಸಿದರು. ದೆಹಲಿಯಿಂದ ಆದೇಶ ಬಂದಿದ್ದು ತಾವು ಪಾಲಿಸುತ್ತಿದ್ದೇವೆ ಎಂದಷ್ಟೇ ತಿಳಿಸಿದರು’ ಎಂದು ‘ಎಕ್ಸ್’ನಲ್ಲಿ ನಿತಾಶಾ ಪೋಸ್ಟ್ ಮಾಡಿದ್ದಾರೆ.

ವೆಸ್ಟ್‌ಮಿನಿಸ್ಟರ್ ವಿಶ್ವವಿದ್ಯಾಲಯದ ಪ್ರಜಾಪ್ರಭುತ್ವ ಅಧ್ಯಯನ ಕೇಂದ್ರದ ನಿರ್ದೇಶಕಿಯಾಗಿರುವ ಪ್ರೊಫೆಸರ್ ನಿತಾಶಾ ಅವರು ಲೇಖಕಿಯೂ ಹೌದು.

ಶುಕ್ರವಾರ ಇಡೀ ರಾತ್ರಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೇ ಕಳೆದು, ಶನಿವಾರ ಬ್ರಿಟನ್‌ಗೆ ವಾಪಸಾದರು. ಕರ್ನಾಟಕದ ಸಚಿವ ಎಚ್‌.ಸಿ.ಮಹದೇವಪ್ಪ ಅವರ ಅಧಿಕೃತ ಆಹ್ವಾನದ ಮೇರೆಗೆ ಬಂದಿದ್ದಾಗಿಯೂ ಅವರು ತಮ್ಮ ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ಭಾರತದ ವಿದೇಶಿ ಪ್ರಜೆ (ಒಸಿಐ) ಎಂಬ ಕಾರ್ಡ್ ಹೊಂದಿದ್ದ ಅವರ ಬಳಿ ಬ್ರಿಟನ್‌ನ ಪಾಸ್‌ಪೋರ್ಟ್ ಕೂಡ ಇತ್ತು. ಆದರೂ ಪ್ರವೇಶ ನಿರಾಕರಿಸಲಾಗಿದೆ.

ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರ ಟೀಕಾಕಾರರಾದ, ಸ್ವೀಡನ್‌ನ ಶಿಕ್ಷಣತಜ್ಞ ಅಶೋಲ್ ಸ್ವೇನ್ ಅವರ ಒಸಿಐ ಅನ್ನೂ ಕೇಂದ್ರ ಸರ್ಕಾರ ಇತ್ತೀಚೆಗೆ ರದ್ದು ಪಡಿಸಿತ್ತು. ಫ್ರೆಂಚ್ ಪತ್ರಕರ್ತೆ ವನೆಸ್ಸಾ ಡೌಗ್ನ್ಯಾಕ್ ಕೂಡ ಒಸಿಐ ರದ್ದತಿಯಿಂದಾಗಿ ಇತ್ತೀಚೆಗೆ ವಾಪಸ್ ತೆರಳಿದ್ದರು.

ಷೇರು ಹೂಡಿಕೆ ಹೆಸರಿನಲ್ಲಿ ₹76 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: ಷೇರಿನಲ್ಲಿ ಹೂಡಿಕೆ ಮಾಡಿದರೆ ಉತ್ತಮ ಲಾಭಗಳಿಸಬಹುದು ಎಂದು ನಂಬಿಸಿ ತಾಲ್ಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಆಸ್ಪತ್ರೆ ವೈದ್ಯ ರಮಣರಾವ್ ಅವರಿಗೆ ಆನ್‌ಲೈನ್ ವಂಚಕರು ₹76 ಲಕ್ಷ ವಂಚಿಸಿದ್ದಾರೆ. ಈ ಬಗ್ಗೆ ಅವರು ನಗರದ ಸಿಇಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ANGELONE ಅಪ್ಲಿಕೇಷನ್ ಅಪ್‌ಡೇಟ್ ಮಾಡಿಕೊಳ್ಳುವಂತೆ ವಂಚಕರು ಮೊದಲು ಗಾಳ ಹಾಕಿದರು. ಆ ಅಪ್ಲಿಕೇಷನ್ ಅಪ್‌ಡೇಟ್ ಆಗಲಿಲ್ಲ. ನಂತರ ವಾಟ್ಸ್‌ಆ್ಯಪ್ ಲಿಂಕ್ ಕಳುಹಿಸಿ, ಜಾಲದ ಸಿಲುಕಿಸಿಕೊಂಡರು. ಷೇರು ಹೂಡಿಕೆ ನೆಪದಲ್ಲಿ ಒಟ್ಟು ₹76 ಲಕ್ಷ ವಂಚಿಸಿದರು ಎಂದು ವೈದ್ಯರು ದೂರು ನೀಡಿದ್ದಾರೆ.

ಸುಲಿಗೆ: ಕಾನ್‌ಸ್ಟೆಬಲ್‌ಗಳ ಮೇಲೆ ದೂರು

ಎಟಿಎಂನಲ್ಲಿ ಸಿಗದ ಹಣ, ಮನೆಯಿಂದ ಗೂಗಲ್ ಪೇ ಮಾಡಿದ ಯುವತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಹಳೇ ಏರ್‌ಪೋರ್ಟ್ ರಸ್ತೆಯಲ್ಲಿ ಘಟನೆ
- ಡ್ರಿಂಕ್ ಆ್ಯಂಡ್ ಡ್ರೈವ್ ಪ್ರಕರಣ ದಾಖಲಿಸುವ ಬೆದರಿಕೆ
- ಎಟಿಎಂ ಘಟಕದ ಎದುರು ಕಾಯುತ್ತಿದ್ದ ಕಾನ್‌ಸ್ಟೆಬಲ್

ಬೆಂಗಳೂರು: ವಾಹನ ತಪಾಸಣೆ ನೆಪದಲ್ಲಿ ಕಾರು ಅಡ್ಡಗಟ್ಟಿದ್ದ ಸಂಚಾರ ವಿಭಾಗದ ಮೂವರು ಕಾನ್‌ಸ್ಟೆಬಲ್‌ಗಳು, ‘ಡ್ರಿಂಕ್ ಆ್ಯಂಡ್ ಡ್ರೈವ್’ ಪ್ರಕರಣ ದಾಖಲಿಸುವುದಾಗಿ ಬೆದರಿಸಿ ₹5,000 ಸುಲಿಗೆ ಮಾಡಿರುವ ಆರೋಪ ವ್ಯಕ್ತವಾಗಿದೆ.

ಹಣ ಸುಲಿಗೆ ಬಗ್ಗೆ ಸಾಮಾಜಿಕ ಮಾಧ್ಯಮ ‘ಎಕ್ಸ್’ ಪೋಸ್ಟ್ ಮೂಲಕ ಪೊಲೀಸ್ ಕಮಿಷನರ್ ಅವರಿಗೆ ದೂರು ನೀಡಿರುವ ವ್ಯಕ್ತಿಯೊಬ್ಬರು, ‘ಹಳೇ ಏರ್‌ಪೋರ್ಟ್ ರಸ್ತೆಯ ಮಣಿಪಾಲ್ ಆಸ್ಪತ್ರೆ ಬಳಿ ಫೆ. 23ರಂದು ರಾತ್ರಿ 11 ಗಂಟೆ ಸುಮಾರಿಗೆ ನನ್ನ ಮಗಳನ್ನು ಅಡ್ಡಗಟ್ಟಿದ್ದ ಪೊಲೀಸರು, ಮದ್ಯ ಕುಡಿದಿರುವುದಾಗಿ ಬೆದರಿಸಿ ₹ 5,000 ಸುಲಿಗೆ ಮಾಡಿದ್ದಾರೆ’ ಎಂದು ದೂರಿದ್ದಾರೆ.

‘ನನ್ನ ಮಗಳು ಒಬ್ಬಳೇ ಕಾರಿನಲ್ಲಿ ಮನೆಗೆ ಹೊರಟಿದ್ದಳು. ವಾಹನ ತಪಾಸಣೆ ನೆಪದಲ್ಲಿ ಪೊಲೀಸರು ಕಾರು ತಡೆದಿದ್ದರು. ಆರಂಭದಲ್ಲಿ ₹ 15 ಸಾವಿರ ಕೇಳಿದ್ದರು. ಅಷ್ಟು ಹಣವಿಲ್ಲವೆಂದು ಮಗಳು ಹೇಳಿದ್ದಳು. ಸುಮ್ಮನಾಗದ ಪೊಲೀಸರು, ಗೂಗಲ್ ಪೇ ಮೂಲಕ ₹ 5,000 ಪಡೆದಿದ್ದಾರೆ. ತಪಾಸಣೆ ವೇಳೆ ಮಹಿಳಾ ಸಿಬ್ಬಂದಿ ಸಹ ಸ್ಥಳದಲ್ಲಿ ಇರಲಿಲ್ಲ’ ಎಂದು ಪೋಸ್ಟ್‌ನಲ್ಲಿ ಬರೆದುಕೊಂಡಿದ್ದಾರೆ.

ದೂರಿನ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಸಂಚಾರ ವಿಭಾಗದ ಜಂಟಿ ಕಮಿಷನರ್ ಎಂ.ಎನ್. ಅನುಚೇತ್, ‘ಘಟನೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಆರೋಪದ ಬಗ್ಗೆ ವಿಚಾರಣೆಗೆ ಸೂಚಿಸಲಾಗಿದ್ದು, ಇದರ ವರದಿ ಆಧರಿಸಿ ಕಮಿಷನರ್ ಅವರು ಕಠಿಣ ಕ್ರಮ ಕೈಗೊಳ್ಳಲಿದ್ದಾರೆ’ ಎಂದರು.

₹ 15 ಸಾವಿರಕ್ಕೆ ಬೇಡಿಕೆ: ‘ಜೀವನ್‌ಬಿಮಾ ನಗರ ಸಂಚಾರ ಠಾಣೆಯ ಪೊಲೀಸರು ಹಳೇ ಏರ್‌ಪೋರ್ಟ್ ರಸ್ತೆಯಲ್ಲಿ ವಾಹನ ತಪಾಸಣೆ ಮಾಡುತ್ತಿದ್ದರು. ಪಾನಮತ್ತರಾಗಿದ್ದ ಚಾಲಕರನ್ನು ತಡೆದು ಪ್ರಕರಣ ದಾಖಲಿಸುತ್ತಿದ್ದರು. ಇದೇ ಸಂದರ್ಭದಲ್ಲಿ ದೂರುದಾರರ ಮಗಳು ಸ್ಥಳಕ್ಕೆ ಬಂದಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಯುವತಿ ಮದ್ಯಪಾನ ಮಾಡಿರಲಿಲ್ಲವೆಂದು ಗೊತ್ತಾಗಿದೆ. ಅಷ್ಟಾದರೂ ಆಲ್ಕೋಮೀಟರ್‌ನಿಂದ ಯುವತಿಯನ್ನು ಪರೀಕ್ಷಿಸಿದ್ದ ಕಾನ್‌ಸ್ಟೆಬಲ್‌ಗಳು, ‘ಮದ್ಯ ಕುಡಿದಿದ್ದೀರಾ? ₹ 15,000 ಕೊಡಿ. ಇಲ್ಲದಿದ್ದರೆ, ನಿಮ್ಮ ಮೇಲೆ ಪ್ರಕರಣ ದಾಖಲಿಸಿ ಕಾರು ಜಪ್ತಿ ಮಾಡುತ್ತೇವೆ’ ಎಂದಿದ್ದರು. ತಮ್ಮ ಬಳಿ ಹಣವಿಲ್ಲವೆಂದು ಯುವತಿ ಹೇಳಿದ್ದರು. ₹ 5,000 ನೀಡುವಂತೆ ಕಾನ್‌ಸ್ಟೆಬಲ್‌ಗಳು ಪುನಃ ಬೇಡಿಕೆ ಇರಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

ಎಟಿಎಂನಲ್ಲಿ ಸಿಗದ ಹಣ, ಮನೆಯಿಂದ ಗೂಗಲ್ ಪೇ: ‘ತನ್ನ ಬಳಿ ಹಣ ಇಲ್ಲ ಎಂದಿದ್ದ ಯುವತಿ, ಎಟಿಎಂನಿಂದ ತೆಗೆಸಿ ಕೊಡುವುದಾಗಿ ಹೇಳಿದ್ದರು. ಯುವತಿಯನ್ನು ಎಟಿಎಂ ಘಟಕಕ್ಕೆ ಕರೆದೊಯ್ದಿದ್ದ ಕಾನ್‌ಸ್ಟೆಬಲ್, ಹಣ ಪಡೆಯಲು ಹೊರಗೆ ಕಾಯುತ್ತ ನಿಂತಿದ್ದರು’ ಎಂದು ಮೂಲಗಳು ಹೇಳಿವೆ.

‘ಎಟಿಎಂನಲ್ಲಿ ಹಣ ಇಲ್ಲದಿದ್ದರಿಂದ ಯುವತಿ ಖಾಲಿ ಕೈಯಲ್ಲಿ ಹೊರಗೆ ಬಂದಿದ್ದರು. ಹಣವನ್ನು ಮನೆಯಿಂದ ಗೂಗಲ್ ಪೇ ಮಾಡುವುದಾಗಿ ಯುವತಿ ಹೇಳಿದ್ದರು. ಅದಕ್ಕೆ ಒಪ್ಪಿದ್ದ ಕಾನ್‌ಸ್ಟೆಬಲ್, ತನ್ನ ಮೊಬೈಲ್ ಸಂಖ್ಯೆ ನೀಡಿದ್ದ. ಮನೆಗೆ ಹೋಗಿದ್ದ ಯುವತಿ, ಅದೇ ನಂಬರ್‌ಗೆ ಗೂಗಲ್ ಪೇ ಮೂಲಕ ಹಣ ವರ್ಗಾಯಿಸಿರುವುದು ವಿಚಾರಣೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಸ್ಥಳದಲ್ಲಿ ಹಾಜರಿದ್ದ ಇನ್‌ಸ್ಪೆಕ್ಟರ್: ‘ವಾಹನ ತಪಾಸಣೆ ಸಂದರ್ಭದಲ್ಲಿ ಇನ್‌ಸ್ಪೆಕ್ಟರ್ ಸಹ ಸ್ಥಳದಲ್ಲಿ ಹಾಜರಿದ್ದರು. ಕಾನ್‌ಸ್ಟೆಬಲ್‌ಗಳು ವಾಹನಗಳನ್ನು ತಡೆದು, ಚಾಲಕರನ್ನು ಇನ್‌ಸ್ಪೆಕ್ಟರ್ ಬಳಿ ಕಳುಹಿಸುತ್ತಿದ್ದರು. ಆದರೆ, ಯುವತಿಯನ್ನು ಇನ್‌ಸ್ಪೆಕ್ಟರ್ ಬಳಿ ಕಳುಹಿಸಿರಲಿಲ್ಲ. ಹಣ ಸುಲಿಗೆ ಮಾಡುವ ಉದ್ದೇಶದಿಂದಲೇ ಕಾನ್‌ಸ್ಟೆಬಲ್‌ಗಳು ಈ ರೀತಿ ವರ್ತಿಸಿದ್ದರು ಎಂಬುದು ವಿಚಾರಣೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

‘ಬಾಡಿವೋರ್ನ್ ಕ್ಯಾಮೆರಾ ಆಫ್’

ಕರ್ತವ್ಯದ ಸಂದರ್ಭದಲ್ಲಿ ಬಾಡಿವೋರ್ನ್ ಕ್ಯಾಮೆರಾವನ್ನು ಕಡ್ಡಾಯವಾಗಿ ಧರಿಸುವಂತೆ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಆದೇಶ ಹೊರಡಿಸಿದ್ದಾರೆ. ಜೊತೆಗೆ, ತಾವೂ ಕ್ಯಾಮೆರಾ ಧರಿಸುತ್ತಿದ್ದಾರೆ. ಆದರೆ, ಯುವತಿ ಜೊತೆ ಸಂಭಾಷಣೆ ನಡೆಸುವ ಸಂದರ್ಭದಲ್ಲಿ ಕಾನ್‌ಸ್ಟೆಬಲ್‌ಗಳು ಬಾಡಿವೋರ್ನ್ ಕ್ಯಾಮೆರಾ ಆಫ್ ಮಾಡಿದ್ದರು ಎಂಬ ಸಂಗತಿ ವಿಚಾರಣೆಯಿಂದ ಗೊತ್ತಾಗಿದೆ.

‘ಸಂಚಾರ ಪೊಲೀಸರ ವಿರುದ್ಧ ಪದೇ ಪದೇ ಆರೋಪಗಳು ವ್ಯಕ್ತವಾಗಿದ್ದರಿಂದ, ಬಾಡಿವೋರ್ನ್ ಕ್ಯಾಮೆರಾ ನೀಡಲಾಗಿತ್ತು. ಪೊಲೀಸರ ಮೇಲೆ ಯಾರಾದರೂ ಹಲ್ಲೆ ಮಾಡಿದರೆ, ಕ್ಯಾಮೆರಾ ದೃಶ್ಯ ಆಧರಿಸಿ ಕಾನೂನು ಕ್ರಮ ಜರುಗಿಸಲಾಗುತ್ತಿದೆ. ಆದರೆ, ಈ ಪ್ರಕರಣದಲ್ಲಿ ಕಾನ್‌ಸ್ಟೆಬಲ್‌ಗಳು ತಮ್ಮ ಕೃತ್ಯ ಮುಚ್ಚಿಟ್ಟುಕೊಳ್ಳಲು ಕ್ಯಾಮೆರಾ ಆಫ್ ಮಾಡಿದ್ದಾರೆ. ಈ ಲೋಪವನ್ನೂ ಗಂಭೀರವಾಗಿ ಪರಿಗಣಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯ ಭಾರತ ಸರ್ಕಾರ
ALIMCO

“ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಜೀವನವನ್ನು ಸರಳವಾಗಿಸಲು ನಮ್ಮ ಸರ್ಕಾರವು ನಿರಂತರವಾಗಿ ಕಾರ್ಯನಿರ್ವಹಿಸುತ್ತದೆ. ಹಿರಿಯ ನಾಗರಿಕರಾಗಿರಲಿ, ದಿವ್ಯಾಂಗಜನರಾಗಲಿ, ಬುಡಕಟ್ಟು ಸಮುದಾಯದ ಜನರಾಗಲಿ ಅಥವಾ ಸಮಾಜದಲ್ಲಿನ ವಂಚಿತ ವರ್ಗದವರಾಗಲಿ, ಒಟ್ಟಾರೆ 140 ಕೋಟಿ ಭಾರತೀಯರ ಹಿತಾಸಕ್ತಿ ರಕ್ಷಿಸುವುದು ಮತ್ತು ಸೇವೆ ನೀಡುವುದೇ ನಮ್ಮ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ.”
– **ನರೇಂದ್ರ ಮೋದಿ,** ಪ್ರಧಾನಮಂತ್ರಿ

ರಾಷ್ಟ್ರೀಯ ವಯೋಶ್ರೀ ಯೋಜನೆ ಮತ್ತು ಎಡಿಐಪಿ ಯೋಜನೆಯ ಮೂಲಕ ಸಬಲೀಕರಣ

ಆರ್‌ವಿವೈ ಮತ್ತು ಎಡಿಐಪಿ ಯೋಜನೆ ಅಡಿಯಲ್ಲಿ ಹಿರಿಯ ನಾಗರಿಕರಿಗೆ ಮತ್ತು ದಿವ್ಯಾಂಗಜನರಿಗೆ ನೆರವು ಉಪಕರಣಗಳ ವಿತರಣೆ

ರೂ. 15000/– ಕ್ಕಿಂತ ಹೆಚ್ಚಿಲ್ಲದ ಆದಾಯವಿರುವ ಅಥವಾ ಬಿಪಿಎಲ್ ಪ್ರವರ್ಗದ ಹಿರಿಯ ನಾಗರಿಕರಿಗೆ

ಹೊಸ ಫಲಾನುಭವಿಗಳಿಗೆ ಕೂಡ ನೋಂದಣಿ ಸೌಲಭ್ಯ

ಸಂಪೂರ್ಣ ವೆಚ್ಚವನ್ನು ಭಾರತ ಸರ್ಕಾರವೇ ಭರಿಸುತ್ತದೆ

ಸೋಮವಾರ, 26 ಫೆಬ್ರವರಿ 2024 ಬೆಳಗ್ಗೆ 11:00 ಗಂಟೆಗೆ
ಸರ್ಕಾರಿ ಪಿಯು ಕಾಲೇಜು ಮೈದಾನ, ಮಲ್ಲೇಶ್ವರಂ, 18ನೇ ಅಡ್ಡರಸ್ತೆ, ಬೆಂಗಳೂರು, ಕರ್ನಾಟಕ

ಮುಖ್ಯ ಅತಿಥಿ

ಶ್ರೀ. ಎ ನಾರಾಯಣಸ್ವಾಮಿ
ಮಾನ್ಯ ಕೇಂದ್ರ ಸಚಿವರು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ, ಭಾರತ ಸರ್ಕಾರ

ಹಿರಿಯ ನಾಗರಿಕರ ಜೀವನ ಪರಿವರ್ತನೆ

ಶಿಬಿರದಲ್ಲಿ 2100 ಗುರುತಿಸಲ್ಪಟ್ಟ ಫಲಾನುಭವಿಗಳಿಗೆ ನೆರವು ಉಪಕರಣಗಳ ಉಚಿತ ವಿತರಣೆ

ರಾಷ್ಟ್ರೀಯ ವಯೋಶ್ರೀ ಯೋಜನೆ ಮತ್ತು ಎಡಿಐಪಿ ಸ್ಕೀಮ್ ಅಡಿಯಲ್ಲಿ 8951 ಉಪಕರಣಗಳ ವಿತರಣೆ

cbc 38101/13/0071/2324

ಹಿರಿಯ ನಾಗರಿಕರಿಗಾಗಿ ಉಚಿತ ರಾಷ್ಟ್ರೀಯ ಸಹಾಯವಾಣಿ ಸಂಖ್ಯೆ **14567**
ಹೆಚ್ಚಿನ ಮಾಹಿತಿಗಾಗಿ ಲಾಗಾನ್ ಮಾಡಿ https://socialjustice.gov.in
ಸಾಮಾಜಿಕ ಮಾಧ್ಯಮದಲ್ಲಿ ನಮ್ಮನ್ನು ಅನುಸರಿಸಿ /Department of Social Justice and Empowerment

ರಾಷ್ಟ್ರೀಯ ಏಕತೆ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ, ಆರ್‌ಎಸ್‌ಎಸ್ ವಿರುದ್ಧ ಮುಖಂಡರ ವಾಗ್ದಾಳಿ

‘ಮೋದಿಗೆ ಬಡವರ ರಕ್ತ ಹೀರಲು ಗೊತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆ ಚುನಾವಣೆಯಲ್ಲಿ ಜನರು ಬಿಜೆಪಿ ವಿರುದ್ಧ ದೃಢ ನಿರ್ಧಾರ ಕೈಗೊಳ್ಳದಿದ್ದರೆ ಸಂವಿಧಾನಕ್ಕೆ ಧಕ್ಕೆಯಾಗುವ ಜೊತೆಗೆ ದೇಶ ಸರ್ವಾಧಿಕಾರದ ಆಡಳಿತಕ್ಕೆ ಒಳಪಡಲಿದೆ’ ಎಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ (ಎಐಸಿಸಿ) ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಲ್ಲಿ ಆತಂಕ ವ್ಯಕ್ತಪಡಿಸಿದರು.

ನಗರದ ಅರಮನೆ ಮೈದಾನದಲ್ಲಿ ಸಮಾಜ ಕಲ್ಯಾಣ ಇಲಾಖೆ ಆಯೋಜಿಸಿದ್ದ ಎರಡು ದಿನಗಳ ‘ಸಂವಿಧಾನ ಮತ್ತು ರಾಷ್ಟ್ರೀಯ ಏಕತೆ ಸಮಾವೇಶ’ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ‘ಸರ್ವಾಧಿಕಾರಿಗಳ ಕೈಗೆ ಆಡಳಿತ ಸಿಲುಕಿದ ಅನೇಕ ದೇಶಗಳಲ್ಲಿ ಪ್ರಜಾಪ್ರಭುತ್ವ ಉಳಿದಿಲ್ಲ. ಸರ್ವಾಧಿಕಾರ ಆಡಳಿತ ಬೇಕೇ ಅಥವಾ ಸಂವಿಧಾನ ಆಶಯದಂತೆ ಸಮಾನತೆ ಕಲ್ಪಿಸುವ ಆಡಳಿತ ಬೇಕೇ’ ಎಂದು ಪ್ರಶ್ನಿಸಿದರು.

‘ಈ ಸಮಾವೇಶವನ್ನು ರಾಜಕೀಯ ಉದ್ದೇಶಕ್ಕೆ ಬಳಸಲು ಇಚ್ಛಿಸುವುದಿಲ್ಲ’ ಎಂದು ಹೇಳುತ್ತಲೇ ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ, ಆರ್‌ಎಸ್‌ಎಸ್ ವಿರುದ್ಧ ಅವರು ತೀವ್ರ ವಾಗ್ದಾಳಿ ನಡೆಸಿದರು. ಸಮಾವೇಶದಲ್ಲಿ ಪಾಲ್ಗೊಂಡಿದ್ದ ಬೇರೆ ರಾಜ್ಯಗಳ ವಿರೋಧ ಪಕ್ಷಗಳ ನಾಯಕರೂ ಖರ್ಗೆ ಅವರ ಮಾತಿಗೆ ಧ್ವನಿಗೂಡಿಸಿದರು.

‘ಮೋದಿಗೆ ಬಡವರ, ಶೋಷಿತರ ರಕ್ತ ಹೀರುವುದು ಗೊತ್ತು. ದೇಶದ ಕೆಲಸ ಮಾಡುವುದು ಯಾವುದೇ ಸರ್ಕಾರಗಳ ಗ್ಯಾರಂಟಿ ಆಗಬೇಕು. ಆದರೆ, ಮೋದಿ ಅವರು ‘ನನ್ನ ಗ್ಯಾರಂಟಿ’ ಎಂದು ಹೇಳುತ್ತಿದ್ದಾರೆ. ದೇಶ ಸರ್ವಾಧಿಕಾರದ ಧೋರಣೆಯತ್ತ ಹೋಗುತ್ತಿದೆ ಎಂಬುದೇ ಇಂತ ಹೇಳಿಕೆಯ ಅರ್ಥ’ ಎಂದು ವಾಗ್ದಾಳಿ ನಡೆಸಿದರು.

ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಫಾರೂಕ್ ಅಬ್ದುಲ್ಲಾ ಮಾತನಾಡಿ, ‘ಜನರಿಗೆ ಬೇಕಿರುವುದು ಉತ್ತಮ ಆಸ್ಪತ್ರೆ, ಶಿಕ್ಷಣ, ರಸ್ತೆ ಸೇರಿದಂತೆ ಮೂಲಸೌಕರ್ಯಗಳು. ಧರ್ಮಾಧಾರಿತ ರಾಜಕಾರಣ ಅಲ್ಲ. ಆದರೆ, ಇಂದು ಧರ್ಮ ರಾಜಕಾರಣದಿಂದ ದ್ವೇಷವನ್ನು ಬಿತ್ತಲಾಗುತ್ತಿದೆ’ ಎಂದು ಪ್ರತಿಪಾದಿಸಿದರು.

ಸಿಪಿಐ (ಎಂ) ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ ಮಾತನಾಡಿ, ‘ಭಾರತವನ್ನು ಹಿಂದುತ್ವ ರಾಷ್ಟ್ರವಾಗಿ ಬದಲಾಯಿಸುವ ಹುನ್ನಾರ ನಡೆಯುತ್ತಿದೆ. ದೇಶ ಈಗ ಅಳಿವು ಹಾಗೂ ಉಳಿವಿನ ನಿರ್ಣಾಯಕ ಘಟ್ಟದಲ್ಲಿದೆ. ಬಡತನ, ಹಸಿವು ಹೆಚ್ಚಾಗಿದೆ’ ಎಂದು ದೂರಿದರು.

ಸಿಪಿಐ ಪ್ರಧಾನ ಕಾರ್ಯದರ್ಶಿ ಡಿ.ರಾಜಾ ಮಾತನಾಡಿ, ‘ರಾಷ್ಟ್ರ ಕಷ್ಟಕರ ಸನ್ನಿವೇಶದಲ್ಲಿ ಸಿಲುಕಿದ್ದು, ಇದರಿಂದ ಪಾರು ಮಾಡಬೇಕಾದ ಸಂದರ್ಭದಲ್ಲಿ ಕರ್ನಾಟಕ ಸರ್ಕಾರ ಅತ್ಯುತ್ತಮ ಕಾರ್ಯಕ್ರಮ ಆಯೋಜಿಸಿದೆ’ ಎಂದರು.

‘ಕೇಂದ್ರ ಸರ್ಕಾರದ ಆಡಳಿತದಲ್ಲಿ ಆರ್‌ಎಸ್‌ಎಸ್ ನೇರವಾಗಿ ಮಧ್ಯ ಪ್ರವೇಶಿಸುತ್ತಿದೆ. ಇದನ್ನು ಸಹಿಸಿಕೊಂಡು ಸುಮ್ಮನಿರಬೇಕೆ? ಮೋದಿ ಅವರು ಉದ್ಯಮಿಗಳ ಪರವಾಗಿದ್ದಾರೆ. ಮೋದಿ ಅವರು ಉತ್ತಮ ಆಡಳಿತ ನೀಡಿದ್ದರೆ ರೈತರು ಯಾಕೆ ಪ್ರತಿಭಟನೆ ನಡೆಸುತ್ತಿದ್ದರು’ ಎಂದು ಪ್ರಶ್ನಿಸಿದರು.

ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮಾತನಾಡಿ, ‘ದೇಶ ಹಾಗೂ ಸಂವಿಧಾನ ಅಪಾಯದಲ್ಲಿದೆ. ಯೋಗ್ಯರ ಕೈಗೆ ರಾಜಕೀಯ ಅಧಿಕಾರ ದೊರೆಯಬೇಕು. ಲೋಕಸಭೆ ಚುನಾವಣೆಯಲ್ಲಿ ಸರಿಯಾದವರಿಗೆ ಅಧಿಕಾರ ನೀಡಬೇಕು’ ಎಂದು ಮನವಿ ಮಾಡಿದರು.

ಕಾಂಗ್ರೆಸ್ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಕಾಂಗ್ರೆಸ್ ಮುಖಂಡ ದಿಗ್ವಿಜಯ್ ಸಿಂಗ್, ಸಲ್ಮಾನ್ ಖುರ್ಷಿದ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಚಿವರಾದ ಎಚ್.ಕೆ.ಪಾಟೀಲ, ಮುನಿಯಪ್ಪ, ಕೆ.ಜೆ. ಜಾರ್ಜ್, ಬೋಸರಾಜ್ ಹಾಗೂ ಮುಖಂಡರಾದ ಮನೋಜ್ ಭಟ್ಟಾಚಾರ್ಯ, ಡಿ.ದೇವರಾಜನ್, ಸುಪ್ರಿಯೊ ಭಟ್ಟಾಚಾರ್ಯ ಸೇರಿದಂತೆ 18 ರಾಜ್ಯಗಳ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳ ನಾಯಕರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿ ನಡೆದ ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಸಚಿವ ಕೆ.ಎಚ್.ಮುನಿಯಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಕಾನೂನು ಸಚಿವ ಎಚ್.ಕೆ.ಪಾಟೀಲ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಿಪಿಐ ಪಕ್ಷದ ಡಿ. ರಾಜಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಅಧ್ಯಕ್ಷ ಫಾರೂಕ್ ಅಬ್ದುಲ್ಲಾ, ಸಿಪಿಎಂನ ನಾಯಕ ಸೀತಾರಾಂ ಯೆಚೂರಿ, ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಜನರತ್ತ ಕೈ ಬೀಸಿದರು —ಪ್ರಜಾವಾಣಿ ಚಿತ್ರ

ಸುಭದ್ರ ದೇಶ ನಿರ್ಮಾಣಕ್ಕೆ ಪ್ರಯತ್ನಿಸಿದ್ದಅಂಬೇಡ್ಕರ್, ನೆಹರು, ಗಾಂಧೀಜಿ ಅವರ ನಡುವೆ ವ್ಯತ್ಯಾಸವಿತ್ತು ಎಂದು ಹೇಳಿ, ಜಗಳ ಹಚ್ಚುತ್ತಿದ್ದಾರೆ. ಜನ ಜಾಗೃತರಾಗಬೇಕು
ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಪ್ರಧಾನಿ ಮೋದಿ ಅವರು ‘ಅಮೃತಕಾಲ’ ಬಂದಿದೆ ಎನ್ನುತ್ತಿದ್ದಾರೆ. ಅದು ಎಲ್ಲಿದೆ? ದುಷ್ಟರ ಕೈಯಿಂದ ದೇಶ ರಕ್ಷಿಸುವ ಕಾಲ ಬಂದಿದೆ
ಸೀತಾರಾಂ ಯೆಚೂರಿ, ಸಿಪಿಎಂ ಪ್ರಧಾನ ಕಾರ್ಯದರ್ಶಿ

ಒಕ್ಕೂಟ ವ್ಯವಸ್ಥೆಯಲ್ಲಿ ತಮ್ಮ ಪಾಲಿನ ಅನುದಾನ ಕೇಳಲು ರಾಜ್ಯ ಸರ್ಕಾರಗಳು ಪ್ರತಿಭಟಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ
ಡಿ.ರಾಜಾ, ಸಿಪಿಐ ಪ್ರಧಾನ ಕಾರ್ಯದರ್ಶಿ

ರಾಜಕೀಯ, ರಾಜಕಾರಣದ ಸಂಘಟನೆಗಾಗಿ ಆಯೋಜಿಸಿದ ಸಮಾವೇಶ ಇದಲ್ಲ. ದೇಶದ ಹಿತಕ್ಕಾಗಿ ಆಯೋಜಿಸಿ, ಸಂದೇಶ ರವಾನಿಸಲಾಗಿದೆ
ಎಚ್.ಸಿ. ಮಹದೇವಪ್ಪ, ಸಮಾಜ ಕಲ್ಯಾಣ ಸಚಿವ

‘ಅನಂತ್‌ಕುಮಾರ ಹೆಗಡೆ ಹೇಳಿಕೆ ವಿರೋಧಿಸದ ಮೋದಿ’

‘ಸಂವಿಧಾನ ಬದಲಾಯಿಸಲು ಬಂದಿರುವವರನ್ನು ಅಧಿಕಾರದಿಂದ ಕಿತ್ತೊಗೆಯದಿದ್ದರೆ ಪ್ರಜಾಪ್ರಭುತ್ವಕ್ಕೆ ಉಳಿಗಾಲವಿಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

‘ವಿಶ್ವದ ಸಂವಿಧಾನಗಳ ಅತ್ಯುತ್ತಮ ಸಾರವನ್ನು ಬಿ.ಆರ್.ಅಂಬೇಡ್ಕರ್ ಅವರು ನಮ್ಮ ಸಂವಿಧಾನದಲ್ಲಿ ಅಡಕ ಮಾಡಿದ್ದಾರೆ. ಬುದ್ಧ, ಬಸವಾದಿ ಶರಣರು, ವಚನ ಕ್ರಾಂತಿಯ ಮತ್ತು ಕುವೆಂಪು, ನಾರಾಯಣಗುರು, ವಿವೇಕಾನಂದ ಸೇರಿ ಮುಂತಾದವರ ಆಶಯಗಳ ಮೂರ್ತರೂಪ ನಮ್ಮ ಸಂವಿಧಾನ’ ಎಂದು ವಿಶ್ಲೇಷಿಸಿದರು.

‘ನರೇಂದ್ರ ಮೋದಿ ಅವರ ಸಂಪುಟದಲ್ಲಿದ್ದ ಅನಂತಕುಮಾರ ಹೆಗಡೆ, ‘ನಾವು ಅಧಿಕಾರಕ್ಕೆ ಬಂದಿರುವುದೇ ಸಂವಿಧಾನ ಬದಲಾಯಿಸಲು ಎಂದು ಘೋಷಿಸಿದ್ದರು. ಈ ಘೋಷಣೆಯನ್ನು ಪ್ರಧಾನಿ ಮೋದಿ, ಅಮಿತ್ ಶಾ ಹಾಗೂ ಆರ್‌ಎಸ್‌ಎಸ್ ಮುಖಂಡರು ಖಂಡಿಸಲಿಲ್ಲ, ವಿರೋಧಿಸಲಿಲ್ಲ. ಕೇಂದ್ರ ಸರ್ಕಾರ ಉದ್ದೇಶವನ್ನು ಹೆಗಡೆ ಮೂಲಕ ಹೇಳಿಸಿದ್ದಾರೆ’ ಎಂದು ಮುಖ್ಯಮಂತ್ರಿ ವಾಗ್ದಾಳಿ ನಡೆಸಿದರು.

ಶಕ್ತಿ ಪ್ರದರ್ಶನ, ನೀಲಿ ಬಾವುಟ ಹಾರಾಟ

ಎರಡು ದಿನ ನಡೆದ ಸಮಾವೇಶಕ್ಕೆ ಭಾನುವಾರ ತೆರೆಬಿತ್ತು. ಸಮಾರೋಪ ಸಮಾರಂಭಕ್ಕೆ ಬೃಹತ್ ವೇದಿಕೆ ನಿರ್ಮಿಸಲಾಗಿತ್ತು. ಮೊದಲ ದಿನ ಉದ್ಘಾಟನೆ ಸಮಾರಂಭ ಹಾಗೂ ಗೋಷ್ಠಿಗಳು ತ್ರಿಪುರ ವಾಸಿನಿ ಮೈದಾನದಲ್ಲಿ ನಡೆದಿದ್ದವು. ದೇಶದ ನಾನಾ ಭಾಗದ ತಜ್ಞರು ವಿಷಯ ಮಂಡಿಸಿದರು. ಭಾನುವಾರ ಕೃಷ್ಣ ವಿಹಾರ್ ಮೈದಾನಕ್ಕೆ ಸಮಾರೋಪದ ಕಾರ್ಯಕ್ರಮವನ್ನು ಸ್ಥಳಾಂತರಿಸಲಾಗಿತ್ತು. ರಾಜ್ಯದ ಹಲವು ಜಿಲ್ಲೆಗಳಿಂದ ಬೃಹತ್ ಸಂಖ್ಯೆಯಲ್ಲಿ ಜನರನ್ನು ಕರೆತರಲಾಗಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳನ್ನು ಬಳಸಿಕೊಳ್ಳಲಾಗಿತ್ತು. ಇದರಿಂದ ಯಶವಂತಪುರ, ಸದಾಶಿವನಗರ ಪೊಲೀಸ್ ಠಾಣೆ ಬಳಿ, ಸಿ.ವಿ.ರಾಮನ್ ರಸ್ತೆ, ಮೇಖ್ರಿ ವೃತ್ತದಲ್ಲಿ ತೀವ್ರ ದಟ್ಟಣೆ ಉಂಟಾಗಿತ್ತು.

ದೊಡ್ಡ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರಿಂದ ಸಮಾರಂಭವು ಶಕ್ತಿ ಪ್ರದರ್ಶನದಂತೆ ಗೋಚರಿಸಿತು. ಅರಮನೆ ಮೈದಾನದ ಸುತ್ತಮುತ್ತ, ಮೇಖ್ರಿ ವೃತ್ತ ಸೇರಿದಂತೆ ಹಲವು ಕಡೆ ನೀಲಿ ಬಾವುಟಗಳು ರಾರಾಜಿಸಿದವು.

ಉದ್ಘಾಟನಾ ಸಮಾರಂಭದಲ್ಲಿ ಹಾಜರಿದ್ದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್ ಸಮಾರಂಭದ ಬಳಿಕ ತೆರಳಿದ್ದರು.

ಸುದ್ದಿ 2 ನಿಮಿಷ

554 ರೈಲು ನಿಲ್ದಾಣಗಳ ಅಭಿವೃದ್ಧಿಗೆ ಶಂಕುಸ್ಥಾಪನೆ ಇಂದು

ಹುಬ್ಬಳ್ಳಿ: ‘ಅಮೃತ ಭಾರತ ನಿಲ್ದಾಣ ಯೋಜನೆ–2ರ ಅಡಿ ದೇಶದ 554 ರೈಲು ನಿಲ್ದಾಣಗಳ ಪುನರಾಭಿವೃದ್ಧಿ, 1,500 ಮೇಲ್ಸೇತುವೆ, ಕೆಳಸೇತುವೆಗಳ ನಿರ್ಮಾಣಕ್ಕೆ ಶಂಕುಸ್ಥಾಪನೆ, ಸಮರ್ಪಣೆ ಕಾರ್ಯಕ್ರಮಕ್ಕೆ ಪ್ರಧಾನಿ ನರೇಂದ್ರ ಮೋದಿ ಫೆ.26ರಂದು ವರ್ಚುವಲ್ ಕಾರ್ಯಕ್ರಮದ ಮೂಲಕ ಚಾಲನೆ ನೀಡಲಿದ್ದಾರೆ’ ಎಂದು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಹೇಳಿದರು.

ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಅವರು, ‘ರಾಜ್ಯದಲ್ಲಿ ₹656.43 ಕೋಟಿ ವೆಚ್ಚದಲ್ಲಿ 31 ನಿಲ್ದಾಣಗಳ ಅಭಿವೃದ್ಧಿ, ₹330.62 ಕೋಟಿ ವೆಚ್ಚದಲ್ಲಿ 24 ರಸ್ತೆ ಮೇಲ್ಸೇತುವೆ, ಕೆಳಸೇತುವೆಗಳು ನಿರ್ಮಾಣವಾಗಲಿವೆ’ ಎಂದರು.

‘ದಕ್ಷಿಣ–ಮಧ್ಯ ರೈಲ್ವೆಗೆ ಒಳಪಡುವ ಕರ್ನಾಟಕದ ಯಾದಗಿರಿ, ರಾಯಚೂರು ಮತ್ತು ಕೇಂದ್ರ ರೈಲ್ವೆ ವಲಯದ ಗಾಣಗಾಪುರ ರಸ್ತೆ ನಿಲ್ದಾಣವನ್ನು ಸಹ ಈ ಯೋಜನೆ ಅಡಿ ಪುನರಾಭಿವೃದ್ಧಿ ಮಾಡಲು ಯೋಜನೆ ರೂಪಿಸಲಾಗಿದೆ’ ಎಂದರು.

‘ಬೆಂಗಳೂರು–ಮುಂಬೈ ನಡುವೆ ದ್ವಿಪಥ, ವಿದ್ಯುದ್ದೀಕರಣ ಕಾಮಗಾರಿ ಪೂರ್ಣಗೊಂಡಿದೆ. ನೈರುತ್ಯ ರೈಲ್ವೆ ವ್ಯಾಪ್ತಿಯಲ್ಲಿ ಉಳಿದಿರುವ ವಿದ್ಯುದ್ದೀಕರಣ ಕಾಮಗಾರಿ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ’ ಎಂದು ತಿಳಿಸಿದರು.

‘ಧಾರವಾಡ- ಕಿತ್ತೂರು- ಬೆಳಗಾವಿ ನಡುವೆ ಹೊಸ ರೈಲು ಮಾರ್ಗಕ್ಕೆ ಅನುದಾನದ ಕೊರತೆ ಇಲ್ಲ. ರಾಜ್ಯ ಸರ್ಕಾರ ಜಾಗ ಹಸ್ತಾಂತರಿಸಿದರೆ ಕಾಮಗಾರಿ ಆರಂಭಿಸಲಾಗುವುದು’ ಎಂದು ತಿಳಿಸಿದರು.

ಚಾಲಕನಿಲ್ಲದೇ ಚಲಿಸಿದ ರೈಲು

ಜಮ್ಮು/ಚಂಡೀಗಢ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಠುವಾದಲ್ಲಿ ನಿಲ್ಲಿಸಿದ್ದ ಡೀಸೆಲ್ ಎಂಜಿನ್‌ನ ಸರಕು ಸಾಗಣೆ ರೈಲೊಂದು ಚಾಲಕನಿಲ್ಲದೇ ಪಂಜಾಬ್‌ನ ಹೋಶಿಯಾರ್‌ಪುರ ಜಿಲ್ಲೆಯ ಹಳ್ಳಿಯವರೆಗೆ ಸುಮಾರು 70 ಕಿಲೋಮೀಟರ್ ಚಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಲ್ಲಿ ಕಲ್ಲುಗಳನ್ನು ತುಂಬಿದ 53 ವ್ಯಾಗನ್‌ಗಳಿದ್ದ ರೈಲು ಜಮ್ಮುವಿನಿಂದ ಪಂಜಾಬ್‌ಗೆ ತೆರಳುತ್ತಿತ್ತು. ಭಾನುವಾರ ಬೆಳಿಗ್ಗೆ 7.25ರಿಂದ 9ರ ನಡುವೆ ಇದು ನಡೆದಿದೆ. ಯಾವುದೇ ಪ್ರಾಣಹಾನಿ ಅಥವಾ ಆಸ್ತಿ ಹಾನಿಯಾದ ಬಗ್ಗೆ ವರದಿಯಾಗಿಲ್ಲ. ಈ ಬಗ್ಗೆ ಸಮಗ್ರ ತನಿಖೆಗೆ ಆದೇಶಿಸಲಾಗಿದೆ ಎಂದು ಜಮ್ಮುವಿನ ವಿಭಾಗೀಯ ಸಂಚಾರ ವ್ಯವಸ್ಥಾಪಕ ಪ್ರತೀಕ್ ಶ್ರೀವಾಸ್ತವ ತಿಳಿಸಿದರು.

ಚಾಲಕ ಸಿಬ್ಬಂದಿ ಬದಲಾವಣೆಗಾಗಿ ಜಮ್ಮುವಿನ ಕಠುವಾ ರೈಲು ನಿಲ್ದಾಣದಲ್ಲಿ ಈ ರೈಲನ್ನು ನಿಲ್ಲಿಸಲಾಗಿತ್ತು. ಈ ವೇಳೆ ರೈಲಿನ ಎಂಜಿನ್ ಚಾಲನೆಯಲ್ಲಿತ್ತು. ಚಾಲಕ ಕೆಳಗೆ ಇಳಿಯುವಾಗ ಹ್ಯಾಂಡ್ ಬ್ರೇಕ್ ಎಳೆಯಲು ಮರೆತಿರಬಹುದು. ಪಂಜಾಬ್‌ನ ಊಂಚಿ ಬಸ್ಸಿ ರೈಲು ನಿಲ್ದಾಣದ ಬಳಿ ಮರಳು ಮೂಟೆಗಳನ್ನು ಅಡ್ಡ ಇಟ್ಟು ನಿಲ್ಲಿಸಲಾಯಿತು ಎಂದು ಉತ್ತರ ರೈಲ್ವೆಯ ವಕ್ತಾರರು ತಿಳಿಸಿದ್ದಾರೆ.

ನೂತನ ಸಿಜೆ ಪ್ರಮಾಣ ಸ್ವೀಕಾರ

ಕರ್ನಾಟಕ ಹೈಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯಾಗಿ ನಿಲಯ್ ವಿಪಿನ್‌ಚಂದ್ರ ಅಂಜಾರಿಯಾ ಅವರಿಗೆ ಭಾನುವಾರ ಬೆಂಗಳೂರಿನ ರಾಜಭವನದಲ್ಲಿ ಪ್ರತಿಜ್ಞಾ ವಿಧಿ ಬೋಧಿಸಿದ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರೂ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

‘ಇವಿಎಂಗೆ ವಿರೋಧ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಚುನಾವಣೆಗಳಲ್ಲಿ ಇ.ವಿ.ಎಂ ಬದಲಿಗೆ ಹಿಂದಿನ ಮತಪತ್ರ ವಿಧಾನವನ್ನೇ ಅನುಸರಿಸಿದರೆ ತಂತ್ರಜ್ಞಾನವನ್ನು ವಿರೋಧಿಸಿದಂತೆ ಆಗಲಿದೆ. ಆದ್ದರಿಂದ, ಇವಿಎಂ ಹಾಗೂ ವಿ.ವಿ ಪ್ಯಾಟ್ ಬಳಕೆಯಲ್ಲಿ ಕೆಲವು ಬದಲಾವಣೆ ತರುವುದು ಅಗತ್ಯ’ ಎಂದು ವಕೀಲ ಪ್ರಶಾಂತ್ ಭೂಷಣ್ ಪ್ರತಿಪಾದಿಸಿದರು.

‘ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶ ನಿಮಿತ್ತ ಭಾನುವಾರ ನಡೆದ ‘ಪ್ರಜಾಪ್ರಭುತ್ವ ಮತ್ತು ಮತದಾನ’ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

‘ಇವಿಎಂ ಹಾಗೂ ವಿ.ವಿ ಪ್ಯಾಟ್ ಅನ್ನು ನಿರಾಕರಿಸುವುದು ಬೇಡ. ಚುನಾವಣೆ ಪ್ರಕ್ರಿಯೆಗಳಲ್ಲಿ ಮೋಸ ನಡೆಯದಂತೆ ಭಾರತೀಯ ಚುನಾವಣಾ ಆಯೋಗ ಕ್ರಮ ವಹಿಸಬೇಕು. ಮತದಾನದ ಬಳಿಕ ಎರಡು ಚೀಟಿಗಳು ಬರಬೇಕು. ಒಂದು ಚೀಟಿಯು ಮತದಾರನಿಗೆ ಲಭಿಸುವಂತೆ ಆಗಬೇಕು’ ಎಂದು ಸಲಹೆ ನೀಡಿದರು.

ನಿವೃತ್ತ ಐಎಎಸ್ ಅಧಿಕಾರಿ ಎಂ.ಜಿ. ದೇವಸಹಾಯಂ, ಚುನಾವಣೆಗಳು ಜಾತಿ ಆಧಾರದ ಮೇಲೆ ನಡೆಯುತ್ತಿವೆ ಎಂದು ಬೇಸರ ಹೊರಹಾಕಿದರು.

ಪ್ರಾಧ್ಯಾಪಕ ಅರುಣ್ ಜೋಳದಕೂಡ್ಲಿಗಿ ಮಾತನಾಡಿ, ‘ಕರ್ನಾಟಕದಲ್ಲಿ ಎಸ್‌ಸಿ, ಎಸ್‌ಟಿ ಮೀಸಲು ಕ್ಷೇತ್ರಗಳಲ್ಲಿ ಹೆಚ್ಚು ನೋಟಾಗಳು ಬೀಳುತ್ತಿವೆ. ಇದು ಚರ್ಚಿಸಬೇಕಾದ ವಿಷಯ’ ಎಂದು ಹೇಳಿದರು.

ಪ್ರಜಾಪ್ರಭುತ್ವ ಮತ್ತು ಮತದಾನ ಗೋಷ್ಠಿಯಲ್ಲಿ ಪ್ರಶಾಂತ್ ಭೂಷಣ್, ಅಜಯ್ ಗುಡವರ್ತಿ, ಎಂ.ಜಿ. ದೇವಸಹಾಯಂ, ಬಿ. ಗೋಪಾಲ್, ಮಂಜುಳಾ ತೆಲ್ಲಡೆ, ಅರುಣ್‌ಜೋಳದ ಕೂಡ್ಲಿಗಿ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

‘ಸಂವಿಧಾನ ಪ್ರಸ್ತಾವನೆ’ ಫಲಕಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ದಿನೇಶ್ ಗೂಳಿಗೌಡ

ಬೆಂಗಳೂರು: ‘ವಿಶ್ವವಿದ್ಯಾಲಯಗಳು, ಪದವಿ ಕಾಲೇಜುಗಳು, ಎಲ್ಲ ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳು, ಐಟಿ-ಬಿಟಿ ಕಚೇರಿಗಳ ಪ್ರವೇಶದ್ವಾರದಲ್ಲಿ ‘ಸಂವಿಧಾನ ಪ್ರಸ್ತಾವನೆ’ ಫಲಕ ಅಳವಡಿಸುವ ಸಂಬಂಧ ಆದೇಶ ಹೊರಡಿಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಪತ್ರ ಬರೆದಿದ್ದಾರೆ.

‘ಸಂವಿಧಾನದ ಕುರಿತು ಅರಿವು ಮೂಡಿಸುವ ದಿಸೆಯಲ್ಲಿ ರಾಜ್ಯ ಸರ್ಕಾರ ಈಗಾಗಲೇ ಅಭಿಯಾನ ಆರಂಭಿಸಿದೆ. ಸಂವಿಧಾನ ಜಾಗೃತಿ ಕಾರ್ಯಕ್ರಮಗಳು ಎಲ್ಲೆಡೆ ನಡೆಯುತ್ತಿವೆ. ಶಾಲೆಗಳಲ್ಲಿ ಬೆಳಿಗ್ಗೆಯ ಸಮಯ ಸಂವಿಧಾನ ಪ್ರಸ್ತಾವನೆ ಓದಿಸಲಾಗುತ್ತಿದೆ. ಜತೆಗೆ, ಸಂವಿಧಾನ ಪ್ರಸ್ತಾವನೆ ಫಲಕಗಳನ್ನು ಅಳವಡಿಸಲು ಆದೇಶವನ್ನೂ ಹೊರಡಿಸಲಾಗಿದೆ. ಅದೇ ರೀತಿ ವಿಶ್ವವಿದ್ಯಾಲಯ, ಪದವಿ ಕಾಲೇಜುಗಳು ಹಾಗೂ ರಾಜ್ಯದ ಎಲ್ಲ ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳು ಹಾಗೂ ಐಟಿ-ಬಿಟಿ ಕಚೇರಿಗಳ ಪ್ರವೇಶದ್ವಾರದಲ್ಲಿಯೂ ಸಂವಿಧಾನ ಪ್ರಸ್ತಾವನೆಯ ಫಲಕ ಅಳವಡಿಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘ಜಾತ್ಯತೀತ, ಸಮಾನತೆ, ಭ್ರಾತೃತ್ವ ತತ್ವಗಳು ನಮ್ಮ ಸಂವಿಧಾನದ ತಳಹದಿ. ಸಂವಿಧಾನ ಜಾರಿಯಾಗಿ 75 ವರ್ಷಗಳಾದರೂ ಸಮಾಜದಲ್ಲಿ ಇನ್ನೂ ಅಸಮಾನತೆ ದೂರವಾಗಿಲ್ಲ. ಜಾತಿ ಪದ್ಧತಿ ಹೋಗಿಲ್ಲ. ಅಸ್ಪೃಶ್ಯತೆ ನಿಂತಿಲ್ಲ. ಸಮ ಸಮಾಜ ನಿರ್ಮಾಣ ಆಗಿಲ್ಲ. ‘ವೈರುಧ್ಯ ಇರುವ ಸಮಾಜಕ್ಕೆ ಕಾಲಿಡುತ್ತಿದ್ದೇವೆ’ ಎಂದು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನ ಜಾರಿಗೆ ಬಂದ ಸಂದರ್ಭದಲ್ಲಿ ಹೇಳಿದ್ದರು. ವಿಪರ್ಯಾಸವೆಂದರೆ ಇಷ್ಟು ವರ್ಷವಾದರೂ ದೇಶದಲ್ಲಿ ಸಾಮಾಜಿಕ ಹಾಗೂ ರಾಜಕೀಯ ಅಸಮಾನತೆ ನಿಂತಿಲ್ಲ. ಸಂವಿಧಾನದ ಬಗ್ಗೆ ಜನರಲ್ಲಿ ಅರಿವು, ಜಾಗೃತಿ ಮೂಡಿಸುವ ಮೂಲಕ ಇದಕ್ಕೊಂದು ಪರಿಹಾರ ಕಂಡುಕೊಳ್ಳಲೇ ಬೇಕಿದೆ’ ಎಂದೂ ಹೇಳಿದ್ದಾರೆ.

‘ಕ್ಯಾನ್ಸರ್ ಔಷಧಿಗೆ ಮಸಾಲೆ ಪದಾರ್ಥ’

ನವದೆಹಲಿ (ಪಿಟಿಐ): ಕ್ಯಾನ್ಸರ್ ಚಿಕಿತ್ಸೆಗಾಗಿ ಭಾರತೀಯ ಮಸಾಲೆ ಪದಾರ್ಥಗಳನ್ನು ಬಳಸಿ ಔಷಧಿ ತಯಾರಿಸುವ ಕುರಿತು ಪೇಟೆಂಟ್ ಪಡೆದಿರುವ ಭಾರತೀಯ ತಂತ್ರಜ್ಞಾನ ಸಂಸ್ಥೆ- ಮದ್ರಾಸ್ (ಐಐಟಿ) ಈ ಕುರಿತ ಔಷಧಿಗಳನ್ನು 2028ರಲ್ಲಿ ಮಾರುಕಟ್ಟೆಗೆ ಬಿಡುಗಡೆ ಮಾಡುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಮಸಾಲೆ ಪದಾರ್ಥಗಳಿಂದ ಅಭಿವೃದ್ಧಿಪಡಿಸಿರುವ ನ್ಯಾನೊಮೆಡಿಸಿನ್‌ಗಳು ಶ್ವಾಸಕೋಶ, ಸ್ತನ, ದೊಡ್ಡ ಕರಳು, ಗರ್ಭಕಂಠ, ಬಾಯಿ ಮತ್ತು ಥೈರಾಯ್ಡ್ ಕೋಶಗಳ ಕ್ಯಾನ್ಸರ್ ವಿರೋಧಿ ಚಟುವಟಿಕೆಗಳನ್ನು ತೋರಿಸಿವೆ. ಆದರೆ, ಸಾಮಾನ್ಯ ಜೀವಕೋಶಗಳಲ್ಲಿ ಅವು ಸುರಕ್ಷಿತವಾಗಿವೆ ಎಂದು ಅವರು ಹೇಳಿದ್ದಾರೆ.

ಸಂಶೋಧಕರು ಈ ಔಷಧಿಗಳ ಸುರಕ್ಷತೆ ಮತ್ತು ವೆಚ್ಚ ಕುರಿತು ಸಂಶೋಧನೆ ನಡೆಸುತ್ತಿದ್ದಾರೆ. ಇತ್ತೀಚೆಗೆ ಪ್ರಾಣಿ ಗಳ ಮೇಲೆ ನಡೆಸಿದ ಅಧ್ಯಯನ ಯಶಸ್ವಿಯಾಗಿ ಮುಕ್ತಾಯಗೊಂಡಿದೆ. 2027–28ರ ವೇಳೆಗೆ ಈ ಔಷಧಿಗಳು ಮಾರುಕಟ್ಟೆಯಲ್ಲಿ ಲಭ್ಯವಾಗುವಂತೆ ಮಾಡುವ ಗುರಿಯೊಂದಿಗೆ ‘ಕ್ಲಿನಿಕಲ್ ಪ್ರಯೋಗ’ಗಳನ್ನು ಯೋಜಿಸಲಾಗಿದೆ ಎಂದು ವಿವರಿಸಿದ್ದಾರೆ.

ಪ್ರಕಟಣೆ
– : ವಿವಾಹ ರದ್ದಾಗಿದೆ :–
ಶ್ರೀಮತಿ ಭಾರತಿ ಕೆ.ಎಲ್ ಮತ್ತು ಶ್ರೀ ಪಿಲ್ಲಪ್ಪರೆಡ್ಡಿ ಎಸ್.ವಿ.
ಬಿ.ಟಿ.ಎಂ. ಲೇಔಟ್, 2ನೇ ಹಂತ, ಬೆಂಗಳೂರು–68 ಇವರುಗಳ ವಿನಂತಿ.
ನಮ್ಮ ಮಗನಾದ **ಶ್ರೀ ಪೃಥ್ವಿ ಪಿ. ರೆಡ್ಡಿ** ಇವರ ವಿವಾಹವನ್ನು ದಿನಾಂಕ : 29–02–2024 ರಂದು ನಡೆಸಲು ತೀರ್ಮಾನಿಸಲಾಗಿತ್ತು. ಅನಿವಾರ್ಯ ಕಾರಣಗಳಿಂದ ಈ ವಿವಾಹವನ್ನು ರದ್ದುಪಡಿಸಲಾಗಿದೆ. ಈ ಘಟನೆಗೆ ಸಂಬಂಧಿಕರಲ್ಲಿ ಮತ್ತು ಗೆಳೆಯರಲ್ಲಿ ವಿಷಾದ ವ್ಯಕ್ತಪಡಿಸುತ್ತಿದ್ದೇವೆ.
ಇಂತಿ,
ಶ್ರೀಮತಿ ಭಾರತಿ ಕೆ.ಎಲ್ ಮತ್ತು
ಶ್ರೀ ಪಿಲ್ಲಪ್ಪರೆಡ್ಡಿ ಎಸ್.ವಿ.
ಮೊಬೈಲ್ : 9448753939

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.
ಆಡಳಿತಾಧಿಕಾರಿಗಳ ಕಚೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065.
ಸಂಖ್ಯೆ: ಆಕ/ಆರ್‌ಟಿ/11/64/ಅಧಿಕಾರಿಗಳ ಹುದ್ದೆಗಳು/2023–24 ದಿನಾಂಕ: 24–02–2024
ಪ್ರಕಟಣೆ
ವಿಷಯ: ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಬೋಧಕ ಹುದ್ದೆಗಳ ನೇಮಕಾತಿ
ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ವಿವಿಧ ವಿಷಯಗಳ **ಸಹ ಪ್ರಾಧ್ಯಾಪಕ ವೃಂದದ 05 ಹುದ್ದೆಗಳು** ಹಾಗೂ **ಸಹಾಯಕ ಪ್ರಾಧ್ಯಾಪಕ ವೃಂದದ 50 ಹುದ್ದೆಗಳನ್ನು** ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನೊಳಗೊಂಡ ಅಧಿಸೂಚನೆ, ಅರ್ಜಿ ನಮೂನೆ ಮತ್ತು ಇತರ ವಿವರಗಳನ್ನು ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್‌ನಿಂದ (www.uasbangalore.edu.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: 26–03–2024 ಆಗಿರುತ್ತದೆ.
ಆದೇಶದ ಮೇರೆಗೆ
ಆಡಳಿತಾಧಿಕಾರಿಗಳು

‘ಚೀನಿ ಸರಕಿನಿಂದ ದೇಶೀ ಕುಶಲಿಗರಿಗೆ ಕಷ್ಟ’

ಅಲೀಗಢ, ಆಗ್ರಾದಲ್ಲಿ ‘ಭಾರತ ಜೋಡೊ ನ್ಯಾಯಯಾತ್ರೆ’ • ರಾಹುಲ್, ಪ್ರಿಯಾಂಕಾ, ಅಖಿಲೇಶ್ ಭಾಗಿ

ಅಲೀಗಢ (ಉತ್ತರ ಪ್ರದೇಶ) (ಪಿಟಿಐ): ದೊಡ್ಡ ಕಾರ್ಪೊರೇಟ್ ಸಂಸ್ಥೆಗಳ ಜತೆ ನಂಟಿರುವ ವ್ಯಾಪಾರಿಗಳು ಚೀನಾದ ಸರಕುಗಳನ್ನು ಮಾರುಕಟ್ಟೆಗೆ ಪೂರೈಸುತ್ತಿರುವುದರಿಂದ ದೇಶದ ಸ್ಥಳೀಯ, ಸಣ್ಣ ಮತ್ತು ಗುಡಿ ಕೈಗಾರಿಕೆಗಳು ಹಾಗೂ ಕುಶಲಕರ್ಮಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಆರೋಪಿಸಿದರು.

ಅಲೀಗಢದಲ್ಲಿ ‘ಭಾರತ ಜೋಡೊ ನ್ಯಾಯ ಯಾತ್ರೆ’ಯ ಸಭೆ ಉದ್ದೇಶಿಸಿ ಅವರು ಮಾತನಾಡಿದರು. ಮೊರಾದಾಬಾದ್‌ನಿಂದ ಸಂಭಾಲ್ ಮೂಲಕ ಆಗಮಿಸಿದ ಯಾತ್ರೆಯನ್ನು ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಮಾಜವಾದಿ ಪಕ್ಷದ ಬೆಂಬಲಿಗರು ಸ್ವಾಗತಿಸಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಯಾತ್ರೆಯಲ್ಲಿ ರಾಹುಲ್‌ಗೆ ಸಾಥ್ ನೀಡಿದರು.

‘ಯಾತ್ರೆಯು ಜನನಾಯಕ ಮತ್ತು ಲೋಕ ನಾಯಕಿಯೊಂದಿಗೆ ಏಕತೆ, ಸಹೋದರತೆ ಮತ್ತು ಸಾಮರಸ್ಯದ ಸಂದೇಶದೊಂದಿಗೆ ಮುನ್ನಡೆಯುತ್ತಿದೆ’ ಎಂದು ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ. ಯಾತ್ರೆಯ ವಿಡಿಯೊವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದು, ‘ಸರ್ವಾಧಿಕಾರಿಯೊಬ್ಬರು ದೇಶದ ಸಮಗ್ರತೆ, ಸಾರ್ವಭೌಮತ್ವ ಮತ್ತು ಸಂವಿಧಾನವನ್ನು ನಾಶಮಾಡಲು ಹೊರಟಿರುವಾಗ, ಈ ಯಾತ್ರೆಯ ಮೂಲಕ ಜನಸಮೂಹವು ಮುಂದಿನ ಪೀಳಿಗೆಗೆ ಸಂದೇಶವನ್ನು ರವಾನಿಸುತ್ತದೆ’ ಎಂದು ಹೇಳಿದೆ.

ಈ ವೇಳೆ ಮಾತನಾಡಿದ ರಾಹುಲ್ ಅವರು, ‘ಅಲೀಗಢದ ಪ್ರಸಿದ್ಧ ಬೀಗ ಉದ್ಯಮಕ್ಕೆ ಮತ್ತು ಇಲ್ಲಿನ ಕುಶಲಕರ್ಮಿಗಳಿಗೆ ಚೀನಾದ ಅಗ್ಗದ ಉತ್ಪನ್ನಗಳು ಕಂಟಕವಾಗಿ ಪರಿಣಮಿಸಿವೆ. ಇದು ದೊಡ್ಡ ವ್ಯಾಪಾರಿ ಸಂಸ್ಥೆಗಳಿಗೆ ಲಾಭ ತಂದುಕೊಡುತ್ತಿದೆ’ ಎಂದು ದೂರಿದರು. ‘ನಾನು ಮುಂದಿನ ಬಾರಿ ಈ ನಗರಕ್ಕೆ ಬಂದಾಗ, ಚೀನಾ ನಿರ್ಮಿತ ವಸ್ತುಗಳ ಬದಲಿಗೆ ‘ಮೇಡ್ ಇನ್ ಅಲೀಗಢ’ ಎಲೆಕ್ಟ್ರಾನಿಕ್ ವಸ್ತುಗಳನ್ನು ನೋಡಲು ಬಯಸುತ್ತೇನೆ’ ಎಂದರು.

ಅನ್ಯಾಯದ ವಿರುದ್ಧ ನ್ಯಾಯದ ಯಾತ್ರೆ: ದೇಶದಲ್ಲಿ ಅನ್ಯಾಯ ಮತ್ತು ದ್ವೇಷ ಹೆಚ್ಚುತ್ತಿದೆ. ಬಡವರಿಗೆ, ರೈತರಿಗೆ, ಯುವಕರಿಗೆ ಮತ್ತು ಮಹಿಳೆಯರಿಗೆ ಅನ್ಯಾಯ ಆಗುತ್ತಿದೆ. ಇದರ ವಿರುದ್ಧ ನಾವು ‘ಭಾರತ ಜೋಡೊ ನ್ಯಾಯ ಯಾತ್ರೆ’ ಆಯೋಜಿಸಿದ್ದೇವೆ ಎಂದು ಹೇಳಿದರು.

‘ದೇಶದಲ್ಲಿ ದ್ವೇಷ ಏಕೆ ಹೆಚ್ಚುತ್ತಿದೆ ಎಂದು ಸಾವಿರಾರು ಜನರನ್ನು ಕೇಳಿದ್ದೇನೆ’ ಎಂದು ರಾಹುಲ್ ಹೇಳಿದಾಗ, ಅಲ್ಲಿ ನೆರೆದಿದ್ದ ಜನರು ‘ವೋಟ್ ಬ್ಯಾಂಕಿ’ಗಾಗಿ ಎಂದು ಉತ್ತರಿಸಿದರು. ಆಗ ಮಾತು ಮುಂದುವರಿಸಿದ ರಾಹುಲ್, ‘ಸಹೋದರ, ಸಹೋದರಿಯರೇ ವೋಟ್ ಬ್ಯಾಂಕ್ ಅಲ್ಲ. ಈ ತಪ್ಪು ಕಲ್ಪನೆ ಬೇಡ. ಹಿಂಸೆ ಮತ್ತು ದ್ವೇಷಕ್ಕೆ ಅನ್ಯಾಯವೇ ಕಾರಣ ಎಂದು ದೇಶದ ಜನರು, ರೈತರು ಮತ್ತು ಕಾರ್ಮಿಕರು ನನಗೆ ಹೇಳಿದ್ದಾರೆ’ ಎಂದರು.

ಇಲ್ಲಿನ ಪೊಲೀಸ್ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿರುವುದರಿಂದ ರಾಜ್ಯದ ಲಕ್ಷಾಂತರ ನಿರುದ್ಯೋಗಿ ಯುವಕರಿಗೆ ಮತ್ತೊಂದು ಅನ್ಯಾಯ ಎಸಗಿದಂತಾಗಿದೆ ಎಂದರು.

ಪ್ರಿಯಾಂಕಾ ಗಾಂಧಿ ಮಾತನಾಡಿ, ‘ಈ ಅನ್ಯಾಯ ಕಾಲದಲ್ಲಿ ನಿರುದ್ಯೋಗ ಅತಿದೊಡ್ಡ ಬಿಕ್ಕಟ್ಟಾಗಿದೆ. ಅಗ್ನಿವೀರ ನೇಮಕಾತಿ ಯೋಜನೆಯೂ ರಕ್ಷಣಾ ಪಡೆಗಳಿಗೆ ಸೇರಲು ತಯಾರಿ ನಡೆಸುತ್ತಿರುವ ಯುವಕರ ಕನಸುಗಳನ್ನು ಭಗ್ನಗೊಳಿಸಿದೆ’ ಎಂದು ದೂರಿದರು. ಇಲ್ಲಿಂದ ಯಾತ್ರೆಯು ಆಗ್ರಾದತ್ತ ಸಾಗಿತು.

ಆಗ್ರಾದಲ್ಲಿ ಭಾನುವಾರ ನಡೆದ ಭಾರತ ಜೋಡೊ ನ್ಯಾಯ ಯಾತ್ರೆಯಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಜನರತ್ತ ಕೈಬೀಸಿದರು —ಪಿಟಿಐ ಚಿತ್ರ

ರೈತರ ಶಕ್ತಿಗೆ ಬೆದರಿದ ಬಿಜೆಪಿ: ಅಖಿಲೇಶ್

ಆಗ್ರಾ (ಉತ್ತರ ಪ್ರದೇಶ): ಕಾಂಗ್ರೆಸ್‌ನ ‘ಭಾರತ ಜೋಡೊ ನ್ಯಾಯ ಯಾತ್ರೆ’ ಆಗ್ರಾ ಪ್ರವೇಶಿಸಿದಾಗ ಎಸ್.ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ಅವರಿಗೆ ಭಾನುವಾರ ಸಾಥ್ ನೀಡಿದರು.

ಲೋಕಸಭಾ ಚುನಾವಣೆಗೆ ಸಂಬಂಧಿಸಿದಂತೆ ಸಮಾಜವಾದಿ ಪಕ್ಷ ಮತ್ತು ಕಾಂಗ್ರೆಸ್ ನಡುವೆ ಸೀಟು ಹಂಚಿಕೆ ಒಪ್ಪಂದ ಮೂಡಿದ ಬಳಿಕವಷ್ಟೇ ಎಸ್.ಪಿ ಮುಖ್ಯಸ್ಥರು ಯಾತ್ರೆಯಲ್ಲಿ ಪಾಲ್ಗೊಂಡಿದ್ದಾರೆ.

ಕೇಂದ್ರ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅಖಿಲೇಶ್, ‘ಈಗ ರೈತರು ಸರ್ಕಾರದ ವಿರುದ್ಧ ನಿಂತಿದ್ದಾರೆ. ರೈತರ ಶಕ್ತಿಗೆ ಸರ್ಕಾರ ಹೆದರುತ್ತಿದೆ. ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಕಿತ್ತೊಗೆದು, ದೇಶದಲ್ಲಿ ‘ಇಂಡಿಯಾ’ ಸಮ್ಮಿಶ್ರ ಸರ್ಕಾರವನ್ನು ತರಲಿದ್ದೇವೆ. ಅದು ರೈತರಿಗೆ ಎಲ್ಲ ರೀತಿ ಗೌರವ ನೀಡುತ್ತದೆ’ ಎಂದರು. ಇದೇ ವೇಳೆ ಆಗ್ರಾದಲ್ಲಿ ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಪುಷ್ಪ ಅರ್ಪಿಸಿ ನಮನ ಸಲ್ಲಿಸಲಾಯಿತು.

ಬಿಎಸ್‌ಪಿ ಸಂಸದ ಬಿಜೆಪಿಗೆ

ಲಖನೌ/ನವದೆಹಲಿ (ಪಿಟಿಐ): ಉತ್ತರ ಪ್ರದೇಶದ ಅಂಬೇಡ್ಕರ್ ನಗರ ಲೋಕಸಭಾ ಕ್ಷೇತ್ರದ ಬಿಎಸ್‌ಪಿ ಸಂಸದ ರಿತೇಶ್ ಪಾಂಡೆ ಅವರು ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ಭಾನುವಾರ ರಾಜೀನಾಮೆ ಸಲ್ಲಿಸಿದರು. ಕೆಲವೇ ಗಂಟೆಗಳಲ್ಲಿ ಅವರು ದೆಹಲಿಯಲ್ಲಿ ಬಿಜೆಪಿ ಸೇರ್ಪಡೆಯಾದರು.

ಬಿಎಸ್‌ಪಿ ಅಧ್ಯಕ್ಷೆ ಮಾಯಾವತಿ ಅವರಿಗೆ ಬರೆದಿರುವ ರಾಜೀನಾಮೆ ಪತ್ರದಲ್ಲಿ ಪಾಂಡೆ ಅವರು, ‘ದೀರ್ಘಕಾಲದಿಂದ ಪಕ್ಷದ ಸಭೆಗಳಿಗೆ ನನ್ನನ್ನು ಕರೆದಿಲ್ಲ. ಅಲ್ಲದೆ ಪಕ್ಷದ ನಾಯಕತ್ವವೂ ನನ್ನೊಂದಿಗೆ ಮಾತುಕತೆ ನಡೆಸಿಲ್ಲ. ಹೀಗಿರುವಾಗ ಪಕ್ಷಕ್ಕೆ ನನ್ನ ಸೇವೆ ಅಗತ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದೇನೆ’ ಎಂದು ಉಲ್ಲೇಖಿಸಿದ್ದಾರೆ. ಅವರು ತಮ್ಮ ರಾಜೀನಾಮೆ ಪತ್ರವನ್ನು ‘ಎಕ್ಸ್’ನಲ್ಲೂ ಹಂಚಿಕೊಂಡಿದ್ದಾರೆ.

‘ನಿಮ್ಮನ್ನು (ಮಾಯಾವತಿ) ಮತ್ತು ಪಕ್ಷದ ಹಿರಿಯ ನಾಯಕರನ್ನು ಸಂಪರ್ಕಿಸಲು ಸಾಕಷ್ಟು ಪ್ರಯತ್ನಿಸಿದೆ. ಆದರೆ ಅದು ಫಲಿಸಲಿಲ್ಲ. ಹೀಗಾಗಿ ಪಕ್ಷಕ್ಕೆ ನನ್ನ ಇರುವಿಕೆಯ ಬಗ್ಗೆಯಾಗಲಿ, ನನ್ನ ಸೇವೆಯಾಗಲಿ ಅಗತ್ಯವಿಲ್ಲ ಎಂದು ನಾನು ಈ ತೀರ್ಮಾನಕ್ಕೆ ಬಂದಿದ್ದೇನೆ’ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ರಾಜೀನಾಮೆ ಸಲ್ಲಿಸಿದ ಕೆಲ ಗಂಟೆಗಳ ಬಳಿಕ ಪಾಂಡೆ ಅವರು, ಉತ್ತರ ಪ್ರದೇಶದ ಬಿಜೆಪಿ ಉಸ್ತುವಾರಿ ಬೈಜಯಂತ್ ಜಯ ಪಾಂಡಾ, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, ಉತ್ತರ ಪ್ರದೇಶದ ಘಟಕದ ಅಧ್ಯಕ್ಷ ಭೂಪೇಂದ್ರ ಸಿಂಗ್, ಮಾಧ್ಯಮ ಉಸ್ತುವಾರಿ ಅನಿಲ್ ಬಲೂನಿ ಮತ್ತು ಇತರ ನಾಯಕರ ಸಮ್ಮುಖದಲ್ಲಿ ಬಿಜೆಪಿ ಸೇರಿದರು.

ಬಿಜೆಪಿ ಸೇರಿದ ಸಂಸದ ರಿತೇಶ್ ಪಾಂಡೆ ಅವರನ್ನು ಉತ್ತರ ಪ್ರದೇಶದ ಉಪ ಮುಖ್ಯಮಂತ್ರಿ ಬ್ರಜೇಶ್ ಪಾಠಕ್ ಅವರು ನವದೆಹಲಿಯ ಬಿಜೆಪಿ ಕಚೇರಿಯಲ್ಲಿ ಸ್ವಾಗತಿಸಿದರು —ಪಿಟಿಐ ಚಿತ್ರ

ಸಿಂಘು, ಟಿಕ್ರಿ ಗಡಿ: ನಡಿಗೆಗಷ್ಟೇ ಮುಕ್ತ

ನವದೆಹಲಿ/ಚಂಡೀಗಢ (ಪಿಟಿಐ): ರೈತರ ‘ದೆಹಲಿ ಚಲೋ’ ಪ್ರತಿಭಟನಾ ಮೆರವಣಿಗೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿರುವ ಕಾರಣ, ದೆಹಲಿ ಪೊಲೀಸರು ಭಾನುವಾರ ಸಿಂಘು ಮತ್ತು ಟಿಕ್ರಿ ಗಡಿಗಳಲ್ಲಿನ ಕೆಲ ಸಿಮೆಂಟ್ ಬ್ಲಾಕ್‌ಗಳನ್ನು ತೆಗೆಯುವ ಮೂಲಕ ಜನರಿಗೆ ನಡಿಗೆ ಮೂಲಕ ಸಾಗುವಷ್ಟು ಮಾರ್ಗವನ್ನು ಮುಕ್ತಗೊಳಿಸಿದರು. ಆದರೆ ವಾಹನ ಸಂಚಾರಕ್ಕೆ ಅವಕಾಶ ನೀಡಿಲ್ಲ.

‘ಪಾಯಿಂಟ್– ಎ ಕಡೆಯಿಂದ ಪಾಯಿಂಟ್– ಬಿ ವರೆಗಿನ ತಡೆಗೋಡೆಯ ಒಂದು ಭಾಗವನ್ನು ಇಲ್ಲಿ ಸಂಚರಿಸುವವರಿಗಾಗಿ ನಾವು ತೆಗೆದಿದ್ದೇವೆ. ಇಲ್ಲಿ 24 ಗಂಟೆಯೂ ಪೊಲೀಸ್ ಮತ್ತು ಅರೆಸೇನಾ ಪಡೆ ನಿಗಾ ವಹಿಸಲಿದೆ. ಆದರೆ, ಸದ್ಯಕ್ಕೆ ವಾಹನ ಸಂಚಾರಕ್ಕೆ ಅವಕಾಶ ನೀಡುವುದಿಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ದೆಹಲಿಗೆ ಆಗಮಿಸುವವರಿಗೆ. ದೆಹಲಿಯಿಂದ ಹೊರ ಹೋಗುವವರಿಗೆ ಇದರಿಂದ ಅನುಕೂಲವಾಗಲಿದೆ. ಈಗಾಗಲೇ ಈ ನಿಟ್ಟಿನಲ್ಲಿ ಪರ್ಯಾಯ ಮಾರ್ಗವನ್ನು ಮಾಡಲಾಗಿದೆ. ಆದರೂ, ಸಿಂಘು ಮತ್ತು ಟಿಕ್ರಿ ಮಾರ್ಗ ಬಳಸುವವರಿಗೆ ಹೆಚ್ಚಿನ ಅನುಕೂಲವಾಗಲಿ ಎಂಬ ಕಾರಣಕ್ಕೆ ನಡಿಗೆ ಮೂಲಕ ಗಡಿ ದಾಟಲು ಅವಕಾಶ ಕಲ್ಪಿಸಲಾಗಿದೆ’ ಎಂದರು.

ಈ ಕ್ರಮದಿಂದ ನಿತ್ಯ ಕೆಲಸಕ್ಕೆ ದೆಹಲಿಗೆ ಹೋಗಿ ಬರುವವರಿಗೆ ಸ್ವಲ್ಪವಾದರೂ ಅನುಕೂಲವಾಗುತ್ತದೆ ಎಂದು ಮನೋಜ್ ಕುಮಾರ್ ಎಂಬುವರು ಟಿಕ್ರಿ ಗಡಿ ಬಳಿ ಪ್ರತಿಕ್ರಿಯಿಸಿದ್ದಾರೆ.

10 ತಿಂಗಳಲ್ಲಿ 692 ರೈತರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2023ರ ಏಪ್ರಿಲ್‌ನಿಂದ 2024ರ ಜನವರಿ ಮಧ್ಯದ ಅವಧಿಯಲ್ಲಿ ರಾಜ್ಯದಲ್ಲಿ 692 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾವೇರಿ, ಬೆಳಗಾವಿ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅತ್ಯಧಿಕ ಸಂಖ್ಯೆಯ ರೈತರ ಆತ್ಮಹತ್ಯೆ ಪ್ರಕರಣಗಳು ನಡೆದಿವೆ.

ಕಾಂಗ್ರೆಸ್‌ನ ಯು.ಬಿ. ಬಣಕಾರ್ ಅವರ ಪ್ರಶ್ನೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ವಿಧಾನಸಭೆಯಲ್ಲಿ ನೀಡಿರುವ ಉತ್ತರದಲ್ಲಿ ಈ ಮಾಹಿತಿ ಒದಗಿಸಿದ್ದಾರೆ.

‘ಕಳೆದ ಹತ್ತು ತಿಂಗಳಲ್ಲಿ ರಾಜ್ಯದಲ್ಲಿ ಆತ್ಯಹತ್ಯೆ ಪ್ರಕರಣ ಸೇರಿದಂತೆ 1,240 ರೈತರು ಮೃತ ಪಟ್ಟಿದ್ದಾರೆ. ಅವರಲ್ಲಿ 548 ಮಂದಿ ವಿವಿಧ ದುರ್ಘಟನೆಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ’ ಎಂಬ ಮಾಹಿತಿ ಉತ್ತರದಲ್ಲಿದೆ.

ಆತ್ಮಹತ್ಯೆ ಪ್ರಕರಣಗಳೆಂದು ವರದಿಯಾಗಿದ್ದ ಪ್ರಕರಣಗಳ ಪೈಕಿ 448 ಮಂದಿಯ ಕುಟುಂಬಗಳಿಗೆ ಪರಿಹಾರ ವಿತರಿಸಲಾಗಿದೆ. 76 ಪ್ರಕರಣಗಳಲ್ಲಿ ಪರಿಹಾರದ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಆಕಸ್ಮಿಕ ಮರಣಗಳ ಪ್ರಕರಣಗಳಲ್ಲಿ 307 ಮಂದಿಯ ಕುಟುಂಬಗಳಿಗೆ ಪರಿಹಾರ ನೀಡಿದ್ದು, 42 ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಆತ್ಮಹತ್ಯೆ ಪ್ರಕರಣಗಳಲ್ಲಿ 113 ಮತ್ತು ಆಕಸ್ಮಿಕ ಮರಣದ ಪ್ರಕರಣಗಳಲ್ಲಿ 109 ರೈತರ ಕುಟುಂಬಗಳಿಗೆ ಪರಿಹಾರ ಪಾವತಿ ಬಾಕಿ ಇದೆ ಎಂದು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜ ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

37) ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಎಲ್ಲಿ ಕಂಡು ಬರುತ್ತದೆ?

ಉತ್ತರ:– ಇಂಥ ಸಸ್ಯವರ್ಗವು 60–75 ಸೆಂ.ಮೀ. ವಾರ್ಷಿಕ ಮಳೆ ಬೀಳುವ ಭಾಗಗಳಲ್ಲಿ ಕಂಡುಬರುತ್ತದೆ.

38) ಗಂಗಾ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ. ಏಕೆ?

ಉತ್ತರ:– ಗಂಗಾ ನದಿಮುಖಜ ಭೂಮಿಯಲ್ಲಿರುವ ಮ್ಯಾಂಗ್ರೋವ್ ಕಾಡುಗಳಲ್ಲಿ ಸುಂದರಿ ಎಂಬ ಮರ ವ್ಯಾಪಕವಾಗಿ ಹಂಚಿಕೆಯಾಗಿದೆ ಹೀಗಾಗಿ ಈ ಮುಖಜ ಭೂಮಿಯನ್ನು 'ಸುಂದರ ಬನ' ಎಂದು ಕರೆಯಲಾಗಿದೆ.

39) ಉತ್ಸಾಹಿ ಕೃಷಿಕರು ಅಳವಡಿಸಿಕೊಂಡ ಪರಿಸರ ಸ್ನೇಹಿ ಕೃಷಿ ವಿಧಾನವನ್ನು ತಿಳಿಸಿ

ಉತ್ತರ:– ಕೆಲವು ಉತ್ಸಾಹಿ ರೈತರು ಸಾವಯವ ಕೃಷಿ, ಶೂನ್ಯ ಬಂಡವಾಳ ಕೃಷಿ ಮುಂತಾದ ಪರಿಸರ ಸ್ನೇಹಿ ಹಾಗೂ ಸುಸ್ಥಿರ ಕೃಷಿ ವಿಧಾನಗಳನ್ನು ಅಳವಡಿಸಿಕೊಂಡು ಅನುಕೂಲ ಪಡೆಯುತ್ತಿದ್ದಾರೆ.

40) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?

ಉತ್ತರ:– ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ ; **'ದಿವಾನಿ ಅದಾಲತ್'** ಎಂಬ ನಾಗರಿಕ ನ್ಯಾಯಾಲಯಗಳು ಮತ್ತು **'ಫೌಜದಾರಿ ಅದಾಲತ್'** ಎಂಬ ಅಪರಾಧ ನ್ಯಾಯಾಲಯಗಳು.

41) ಹಿಮಾಲಯದ ಮಹತ್ವವೇನು?

ಉತ್ತರ: ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಇದರ ಮಹತ್ವ ಹೀಗಿವೆ:–

1) ಇವು ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2) ಉತ್ತರ ಏಷ್ಯಯಾದಿಂದ ಬೀಸುವ ಶೀತ ಗಾಳಿಗಳನ್ನು ತಡೆಹಿಡಿಯುತ್ತವೆ.
3) ನದಿಗಳ ಉಗಮ ಪ್ರದೇಶವಾಗಿವೆ. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
4) ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ.
5) ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ
6) ಪ್ರವಾಸೋದ್ಧಿಮೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ ......ಇತ್ಯಾದಿ

42) ಭಾರತದಲ್ಲಿರುವ ನಿವ್ವಳ ಸಾಗುವಳಿ ಭೂಮಿ ಬಗ್ಗೆ ಬರೆಯಿರಿ.

ಉತ್ತರ : ಭಾರತದಂತಹ ಕೃಷಿ ಪ್ರಧಾನವಾದ ದೇಶಕ್ಕೆ ನಿವ್ವಳ ಸಾಗುವಳಿ ಭೂಮಿ ಬಹಳ ಪ್ರಮುಖವಾದುದು. ಇದು ಬೆಳೆಗಳ ಸಾಗುವಳಿಗೆ ಬಳಕೆ ಮಾಡಬಹುದಾದ ಭೂಮಿಯಾಗಿದೆ. ಭಾರತದಲ್ಲಿ ಒಟ್ಟು ಭೂ ಪ್ರದೇಶದಲ್ಲಿ ಶೇ 42.2 ಭಾಗವು ನಿವ್ವಳ ಸಾಗುವಳಿ ಭೂಮಿಯಾಗಿದೆ. ಇದು ದೇಶಾದ್ಯಂತ ಏಕ ರೀತಿಯಾಗಿ ಹಂಚಿಕೆಯಾಗಿಲ್ಲ. ಅದು ಹೆಚ್ಚಾಗಿ ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಬಿಹಾರಗಳ ರಾಜ್ಯಗಳಲ್ಲಿ ಕಂಡು ಬರುತ್ತದೆ.

43) **ಭಾರತ ಸರ್ಕಾರದ ಕಾಯ್ದೆ–1858 ಪ್ರಮುಖಾಂಶಗಳನ್ನು ಬರೆಯಿರಿ**

ಉತ್ತರ:– ಈ ಕಾಯ್ದೆಯನ್ನು 1857ರ ಸೈನಿಕ ಮತ್ತು ನಾಗರಿಕ ಕ್ರಾಂತಿಯ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಬೇಕು. ಬ್ರಿಟಿಷ್ ಭಾರತವು ಬ್ರಿಟಿಷ್ ಸರ್ಕಾರದ ನೇರ ಆಳ್ವಿಕೆಗೆ ಒಳಪಡುವಂತಾಯಿತು. ನವಂಬರ್ 1, 1858ರಂದು ಬ್ರಿಟಿಷ್ ರಾಣಿ ವಿಕ್ಟೋರಿಯಾ ಒಂದು ಘೋಷಣೆ ಹೊರಡಿಸಿ ತಮ್ಮ ಆಡಳಿತದ ಅವಧಿಯಲ್ಲಿ ಭಾರತದ ಎಲ್ಲ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲಾಗುವುದೆಂದು ಘೋಷಿಸಿದರು.

ಈ ಕಾಯ್ದೆಯ ಪ್ರಮುಖ ಅಂಶಗಳೆಂದರೆ, 1. ಈಸ್ಟ್ ಇಂಡಿಯಾ ಕಂಪನಿಯ ಮಾನ್ಯತೆ ರದ್ದುಗೊಳಿಸಿ, ಭಾರತವನ್ನು ರಾಣಿಯವರ ಆಡಳಿತಕ್ಕೆ ವರ್ಗಾಯಿಸಲಾಯಿತು.

2. ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿದರು. ವೈಸರಾಯ್ ಆಗಿ "ಲಾರ್ಡ್ ಕ್ಯಾನಿಂಗ್" ನೇಮಕಗೊಂಡರು.

3. "ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ" ಸ್ಥಾನವನ್ನು ಬ್ರಿಟಿಷ್ ಸರ್ಕಾರ ಸೃಷ್ಟಿಸಿತು. ಬ್ರಿಟಿಷ್ ಮಂತ್ರಿ ಮಂಡಲದ ಸದಸ್ಯರಾಗಿದ್ದ ಇವರು ಭಾರತದ ಆಡಳಿತವನ್ನು ನೋಡಿಕೊಳ್ಳುವ ಜವಾಬ್ದಾರಿ ಹೊಂದಿದರು.

4. ಇವರಿಗೆ ಸಹಾಯ ಮಾಡಲು 15 ಸದಸ್ಯರನ್ನೊಳಗೊಂಡ ಭಾರತ ಮಂಡಲಿ (ಕೌನ್ಸಿಲ್ ಆಫ್ ಇಂಡಿಯಾ) ಅಸ್ತಿತ್ವಕ್ಕೆ ಬಂದಿತು.

44) ಹಸಿರು ಕ್ರಾಂತಿ ಆರಂಭವಾದ ಕಥೆಯನ್ನು ತಿಳಿಸಿ

ಉತ್ತರ:– ಹಸಿರು ಕ್ರಾಂತಿಯು 'ಹೆಚ್ಚು ಇಳುವರಿ ಬೀಜ'ಗಳ ಬಳಕೆಯ ಪರಿಣಾಮವಾಗಿದೆ. 1960ರ ಪ್ರಾರಂಭದಲ್ಲಿ ಡಾ. ನಾರ್ಮನ್ ಬೋರ್ಲಾಗ್ ಎಂಬ ಜರ್ಮನ್ ಕೃಷಿ ವಿಜ್ಞಾನಿ ಮೆಕ್ಸಿಕೋ ದೇಶದಲ್ಲಿ ನಡೆಸಿದ ಪ್ರಯೋಗದ ಫಲವಾಗಿ ಗೋಧಿಯಲ್ಲಿ ಹೆಚ್ಚು ಇಳುವರಿ ಬೀಜಗಳ ಸಂಶೋಧನೆಯಾಯಿತು. ಈ ಬೀಜಗಳನ್ನು ಬಳಕೆಗೆ ತಂದ ಮೆಕ್ಸಿಕೋ ಮತ್ತು ತೈವಾನ್ ದೇಶಗಳು ಗೋಧಿಯ ಉತ್ಪಾದನೆಯಲ್ಲಿ ಅತಿಹೆಚ್ಚಿನ ಪ್ರಗತಿಯನ್ನು ಸಾಧಿಸಿದವು. 1965–66ರ ಅವಧಿಯಲ್ಲಿ ಭಾರತದಲ್ಲಿ ಸಂಭವಿಸಿದ ಭೀಕರ ಬರಗಾಲದ ಪರಿಣಾಮವಾಗಿ ಕೃಷಿ ಉತ್ಪಾದನೆ ಅತ್ಯಂತ ಕಡಿಮೆಯಾಯಿತು. ಆಹಾರ ಧಾನ್ಯಗಳ ಕೊರತೆ ಅಗಾಧವಾಗಿ ಹೆಚ್ಚಿತು. ಈ ಸಮಸ್ಯೆಗೆ ಪರಿಹಾರವೆಂಬಂತೆ ಭಾರತ ಸರಕಾರವು 1966ರಲ್ಲಿ ಗೋಧಿಯ ಹೆಚ್ಚು ಇಳುವರಿ ಬೀಜಗಳನ್ನು ಪಂಜಾಬ್, ಹರಿಯಾಣ, ದೆಹಲಿ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಆಯ್ದ ಜಿಲ್ಲೆಗಳಲ್ಲಿ ಬಳಕೆಗೆ ತಂದಿತು. ಹೆಚ್ಚು ಇಳುವರಿ ಬೀಜಗಳ ಬಳಕೆಯು ನಿಗದಿತ ಪೋಷಕಾಂಶಗಳು, ನಿಯಮಿತವಾದ ನೀರು ನೀಡಿದ್ದಲ್ಲದೇ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳನ್ನು ಬಳಕೆಗೆ ತರಲಾಯಿತು. ಇದರಿಂದ ಗೋಧಿಯ ಉತ್ಪಾದನೆ ಅಗಾಧವಾಗಿ ಹೆಚ್ಚಿತು. ಹಸಿರು ಕ್ರಾಂತಿಯ ಪ್ರಾರಂಭದಲ್ಲಿ ಸುಧಾರಿತ ತಂತ್ರಜ್ಞಾನವನ್ನು ಗೋಧಿ ಬೆಳೆಯಲ್ಲಿ ಮಾತ್ರ ಬಳಸಲಾಯಿತು. ಅದರ ಯಶಸ್ಸಿನಿಂದ ಪ್ರೇರಿತವಾದ ಸರಕಾರವು ಭತ್ತ, ಜೋಳ, ರಾಗಿ, ಕಬ್ಬು ಮುಂತಾದ ಬೆಳೆಗಳಲ್ಲಿಯೂ ಹೆಚ್ಚು ಇಳುವರಿ ಬೀಜಗಳನ್ನು ಬಳಸಲು ಪ್ರೇರಣೆ ನೀಡಿತು. ಸುಧಾರಿತ ತಂತ್ರಜ್ಞಾನವನ್ನು ಎಲ್ಲ ಬೆಳೆಗಳಲ್ಲೂ ಬಳಸಲು ಪ್ರಯತ್ನಿಸಲಾಯಿತು. ಜೊತೆಗೆ ಇದನ್ನು ದೇಶಾದ್ಯಂತ ವಿಸ್ತರಣೆಗೆ ಕ್ರಮ ಕೈಗೊಳ್ಳಲಾಯಿತು. ಇದರಿಂದ ಕೃಷಿ ಉತ್ಪಾದನೆಯಲ್ಲಿ ಅಗಾಧ ಪ್ರಗತಿ ಸಾಧ್ಯವಾಯಿತು. 80ರ ದಶಕದ ವೇಳೆಗೆ ಭಾರತವು ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಸಾಧಿಸಿತು.

45) ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ ವ್ಯತ್ಯಾಸಗಳನ್ನು ತಿಳಿಸಿ.

ಉತ್ತರ:– ಪೂರ್ವ ಘಟ್ಟ ಮತ್ತು ಪಶ್ಚಿಮ ಘಟ್ಟಗಳಿಗಿರುವ ಹೋಲಿಕೆ

1) ಎರಡೂ ಘಟ್ಟಗಳು ದಕ್ಷಿಣ ಭಾರತದಲ್ಲಿವೆ *(ಮುಂದುವರಿಯುವುದು)*

ಎಸ್ಸೆಸ್ಸೆಲ್ಸಿ ಸಮಾಜ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

II PUC CHEMISTRY

REVISION and MODEL QUESTIONS

36) By how many times does the $t_{1/2}$ of zero order reaction increase if the initial concentration of the reactant is doubled?

Ans:- If the initial concentration of the reactant is doubled $t_{1/2}$ of the zero order reaction gets doubled.

48) What is heterogeneous catalysis?

Ans:- Heterogeneous catalysis is a catalytic process wherein reactants and catalyst are in different phases.

49) Give the composition of 'copper matte'.

Ans:- The composition of 'copper matte' is $Cu_2S + FeS$.

50) $XeF_6 + 3H_2O \rightarrow P + 6HF$. What is P?

Ans:- In the given eqn $XeF_6 + 3H_2O \rightarrow P + 6HF$ P is XeO_3.

51) A racemic mixture is optically inactive. Why?

Ans:- A racemic mixture is optically inactive because the rotation by an enantiometer is cancelled by the other.

52) Name a nitrogen base present both in DNA and in RNA.

Ans:- A nitrogen base present both in DNA and in RNA is Adenine or guanine or cytosine.

53) Give two differences between Schottky and Frenkel defects in ionic solids.

Ans:- Two differences between Schottky and Frenkel defects in ionic solids.

Schottky defect	Frenkel defect
Density decreases	No change in density.
Observed when cations and anions have similar size.	Observed when cations and anions differ in similar size.
Equal number of cations and anions are missing from lattice points.	The smaller ion gets dislocated from its lattice point.

Note: write any two differences.

57) Give reasons:

i) actinoids show variable oxidation states

ii) Zr and Hf have almost identical radii

Ans:- Reasons:

i) actinoids show variable oxidation states due to comparable energies of 5f, 6d and 7s levels

ii) Zr and Hf have almost identical radii due to lanthanoid contraction

58) What is Lucas reagent? Between primary and tertiary alcohols, which one of these will react faster with Lucas reagent?

Ans:-. Lucas reagent is Conc. $HCl + ZnCl_3$.

Between primary and tertiary alcohols, the one that will react faster with Lucas reagent is tertiary alcohol.

59) A carboxylic acid is treated with alcohol in presence of conc. H_2SO_4.

Name the reaction. Give its general equation.

Ans:- A carboxylic acid is treated with alcohol in presence of conc. H_2SO_4.

The reaction is Esterification .

Give its general equation is –

$$R\text{-}COOH + R^1OH \rightarrow RCOOR^1 + H_2O$$

60) What are food preservatives? Give an example.

Ans: Food preservatives are the additives added to food to prevent spoilage of food.

Eg: Table Salt or sugar or sodium benzoate (any one can be written).

61) Give one example each for –

i) antiseptic ii) synthetic detergent

Ans:- One example each for –

i) antiseptic - dettol

ii) synthetic detergent – Sodium lauryl sulphate

62) **Describe the three steps involved in the leaching of bauxite to get pure alumina (equations not expected).**

Ans:- The three steps involved in the leaching of bauxite to get pure alumina are –

(i) Bauxite is concentrated by digesting the powdered ore in a concentrated solution of sodium hydroxide at 473 – 573 K and 35 bar pressure. Al_2O_3 is leached as sodium aluminate.

(ii) Aluminate solution is neutralised by passing CO_2. Hydrated Al_2O_3 is precipitated by seeding.

(iii) Hydrated Al_2O_3 is filtered, dried and heated to get pure Al_2O_3.

63) White phosphorus is heated with excess of dry chlorine to get X. X on hydrolysis finally forms an oxoacid of phosphorous Y. What are X and Y? What is the basicity of the acid Y?

Ans:- White phosphorus is heated with excess of dry chlorine to get X. X on hydrolysis finally forms an oxoacid of phosphorous Y.

Here, X is PCl_5

Y is H_3PO_4

The basicity of the acid Y is 3.

64) Describe the preparation of ozonised oxygen with an equation. Name the oxidized product obtained when ozone reacts with lead sulphide.

Ans:- Preparation of ozonised oxygen –

A slow dry stream of oxygen is passed through a silent electrical discharge. Some oxygen gets converted into ozone.

$$3O_2 \rightarrow 2O_3$$

The oxidized product obtained when ozone reacts with lead sulphide is lead sulphate.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಮಾರ್ಕೆಟಿಂಗ್ ಕಲಿಕೆಯ ತಂತ್ರ

ಮಾರ್ಕೆಟಿಂಗ್ ತಂತ್ರವನ್ನು ಕಲಿಯುವುದು ಮತ್ತು ಕಲಿಸುವುದು ಇಂದಿನ ತುರ್ತು. ಪ್ರಚಲಿತ ಮಾರುಕಟ್ಟೆಯನ್ನು ಉದಾಹರಿಸಿ, ಅಳವಡಿಸಿಕೊಳ್ಳ ಬೇಕಾದ ತಂತ್ರಗಳ ಬಗ್ಗೆ ತಿಳಿ ಹೇಳುವುದು ಮುಖ್ಯ.

ಡಾ. ಗಿರೀಶ ಯರಲಕಟ್ಟಿ ಮಠ

ನಾಲ್ಕು ಗೋಡೆಗಳ ನಡುವೆ ಎಂಬಿಎ ಕಲಿಸುವುದು ಎಂದಿಗೂ ಉಚಿತವಲ್ಲ. ಕೇವಲ ಪಠ್ಯ ಪುಸ್ತಕದಲ್ಲಿ ಅಚ್ಚಾದ ವಿಷಯವನ್ನು ಬೋಧಿಸುತ್ತಾ ಹೋದರೆ ಎಂಬಿಎ ವಿದ್ಯಾರ್ಥಿಗಳನ್ನು ಕಾರ್ಪೊರೇಟ್ ಜಗತ್ತಿಗೆ ತಯಾರು ಮಾಡುವುದು ಕಷ್ಟ.

ಎಂಬಿಎ ವಿದ್ಯಾರ್ಥಿಗಳಿಗೆ ಮಾರ್ಕೆಟಿಂಗ್ ಕಲಿಯುವುದು ಹಾಗೂ ಕಲಿಸುವುದು ಹೆಚ್ಚು ಕ್ರಿಯಾಶೀಲ. ಅನೇಕ ವಿಷಯಗಳಲ್ಲಿ ಮಾರ್ಕೆಟಿಂಗ್ ಶಿಕ್ಷಣವು ಇತರ ವ್ಯಾಪಾರ ವಿಭಾಗಗಳನ್ನು ಕಲಿಸುವುದಕ್ಕಿಂತ ವಿಭಿನ್ನವಾಗಿದೆ. ವ್ಯಾಪಾರೋದ್ಯಮದ ವ್ಯಾಪ್ತಿಯು ಹಣಕಾಸು, ಮಾನವ ಸಂಪನ್ಮೂಲಗಳು. ಲಾಜಿಸ್ಟಿಕ್ಸ್ ಮತ್ತು ವಿಶ್ಲೇಷಣೆ ಅಂತರ್‌ಶಿಸ್ತೀಯ ಕ್ಷೇತ್ರಗಳಿಗೆ ವ್ಯಾಪಿಸಿದೆ.

ಮಾರಾಟಗಾರರಿಗೆ ಮನೋವಿಜ್ಞಾನ, ತಂತ್ರ, ಸಂವಹನ, ಉತ್ಪನ್ನ ವಿನ್ಯಾಸ, ಸಿಬ್ಬಂದಿ ಪ್ರೇರಣೆ, ಸಂಖ್ಯೆಗಳು ಮತ್ತು ಬೆಲೆಗಳು, ವ್ಯಾಪಾರ ಕೌಶಲ ಕ್ಷೇತ್ರಗಳನ್ನು ತಿಳಿಸುವ ಅಗತ್ಯವಿದೆ. ಮಾರ್ಕೆಟಿಂಗ್‌ನ ವಿಶಾಲ ವ್ಯಾಪ್ತಿಯ ಜತೆಗೆ, ನಿರಂತರವಾಗಿ ವಿಕಸನಗೊಳ್ಳುತ್ತಿರುವ ಕ್ಷೇತ್ರ. ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ದೃಷ್ಟಿಕೋನದಿಂದ ಇದನ್ನು ಕಲಿಸಬೇಕಿದೆ.

- **ಪ್ರಾಯೋಗಿಕ ಮಾರುಕಟ್ಟೆಯನ್ನು ಆಧರಿಸಿರಲಿ:** ಪ್ರತಿ ತರಗತಿಯನ್ನು ಪ್ರಾಯೋಗಿಕವಾಗಿ ಮಾಡುವುದು. ಕೇಸ್‌ಸ್ಟಡಿಯನ್ನು ಬಳಸಿಕೊಳ್ಳುವುದು. ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ನಿತ್ಯದ ಉದಾಹರಣೆಗಳನ್ನು ಬಳಸುವುದು, ಕಾಲ್ಪನಿಕ ಸನ್ನಿವೇಶಗಳು ಯೂಟ್ಯೂಬ್ ವಿಡಿಯೊಗಳು, ಮಾಧ್ಯಮದಲ್ಲಿ ಬಂದ ವರ್ತಮಾನ ವಿಷಯಗಳನ್ನು ಕಥನ ರೂಪದಲ್ಲಿ ಹೇಳುವುದರಿಂದ ಉಪನ್ಯಾಸಗಳು ಹೆಚ್ಚು ಆಸಕ್ತಿದಾಯಕವೆನಿಸುತ್ತವೆ.
- **ಫ್ಲಿಪ್ಡ್ ಬೋಧನೆಯ ಪ್ರಯೋಗ:** ಪ್ರತಿ ವಿದ್ಯಾರ್ಥಿಯ ಕಲಿಕಾ ಶೈಲಿ ವಿಭಿನ್ನವಾಗಿರುತ್ತದೆ. ಫ್ಲಿಪ್ಡ್ ತರಗತಿಯ ಬೋಧನೆ ಎಂದರೆ, ಚಟುವಟಿಕೆಗಳ ಆಧಾರದ ಮೇಲೆ ತರಗತಿಗಳನ್ನು ಬೋಧಿಸುವುದು. ಅಂದರೆ, ಒಂದು ಸಿದ್ಧಾಂತವನ್ನು ಪ್ರಯೋಗಿಸುವುದು, ಚರ್ಚಿಸುವುದು ಮತ್ತು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಪ್ರೇರೇಪಿಸುವುದು. ಇಲ್ಲಿ ವಿದ್ಯಾರ್ಥಿಗಳು 'ಸಕ್ರಿಯ ಕಲಿಕೆಯ' ಪಾತ್ರ ನಿರ್ವಹಿಸುತ್ತಾರೆ.
- **ಪವರ್‌ಪಾಯಿಂಟ್ ಪ್ರಸ್ತುತಿ:** ತರಗತಿಗಳಲ್ಲಿ ವಿಷಯ ವಸ್ತುವಿನ ಬಗ್ಗೆ ಆಗಾಗ 'ಪ್ರಸ್ತುತಿ' ಮೂಲಕ ವಿಷಯಗಳನ್ನು ತಿಳಿಸಬೇಕು. ಈ ಸಮಗ್ರ ಪ್ರಸ್ತುತಿಯು ಜಾಹೀರಾತು ಉದ್ದೇಶ, ಪ್ರಭಾವ, ಪ್ರೇರಣೆ ತಂತ್ರಗಳು, ಗುಪ್ತ ಜಾಹೀರಾತುಗಳು, ಉತ್ಪನ್ನಗಳ ಯೋಜನೆ, ಸೆಲೆಬ್ರಿಟಿಗಳ ಅನುಮೋದನೆಗಳು, ಮಾರ್ಗಸೂಚಿಗಳ ಬಗ್ಗೆ ಇರಲಿ.
- **ಜಾಹೀರಾತು ಅಭಿಯಾನ:** ತರಗತಿಯಲ್ಲಿ ತಯಾರು ಮಾಡಲು ಹೇಳಿ. ವಿದ್ಯಾರ್ಥಿಗಳನ್ನು ತಂಡಗಳನ್ನಾಗಿ ರಚಿಸಿ. ಪ್ರತಿ ತಂಡಕ್ಕೆ ತಮಗೆ ಕೊಟ್ಟಿದ್ದ ಉತ್ಪನ್ನದ ಅಥವಾ ಸರಕು ಅಥವಾ ಸೇವೆಗಳ ಬಗ್ಗೆ ಜಾಹೀರಾತನ್ನು ತಯಾರಿಸಲು 15 ನಿಮಿಷಗಳ ಕಾಲಾವಕಾಶ ಕೊಡಿ. ಜಾಹೀರಾತಿನ ಅವಧಿಯು ಒಂದು ನಿಮಿಷಕ್ಕಿಂತ ಹೆಚ್ಚಿರಬಾರದು.
- **ವಿದ್ಯಾರ್ಥಿಗಳಿಗೆ ಡಿಜಿಟಲ್ ತಂತ್ರಗಳ ಮಾಹಿತಿ:** ವಿದ್ಯಾರ್ಥಿಗಳು ಡಿಜಿಟಲ್ ಮಾರ್ಕೆಟಿಂಗ್ ತಂತ್ರಗಳ ಬಗ್ಗೆ ಹೆಚ್ಚು ಪರಿಚಿತರಾಗಿದ್ದಾರೆ. ಸಾಮಾಜಿಕ ಮಾಧ್ಯಮ, ವೆಬ್‌ಸೈಟ್‌ಗಳು, ಅಪ್ಲಿಕೇಶನ್‌ಗಳು, ವಿಡಿಯೊ ಪ್ಲಾಟ್‌ಫಾರ್ಮ್‌ಗಳು ಮುಂಚೂಣಿಯಲ್ಲಿವೆ. ಆದರೆ ವಾಸ್ತವದಲ್ಲಿ ಅನೇಕ ವ್ಯವಹಾರಗಳಿಗೆ 'ಡಿಜಿಟಲ್ ವ್ಯವಹಾರ ಮಾದರಿ' ಮುಖ್ಯಪಾತ್ರವನ್ನು ವಹಿಸುತ್ತದೆ.

ಉದಾಹರಣೆಗೆ ಬಿ ಟು ಬಿ ಸಂಸ್ಥೆಗಳು, ಸಣ್ಣ ಚಿಲ್ಲರೆ ವ್ಯಾಪಾರಗಳು, ಲೆಕ್ಕಪತ್ರ ನಿರ್ವಹಣೆ ಸಂಸ್ಥೆಗಳು ಡಿಜಿಟಲ್ ವ್ಯವಹಾರ ಮಾದರಿ ಹೊಂದಿದ್ದರೆ ಒಟ್ಟಾರೆ ಅವರ ವ್ಯಾಪಾರ ಯಶಸ್ಸಿನಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಹಾಗಾಗಿ ಡಿಜಿಟಲ್ ಉಪಕರಣಗಳು, ತಂತ್ರಗಳ ಹಾಗೂ ಸಾಂಪ್ರದಾಯಿಕ ವಿಧಾನಗಳ ಬಗ್ಗೆ ಬೋಧಿಸುವಾಗ ಹೆಚ್ಚಿನ ಸಮತೋಲನಗಳನ್ನು ಸಾಧಿಸಬೇಕಾಗಿದೆ.

- **ನಿರ್ಧಾರ ತೆಗೆದುಕೊಳ್ಳುವ ಕೌಶಲ:** ಮಾರುಕಟ್ಟೆ ಹಾಗೂ ಅದರ ನಿರ್ವಹಣೆಯ ಬಗ್ಗೆ ಚರ್ಚಿಸುವಾಗ, ಅಲ್ಲಿ ಚರ್ಚಿಸುವ ವಿಷಯಗಳು ತಪ್ಪಾಗಬಹುದು. ವಿದ್ಯಾರ್ಥಿಗಳು ಸರಿಯಾದ ನಿರ್ಧಾರಗಳನ್ನು ತೆಗೆದುಕೊಳ್ಳಲು ಅಸಮರ್ಥರಿರಬಹುದು. ಬೋಧಕರು, ಯಾವ ನಿರ್ಧಾರ ಏಕೆ ಸೂಕ್ತ ಎಂಬುದನ್ನು ಪ್ರಚಲಿತ ಮಾರುಕಟ್ಟೆಯನ್ನು ಉದಾಹರಿಸಿ ಹೇಳಬೇಕು. ಮಾರುಕಟ್ಟೆ ನಿರ್ವಹಣೆಗೆ ಸಂಬಂಧಿಸಿದ ನಿಯತಕಾಲಿಕೆ ಓದಲು ಹೇಳಿ. 'ಮಿನಿಕೇಸ್ ಸ್ಟಡಿ' ಸ್ಪರ್ಧೆಗಳನ್ನು ಹಮ್ಮಿಕೊಳ್ಳಿ.
- **ಸಂಶೋಧನಾಧಾರಿತ ಕಲಿಕೆಗೆ ಒತ್ತು ನೀಡಿ:** ವಿದ್ಯಾರ್ಥಿಗಳಿಗೆ ತರಬೇತಿ ಕಡ್ಡಾಯವಾಗಿರಲಿ. ನೈಜ ಪ್ರಾಜೆಕ್ಟ್‌ಗಳನ್ನು ತಯಾರಿಸಲು ಹೇಳಿ. ತಮ್ಮ ಸಂಶೋಧನೆಗಳಲ್ಲಿ ಗುರಿ ಸಿದ್ಧಪಡಿಸಿಕೊಳ್ಳುವುದು, ಈವರೆಗೂ ಆದ ಸಂಶೋಧನೆಗಳ ಸಮಗ್ರ ಅಧ್ಯಯನ, ಗ್ಯಾಪ್ ಅನಾಲಿಸಿಸ್ ದತ್ತಾಂಶ ಸಂಗ್ರಹಣೆ, ವಿಶ್ಲೇಷಣೆ ಕಲಿಯಬೇಕು.

ಚರ್ಚೆಗೆ ಅವಕಾಶ

ವ್ಯಾಪಾರದ ಉನ್ನತ ಮಟ್ಟದ ಗುರಿಗಳನ್ನು ಸಾಧಿಸಲು ಮಾರ್ಕೆಟಿಂಗ್ ಅಂಶಗಳು ಒಟ್ಟಾಗಿ ಕೆಲಸ ಮಾಡಬೇಕಾಗಿರುತ್ತದೆ. ಉದಾಹರಣೆಗೆ, ಸಾಮಾಜಿಕ ಮಾಧ್ಯಮದಲ್ಲಿ ಕ್ಲಿಕ್‌ಗಳು ಮತ್ತು ವೀಕ್ಷಣೆಗಳನ್ನು ಪಡೆಯುವುದು ಸಂತೋಷಕ್ಕಾದರೂ ಅದು ಗ್ರಾಹಕರಿಗೆ ಹೆಚ್ಚಿನ ರೀತಿಯಲ್ಲಿ ನೆರವಾಗುವಂತಿರಬೇಕು. ಮಾಲೀಕರಿಗೆ ಮಾರಾಟ ಹಾಗೂ ಹೆಚ್ಚಿನ ಲಾಭ ತಂದು ಕೊಡುವಂತಿರಬೇಕು.



ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಮನಸ್ಸಿಗೆ ಮುದ ನೀಡುವ ಕಾರ್ಯದಲ್ಲಿ ನೀನು ಖಂಡಿತ ಜಯ ಪಡೆಯುವೆ.

-ಸಿದ್ಧೇಶ್ವರ ಸ್ವಾಮೀಜಿ

ಅರಣ್ಯದ ಅರ್ಥವ್ಯಾಪ್ತಿ ಹೆಚ್ಚಿಸಿದ ಕೋರ್ಟ್ ಸಮಾಧಾನ ತಂದ ಮಧ್ಯಂತರ ಆದೇಶ

ಎಲ್ಲ ರಾಜ್ಯಗಳಲ್ಲಿ ಅರಣ್ಯ ಜಮೀನನ್ನು ಗುರುತಿಸುವ ಸಂದರ್ಭಗಳಲ್ಲಿ ಕೇಂದ್ರ ಸರ್ಕಾರವು 'ಅರಣ್ಯ'ಕ್ಕೆ ಶಬ್ದಕೋಶಗಳಲ್ಲಿ ಇರುವ ಅರ್ಥವನ್ನೇ ಅನ್ವಯಿಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚನೆ ನೀಡಿದ್ದು, 2023ರಲ್ಲಿ ಜಾರಿಗೆ ತರಲಾಗಿರುವ ಅರಣ್ಯ (ಸಂರಕ್ಷಣೆ) ತಿದ್ದುಪಡಿ ಕಾಯ್ದೆಯಿಂದ ಆಗಿರುವ ಹಾನಿಯನ್ನು ಕಡಿಮೆ ಮಾಡಲು ನೆರವಾಗಲಿದೆ. ಈ ತಿದ್ದುಪಡಿಯು ಅರಣ್ಯ ಎಂಬ ಪದದ ಅರ್ಥವನ್ನು ಕುಗ್ಗಿಸಿ, ಅರಣ್ಯ ಜಮೀನಿಗೆ ಇರುವ ರಕ್ಷಣೆಯನ್ನು ಕಡಿಮೆ ಮಾಡುವಂತಿತ್ತು. ನಿರ್ದಿಷ್ಟವಾಗಿ ಅರಣ್ಯ ಎಂದು ವರ್ಗೀಕೃತ ಆಗಿರುವ ಅರಣ್ಯ ಜಮೀನನ್ನು ಮಾತ್ರ ಕಾಯ್ದೆಯು 'ಅರಣ್ಯ' ಎಂದು ಒಪ್ಪಿಕೊಳ್ಳುತ್ತದೆ. ಈ ಕಾಯ್ದೆಯ ಅಡಿಯಲ್ಲಿ ಅರಣ್ಯ ಜಮೀನನ್ನು ಅರಣ್ಯೇತರ ಉದ್ದೇಶಗಳಿಗೆ ಬಳಕೆ ಮಾಡಬಹುದು, ಪೂರ್ವಾನುಮತಿ ಇಲ್ಲದೆಯೂ ವಾಣಿಜ್ಯ ಉದ್ದೇಶಕ್ಕೆ ಅದನ್ನು ಬಳಸಬಹುದು. 1996ರಲ್ಲಿ ಟಿ.ಎನ್.ಗೋದಾವರ್ಮನ್ ಪ್ರಕರಣದಲ್ಲಿ ನೀಡಿದ ಮಹತ್ವದ ತೀರ್ಪನ್ನು ಉಲ್ಲೇಖಿಸಿರುವ ಸುಪ್ರೀಂ ಕೋರ್ಟ್, ಅರಣ್ಯ ಎಂಬ ಪದಕ್ಕೆ ಶಬ್ದಕೋಶಗಳಲ್ಲಿ ಸಿಗುವ ಅರ್ಥಕ್ಕೆ ಸರಿಹೊಂದುವಂತೆ ಇರುವ ಯಾವುದೇ ಭೂಪ್ರದೇಶವನ್ನು ಅರಣ್ಯ ಎಂದು ಗುರುತಿಸಬೇಕು ಹಾಗೂ ಅದನ್ನು ರಕ್ಷಿಸಬೇಕು ಎಂದು ಸ್ಪಷ್ಟಪಡಿಸಿದೆ.

ಬೆಂಗಳೂರಿನ ಸ್ವಯಂಸೇವಾ ಸಂಘಟನೆ 'ವನಶಕ್ತಿ' ಸೇರಿದಂತೆ ಹಲವು ಸಂಘಟನೆಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಸೂಚನೆ ನೀಡಿದೆ. 2023ರ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಈ ಅರ್ಜಿಗಳು ಪ್ರಶ್ನಿಸಿವೆ. ಅರಣ್ಯ ಎಂದು ಅಧಿಸೂಚನೆಯಲ್ಲಿ ಉಲ್ಲೇಖಿಸಿರುವ ಭೂಪ್ರದೇಶವನ್ನು ಅಥವಾ ಭಾರತೀಯ ಅರಣ್ಯ ಕಾಯ್ದೆಯಲ್ಲಿ, 1980ರ ನಂತರದ ಯಾವುದೇ ಸರ್ಕಾರಿ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಾಗಿರುವ ಭೂಪ್ರದೇಶವನ್ನು ಮಾತ್ರ 'ಅರಣ್ಯ' ಎಂದು ಈ ಕಾಯ್ದೆಯು ಮಾನ್ಯ ಮಾಡುತ್ತದೆ. ಈ ಕ್ರಮದ ಪರಿಣಾಮವಾಗಿ, ಗಣನೀಯ ಪ್ರಮಾಣದ ಅರಣ್ಯ ಪ್ರದೇಶವು 'ಅರಣ್ಯ' ಎಂಬ ವ್ಯಾಖ್ಯಾನದಿಂದ ಹೊರಗೆ ಉಳಿಯುವಂತಾಯಿತು, ಆ ಭೂಪ್ರದೇಶದ ದುರ್ಬಳಕೆಗೆ ಅವಕಾಶ ನಿರ್ಮಾಣವಾಯಿತು. 1996ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿಗೆ ಅನುಗುಣವಾಗಿ ಅರಣ್ಯ ಎಂದು ಪರಿಭಾವಿಸಲಾಗಿರುವ, ಆದರೆ ಅರಣ್ಯ ಎಂದು ಅಧಿಸೂಚನೆಯಲ್ಲಿ ಗುರುತಿಸಿರದ 1.97 ಲಕ್ಷ ಚದರ ಕಿಲೊ ಮೀಟರ್ ಪ್ರದೇಶವು 'ಅರಣ್ಯ' ಎಂಬ ವ್ಯಾಖ್ಯಾನದಿಂದ ಹೊರಗೆ ಉಳಿಯುವಂತೆ ಆಗುತ್ತದೆ, ಆ ಭೂಪ್ರದೇಶವನ್ನು ದುರ್ಬಳಕೆ ಮಾಡಿಕೊಳ್ಳಲು ಅವಕಾಶ ಸೃಷ್ಟಿಯಾಗುತ್ತದೆ ಎಂಬುದು ಅರ್ಜಿದಾರರ ವಾದ. ಕಾಯ್ದೆಯ ಅಡಿಯಲ್ಲಿ ರೂಪಿಸಿರುವ ನಿಯಮಗಳನ್ನು 2023ರ ಡಿಸೆಂಬರ್ 1ರಿಂದ ಜಾರಿಗೆ ಬಂದಿವೆ. ಕಾಯ್ದೆಯು ಅಧಿಸೂಚನೆಯಲ್ಲಿ ಪ್ರಕಟವಾದ ಒಂದು ವರ್ಷದ ಅವಧಿಯೊಳಗೆ, ಎಲ್ಲ ಕೇಂದ್ರಾಡಳಿತ ಪ್ರದೇಶಗಳು ಹಾಗೂ ರಾಜ್ಯಗಳು ಅರಣ್ಯ ಪ್ರದೇಶವನ್ನು ಗುರುತಿಸಿ,

ತಿದ್ದುಪಡಿ ಕಾಯ್ದೆಯು ಅರಣ್ಯದ ವ್ಯಾಖ್ಯಾನವನ್ನು ದುರ್ಬಲಗೊಳಿಸಿದ್ದನ್ನು ಕೋರ್ಟ್ ಸರಿಪಡಿಸಬಹುದು ಎಂಬ ಆಶಾಭಾವನೆ ಹೊಂದಬಹುದು

ಅವುಗಳ ದಾಖಲೆ ಸಿದ್ಧಪಡಿಸಬೇಕು ಎಂದು ನಿಯಮಗಳು ಹೇಳುತ್ತವೆ. ಆದರೆ ಹೊಸ ಕಾಯ್ದೆಯು ಅರಣ್ಯವನ್ನು ಸಂರಕ್ಷಿಸುವ ಆಗತ್ಯ ಹಾಗೂ ಹೊಸದಾಗಿ ಅರಣ್ಯವನ್ನು ಸೃಷ್ಟಿಸಬೇಕಾದ ಅಗತ್ಯಕ್ಕೆ ವಿರುದ್ಧವಾಗಿತ್ತು. ಅರಣ್ಯಗಳನ್ನು ಇದು ಕಳವಳಕ್ಕೆ ಕಾರಣವಾಗಿತ್ತು. ಹಲವು ಕಾರಣಗಳನ್ನು ನೀಡಿ ಅರಣ್ಯ ಪ್ರದೇಶದ ನಾಶಕ್ಕೆ ಕೂಡ ಈ ಕಾಯ್ದೆಯು ಕಾನೂನಿನ ಮುದ್ರೆ ನೀಡಿದಂತಾಗಿದೆ.

1980ರ ಅರಣ್ಯ ಸಂರಕ್ಷಣಾ ಕಾಯ್ದೆಯನ್ನು ಅರಣ್ಯ ಸಂರಕ್ಷಿಸುವ ಉದ್ದೇಶದಿಂದ ರೂಪಿಸಲಾಗಿದೆ ಹಾಗೂ ಈ ಕಾಯ್ದೆಯು ಎಲ್ಲ ಅರಣ್ಯ ಪ್ರದೇಶಗಳಿಗೂ ಅವು ಅರಣ್ಯ ಎಂದು ವರ್ಗೀಕೃತ ಆಗಿರಲಿ ಅಥವಾ ಆಗಿರದೆ ಇರಲಿ, ಅನ್ವಯವಾಗುತ್ತದೆ ಎಂದು ಗೋದಾವರ್ಮನ್ ಪ್ರಕರಣದಲ್ಲಿನ ತೀರ್ಪು ಹೇಳುತ್ತದೆ. ಈಗ ಅರಣ್ಯ ಪ್ರದೇಶವನ್ನು ಗುರುತಿಸುವ ಪ್ರಕ್ರಿಯೆಯು ಮಾರ್ಗದರ್ಶಿ ತತ್ವವಾಗಿ ಇದು ಕೆಲಸ ಮಾಡಲಿದೆ. ಕೋರ್ಟ್ ಅಂತಿಮ ತೀರ್ಪು ನೀಡುವವರೆಗೆ ಈ ನಿರ್ದೇಶನವು ಜಾರಿಯಲ್ಲಿ ಇರುತ್ತದೆ. ಶಬ್ದಕೋಶಗಳಲ್ಲಿ ಅರಣ್ಯಕ್ಕೆ ಇರುವ ಅರ್ಥಕ್ಕೆ ಅನುಗುಣವಾಗಿರುವ ಪ್ರದೇಶಗಳನ್ನು ಈಗ ಕೂಡ ಕೇಂದ್ರ ಸರ್ಕಾರದ ಪೂರ್ವಾನುಮತಿ ಪಡೆದು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳಲು ಅವಕಾಶ ಇದೆ ಎಂಬುದನ್ನು ಮರೆಯುವಂತಿಲ್ಲ. ಅರಣ್ಯ ಪ್ರದೇಶಗಳಲ್ಲಿ ಪೂರ್ವಾನುಮತಿ ಇಲ್ಲದೆಯೂ ಮೃಗಾಲಯ ಹಾಗೂ ಸಫಾರಿ ಆರಂಭಿಸಲು ತಿದ್ದುಪಡಿ ಕಾಯ್ದೆಯು ಅವಕಾಶ ಮಾಡಿಕೊಟ್ಟಿತ್ತು. ಆದರೆ ಇನ್ನು ಮುಂದೆ ಸಫಾರಿ ಹಾಗೂ ಮೃಗಾಲಯ ಆರಂಭಕ್ಕೆ ಸಂಬಂಧಿಸಿದ ಪ್ರಸ್ತಾವಗಳನ್ನು ತನ್ನ ಅನುಮತಿ ಇಲ್ಲದೆ ಅನುಮೋದಿಸುವಂತೆ ಇಲ್ಲ ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಏಪ್ರಿಲ್ ತಿಂಗಳಲ್ಲಿ ಈ ಪ್ರಕರಣದ ಅಂತಿಮ ವಿಚಾರಣೆ ನಡೆಯಲಿದೆ. ತಿದ್ದುಪಡಿ ಕಾಯ್ದೆಯು ಅರಣ್ಯದ ವ್ಯಾಖ್ಯಾನವನ್ನು ದುರ್ಬಲಗೊಳಿಸಿದ್ದನ್ನು ಕೋರ್ಟ್ ಸರಿಪಡಿಸಬಹುದು ಎಂಬ ಆಶಾಭಾವನೆಯನ್ನು ಹೊಂದಬಹುದು.

ಗ್ಯಾರಂಟಿ: ವಿರೋಧ ಪಕ್ಷಗಳ ಆತ್ಮವಂಚನೆ, ಗಟ್ಟಿಯಾಗಿ ಸಮರ್ಥಿಸುವಲ್ಲಿ ಸೋತ ಆಳುವ ಪಕ್ಷ

ಬಡವರನ್ನು ಅವಮಾನಿಸುವ ರಾಜಕೀಯ

ಅನುರಣನ

ನಾರಾಯಣ ಎ.

ಬಡವರ ಬದುಕಿನಲ್ಲಿ ಚೂರುಪಾರು ನೆಮ್ಮದಿ ಮೂಡಿಸಿರುವ ಕರ್ನಾಟಕ ಸರ್ಕಾರದ ಐದು ಗ್ಯಾರಂಟಿ ಕಲ್ಯಾಣ ಯೋಜನೆಗಳ ಕುರಿತಂತೆ ವಿರೋಧ ಪಕ್ಷ ಬಿಜೆಪಿಯದ್ದು ಆತ್ಮವಂಚನೆ, ಆಳುವ ಪಕ್ಷ ಕಾಂಗ್ರೆಸ್ಸಿನದ್ದು ಅರಿವಿನ ಅಪೂರ್ಣತೆ.

ಈ ಯೋಜನೆಗಳ ಬಗ್ಗೆ ಬಿಜೆಪಿ ಆತ್ಮವಂಚನೆ ಮಾಡಿಕೊಳ್ಳುತ್ತಿದೆ ಎನ್ನಲು ಕಾರಣ ಹೀಗಿದೆ: ಹೋದ ವರ್ಷ ನಡೆದ ಚುನಾವಣೆಯಲ್ಲಿ ಬಿಜೆಪಿ ಸೋತದ್ದು, ಅದು ಈ ರಾಜ್ಯದ ಬಡವರ ಕಣ್ಣೀರಿನಲ್ಲಿ ಆಕ್ರಂದನ ಕೊಚ್ಚಿಹೋಗಿದ್ದು, ಬಿಜೆಪಿಗೂ ಗೊತ್ತಿದೆ. ಹೊಟ್ಟೆ ತುಂಬಿದ ಮತದಾರರು ಹೆಚ್ಚಾಗಿರುವ ಕರಾವಳಿ ಜಿಲ್ಲೆಗಳು ಹಾಗೂ ಬೆಂಗಳೂರಿನಂತಹ ನಗರಗಳಲ್ಲಿ ತಾನು ಗೆದ್ದ ಕತೆ, ಬಡವರು ಬಹುಸಂಖ್ಯಾತರಾಗಿರುವ ಕ್ಷೇತ್ರಗಳಲ್ಲಿ ಹೀನಾಯವಾಗಿ ನೆಲಕಚ್ಚಿದ ಕತೆ ಖಂಡಿತವಾಗಿಯೂ ಅದಕ್ಕೆ ನೆನಪಿದೆ. ಆದರೂ ಬಿಜೆಪಿಯ ಉನ್ನತ ನಾಯಕರಿಂದ ಹಿಡಿದು ಕಾರ್ಯಕರ್ತರವರೆಗೆ ಎಲ್ಲರೂ ಗ್ಯಾರಂಟಿ ಯೋಜನೆಗಳನ್ನು ವಿಧವಿಧವಾಗಿ ಗೇಲಿ ಮಾಡುತ್ತಿದ್ದಾರೆ. ಬಿಟ್ಟಿ ಭಾಗ್ಯಗಳು ಎಂದು ಹಂಗಿಸುತ್ತಿದ್ದಾರೆ.

ರಾಜ್ಯದಲ್ಲಿ ಏನೇ ಸಮಸ್ಯೆ ಬಂದರೂ ಅದಕ್ಕೆ ಬಿಜೆಪಿಯ ಕಡೆಯಿಂದ ಬರುವ ಮೊದಲ ಪ್ರತಿಕ್ರಿಯೆ, ಮದ್ದೆಲ್ಲಾ ಗ್ಯಾರಂಟಿಗಳಿಗೆ ಹೋಗಿದೆ ಎಂಬುದು. ಈ ರಾಜ್ಯದಲ್ಲಿ ಯಾವ ಕಾಲದಲ್ಲೂ ಎಲ್ಲಾ ಕಡೆ ಎಲ್ಲಾ ರಸ್ತೆಗಳೂ ಸುಸ್ಥಿತಿಯಲ್ಲಿ ಇರಲಿಲ್ಲ. ಗುತ್ತಿಗೆದಾರರ ಬಿಲ್ಲು ಪಾವತಿ ಆಗುವಲ್ಲಿ ವಿಳಂಬ ಎಲ್ಲಾ ಕಾಲದಲ್ಲೂ ಆಗಿದೆ. ಕೆಲವೊಂದು ವರ್ಗದ ಸರ್ಕಾರಿ ನೌಕರರಿಗೆ ತಡವಾಗಿ ವೇತನ ಪಾವತಿ ಆಗುವ ವಿದ್ಯಮಾನ ಎಲ್ಲಾ ಕಾಲದಲ್ಲೂ ಆಗಿದೆ. ಆದರೆ ಈಗ ರಸ್ತೆಯಲ್ಲಿ ಗುಂಡಿ ಕಂಡರೆ, ಗುತ್ತಿಗೆದಾರರ ಬಿಲ್ಲು ಬಟವಾಡೆ ವಿಳಂಬವಾದರೆ ತಕ್ಷಣ ಬಿಜೆಪಿಯ ಮತ್ತು ಅದರ ಪರಿವಾರ್ಯ ಪಕ್ಷವಾದ ಜೆಡಿಎಸ್‌ನ ನಾಯಕರೆಲ್ಲ ಮುಗಿಬೀಳುವುದು ಗ್ಯಾರಂಟಿ ಯೋಜನೆಗಳ ಮೇಲೆ.

ಕರ್ನಾಟಕವು ಸಂಪನ್ಮೂಲವಾಗಿ ತನಗೆ ಕೇಂದ್ರದಿಂದ ಬರಬೇಕಿರುವ ತೆರಿಗೆ ಪಾಲು ಬರುತ್ತಿಲ್ಲ ಎಂದು ತಗಾದೆ ತೆಗೆದರೆ, ಕೇಂದ್ರದ ಹಣಕಾಸು ಸಚಿವೆ ಮತ್ತು ಗ್ಯಾಸ ಕೊಡುತ್ತಾರೆ ಅದಕ್ಕೂ ಗ್ಯಾರಂಟಿಯನ್ನು ಮೇಲೆ ತಿರುಗಿಸಿದ್ದರು. ಬಡವರಿಗೆ ಹಣ ನೀಡಿದರೆ ಅದು ದುಂದುವೆಚ್ಚ ಎನ್ನುವಂತೆ ಮಾತನಾಡಿದರು. ಇವರ ಪದ ಪ್ರಯೋಗ, ಹಾವಭಾವ ಹೇಗಿರುತ್ತದೆ ಎಂದರೆ, ಈ ಯೋಜನೆಗಳ ಪ್ರಯೋಜನ ಪಡೆಯುತ್ತಿರುವ ಬಡಜನ ತಾವೇನೋ ಅಪರಾಧ ಮಾಡಿದ್ದೇವೋ ಎಂಬಂತೆ ಬೆಚ್ಚಿಬೀಳುವ ರೀತಿ ಇರುತ್ತದೆ. ಯಾವ ರಾಜ್ಯದಲ್ಲೂ ಯಾವ ಕಾಲದಲ್ಲೂ ರಾಜಕೀಯ ಜಿದ್ದು ಸಾಧಿಸುವ ಉದ್ದೇಶದಿಂದ ವಿರೋಧ ಪಕ್ಷಗಳು ಬಡವರನ್ನು ಈ ಪರಿ ಅವಮಾನಿಸುವಂತಹ, ಅಣಕಿಸುವಂತಹ ಕೆಲಸ ಮಾಡಿದ್ದಿಲ್ಲ.

ಮೊನ್ನೆ ಗ್ಯಾರಂಟಿ ಯೋಜನೆಯ ಕುರಿತಂತೆ ಮನಸಾರೆ ವಿಡಿಯೊವೊಂದು ವೈರಲ್ ಆಯಿತು. 'ಇದ್ದ ಎಕ್ಕರ ಮಗನನ್ನು ಕಳೆದುಕೊಂಡ ತಾಯಿಯೊಬ್ಬರು ಚಿತೆಯ ಮುಂದೆ ನಿಂತು, 'ನನಗಿನ್ನು ಗೃಹಲಕ್ಷ್ಮಿ ಯೋಜನೆಯಡಿ ರಾಜ್ಯ ಸರ್ಕಾರ ಪ್ರತಿ ತಿಂಗಳು ನೀಡುವ ₹ 2,000 ಮಾತ್ರ ಗತಿ' ಎಂದು ಗೋಳಿಡುತ್ತಿದ್ದ ದೃಶ್ಯವದು. ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಕಲ್ಪಿಸುವ 'ಶಕ್ತಿ' ಯೋಜನೆ ಆರಂಭವಾದ ದಿನ ವೃದ್ಧ ಮಹಿಳೆಯೊಬ್ಬರು, ಗುಡಿಯ ಮುಂದೆ ನಿಂತು ನಮಸ್ಕರಿಸುವಂತೆ ಸರ್ಕಾರಿ ಬಸ್ಸಿನ ಮೆಟ್ಟಿಲಿಗೆ ಕೈಮುಗಿದು ಅಡ್ಡಬೀಳುವ ದೃಶ್ಯವಿದ್ದ ವಿಡಿಯೊವನ್ನು ಹಲವರು ನೋಡಿರಬಹುದು. ಇವೆಲ್ಲಾ ನಟನೆಗಳಲ್ಲ. ಈ ರಾಜ್ಯದ ಲಕ್ಷಾಂತರ ಮಂದಿಯನ್ನು ಕಾಡುವ ಬಡತನದ ಕ್ರೌರ್ಯ ಎಂತಹದ್ದು ಎಂದು ಸಾರುವ ಚಿತ್ರಣಗಳು.

ಗ್ಯಾರಂಟಿಗಳನ್ನು ಅಣಕಿಸುವುದೆಂದರೆ ಈ ಜೀವಗಳನ್ನು ಅಣಕಿಸಿದಂತೆ. ಗ್ಯಾರಂಟಿಗಳಿಂದ ಅಭಿವೃದ್ಧಿ ನಿಂತೇಹೋಯಿತು ಎನ್ನುವವರ ಮಾತುಗಳು ಫ್ರಾನ್ಸ್‌ನ ರಾಣಿ ಮೇರಿ ಅಂಟಾಯಿನೆಟ್, ಹಸಿವಿನಿಂದ ಗೋಗರೆಯುತ್ತಿದ್ದ ಜನರನ್ನು ಉದ್ದೇಶಿಸಿ 'ತಿನ್ನಲು ಬ್ರೆಡ್ ಇಲ್ಲದೇ ಹೋದರೆ ಕೇಕ್ ತಿನ್ನಿ' ಎಂದು ಅಣಕಿಸಿದಂತೆ ಕೇಳಿಸುತ್ತವೆ. ಅಭಿವೃದ್ಧಿ ನಿಂತುಹೋಗಿದೆಯಂತೆ, ಶಾಸಕರಿಗೆ ಅನುದಾನ ಸಿಗುತ್ತಿಲ್ಲವಂತೆ. ಏನಿದು ಅನುದಾನ? ಈ ಅನುದಾನದಿಂದ ಆಗುವ ಅಭಿವೃದ್ಧಿಯಾದರೂ ಎಂತಹದ್ದು? ಕಾಮಗಾರಿ, ಕಾಮಗಾರಿ, ಮತ್ತಷ್ಟು ಕಾಮಗಾರಿ. ಅಭಿವೃದ್ಧಿ ಎಂದರೆ ಕಾಮಗಾರಿ, ಅಭಿವೃದ್ಧಿ ಎಂದರೆ ಗಗನಚುಂಬಿ ಕಟ್ಟಡಗಳು, ಅಭಿವೃದ್ಧಿ ಎಂದರೆ ಐಷಾರಾಮಿ ಕಾರುಗಳು ಮತ್ತು ಆ ಕಾರುಗಳು ಯಾವುದೇ ಅಡೆತಡೆ ಇಲ್ಲದೆ ಓಡಲು ಬೇಕಿರುವ ದಶಪಥ ರಸ್ತೆಗಳು, ಅಭಿವೃದ್ಧಿ ಎಂದರೆ ಜಿಲ್ಲೆಗೊಂದು ವಿಮಾನ ನಿಲ್ದಾಣ, ಅಭಿವೃದ್ಧಿ ಎಂದರೆ ಷೇರು ಮಾರುಕಟ್ಟೆ ಸೂಚ್ಯಂಕ ಎಂದು ಆಗುವುದಾದರೆ ಹೋದ ಚುನಾವಣೆಯ ವೇಳೆಗೆ, ದಕ್ಷಿಣ ಭಾರತದ ಮುಂದುವರಿದ ರಾಜ್ಯವಾದ ಕರ್ನಾಟಕದಲ್ಲೂ ಜನಜೀವನ ಅಷ್ಟೊಂದು ದುರ್ಭರವಾಗಿ ಹೋಗಿದ್ದು ಮತ್ತು ಹಾಗಾಗಿದೆ ಎಂಬುದು ಅಡಳಿತ ನಡೆಸುವವರಿಗೆ ತಿಳಿಯದೇ ಹೋಗಿದ್ದು.

ವಾಸ್ತವದಲ್ಲಿ ಕರ್ನಾಟಕದ ಚುನಾವಣೆಯ ಫಲಿತಾಂಶ ನೋಡಿಯಾದರೂ ಅಭಿವೃದ್ಧಿ ಎನ್ನುವ ಪರಿಕಲ್ಪನೆಯನ್ನು ಮುರಿದು ಕಟ್ಟುವ ಕಾರ್ಯವೊಂದು ಪ್ರಾರಂಭ ಆಗಬೇಕಿತ್ತು, ಅದರ ಕರ್ನಾಟಕದಲ್ಲಿ ನಡೆಯುತ್ತಿರುವುದೇ ಬೇರೆ. ಗ್ಯಾರಂಟಿ ಯೋಜನೆಗಳ ಕುರಿತಂತೆ ಆಳುವ ಪಕ್ಷ ಕಾಂಗ್ರೆಸ್ಸಿನದ್ದು ಅರ್ಧಂಬರ್ಧ ಆತ್ಮವಿಶ್ವಾಸ ಎಂದ ಕತೆ ಅಂತ ಹೇಳಿದ್ದು ಯಾಕೆಂದರೆ, ಆ ಪಕ್ಷದಲ್ಲಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಮತ್ತು ನಾಲ್ಕಾರು ಮಂದಿ ಸಚಿವರನ್ನು ಬಿಟ್ಟರೆ ಉಳಿದವರ ಯೋಜನೆಯ ವಿರೋಧ ಪಕ್ಷದವರ ಯೋಜನೆಗಿಂತ ತೀರಾ ಭಿನ್ನವಾಗಿ ಏನೂ 'ಅದ್ದಂತೆ ತೋರುತ್ತಿಲ್ಲ. ಆಳುವ ಪಕ್ಷದ 135 ಶಾಸಕರಲ್ಲಿ ಸರ್ಕಾರ ನೀಡಿ ಗ್ಯಾರಂಟಿಗಳನ್ನು ಸಮರ್ಥಿಸಿಕೊಳ್ಳಲು ಮುಂದಾಗಿದ್ದರೆ, ಇಷ್ಟೊತ್ತಿಗೆ ಈ ಯೋಜನೆಗಳನ್ನು ಅಣಕಿಸುವ ಒಂದೇ ಒಂದು ಮಾತು ಆಡುವುದೂ ಕಷ್ಟವಾಗುತ್ತಿತ್ತು. 'ಇದರ ಅರ್ಥ, ಈ ಯೋಜನೆಗಳನ್ನು ಮತ್ತು ಅವುಗಳ ಅನುಷ್ಠಾನವನ್ನು ವಿಮರ್ಶಿಸಬಾರದು ಎಂದಲ್ಲ. ಗ್ಯಾರಂಟಿಯೋಜನೆಗಳ ಅಭಿವೃದ್ಧಿ ಏನು ಎಂದು ಕೇಳಬಾರದು ಎಂದಲ್ಲ.

ಬಜೆಟ್ ಭಾಷಣವು ಈ ತನಕದ ಅರ್ಥಶಾಸ್ತ್ರದ ಗ್ರಹಿಕೆ ನಿಲುವುಗಳನ್ನೇ ಬುಡಮೇಲು ಮಾಡುವ ರೀತಿಯಲ್ಲಿ 'ಜನ ಸಂಕಷ್ಟದಲ್ಲಿ ಮುಳುಗಿರುವಾಗ ಮಿಗತೆ ಬಜೆಟ್ ಮಂಡಿಸಿ ಸಾಧಿಸುವುದಾದರೂ ಏನನ್ನು?' ಎನ್ನುವ ಕ್ರಾಂತಿಕಾರಿ ಪ್ರಶ್ನೆಯನ್ನು ಮುಂದಿರಿಸಿದೆ. ಗ್ಯಾರಂಟಿ ಗಳನ್ನು ಗಟ್ಟಿಯಾಗಿ ಉಳಿಸಿಕೊಳ್ಳುತ್ತಲೇ ಕರ್ನಾಟಕ ವನ್ನು ಅಭಿವೃದ್ಧಿಯ ಇನ್ನೊಂದು ಹಂತಕ್ಕೆ ಒಯ್ಯುತ್ತೇವೆ ಎನ್ನುವ ಧೀರೋದಾತ್ತ ಭರವಸೆ ಇದೆ. ಇವೆಲ್ಲ ಬರೀ ಪದಪುಂಜಗಳು ಮಾತ್ರವೇ? ಅಥವಾ ಇಲ್ಲೊಂದು ಹೊಸ ಆರ್ಥಿಕ ಕಾರ್ಯತಂತ್ರ ಇದೆಯೇ? ಈ ಪ್ರಶ್ನೆಗಳನ್ನು ಕೇಳುವ ಅಗತ್ಯ ಖಂಡಿತ ಇದೆ. ಈ ನಿಟ್ಟಿನಲ್ಲಿ, 'ಇದು ಮಾಮೂಲಿ ಬಜೆಟ್ಟಿನ ವರಸೆಗಿಂತ ಭಿನ್ನವಾಗಿರುವ ಹೊಸ ಆರ್ಥಿಕ ಪರಿಭಾಷೆ. ಇದು ಹುಟ್ಟಿಕೊಂಡದ್ದು ಗ್ಯಾರಂಟಿಗಳ ಕಾರಣದಿಂದ.

ಮದರಾಸು ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಇಬ್ಬರು ಅರ್ಥಶಾಸ್ತ್ರಜ್ಞರು (ಕಲೈಯರಸನ್ ಎ. ಮತ್ತು ವಿಜಯಭಾಸ್ಕರ್ ಎಂ.) 'ದಿ ದ್ರಾವಿಡಿಯನ್ ಮಾಡೆಲ್- ಇಂಟರ್‌ಪ್ರಿಟಿಂಗ್ ದಿ ಪೊಲಿಟಿಕಲ್ ಎಕಾನಮಿ ಆಫ್ ತಮಿಳ್‌ನಾಡು' ಎಂಬ ಹೊಸ ಪುಸ್ತಕದಲ್ಲಿ, ತಮಿಳುನಾಡಿನ ಜನಕಲ್ಯಾಣ ಯೋಜನೆಗಳಿಂದಾಗಿ ಆ ರಾಜ್ಯದ ಆರ್ಥಿಕ ವ್ಯವಸ್ಥೆಯೇ ಮರುರೂಪ ಪಡೆಯುತ್ತಿದೆ ಅಂತಹ ವಂಚಿತ ಸಮುದಾಯಗಳು ಅಲ್ಲಿಗೆ ಗ್ಯಾರಂಟಿಗಳ ಅಭಿವಾಲಂಬನವಾಗುವಂತೆ ಸಂಪತ್ತಿನಲ್ಲಿ ಪಾಲು ಪಡೆಯುವ ಹಂತ ಪ್ರವೇಶಿಸುತ್ತಿವೆ ಅಂತಲೂ ಸಂಶೋಧನೆ ಮಂಡಿಸಿದ್ದಾರೆ. ಅದೀಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಚರ್ಚೆಯಾಗುತ್ತಿದೆ.

ಹೆಚ್ಚುತ್ತಿರುವ ಆರ್ಥಿಕ ಅಸಮಾನತೆಗೆ ಪರಿಹಾರವಾಗಿ ಕರ್ನಾಟಕದಲ್ಲಿ ಕರ್ನಾಟಕದ್ದೇ ಆದ ಒಂದು ಪ್ರಯೋಗ ನಡೆಯುತ್ತಿದೆ. ಅದೀಗ ತನ್ನದೇ ಆದ ಒಂದು ಮಾದರಿಯನ್ನು ಸೃಷ್ಟಿಸುತ್ತಿದೆ. ಇದು ಉಳಿದವರಿಗೆ ಅರ್ಥವಾಗುವುದಕ್ಕೆ ಮೊದಲು ಅರ್ಥವಾಗಬೇಕಿದ್ದು ಆಳುವ ಪಕ್ಷದ ಶಾಸಕರಿಗೆ. ಇದು 'ಕರ್ನಾಟಕ ಮಾದರಿ' ಎಂದು ಆತ್ಮವಿಶ್ವಾಸದಿಂದ ಹೇಳಬೇಕಾದ ಅಗತ್ಯ ಇರುವುದು ಅವರಿಗೆ. ಅವರು ಹಾಗೆ ಮಾಡುತ್ತಿಲ್ಲ ಎಂಬಲ್ಲಿ ವಿಶೇಷವೇನೂ ಇಲ್ಲ, ಕಾಂಗ್ರೆಸ್ ಇರುವುದೇ ಹಾಗೆ.

ಚುರುಮುರಿ

ಸುದ್ದಿ ಯಾವುದು?

• ಸುಮಂಗಲಾ

ಬೆಕ್ಕಣ್ಣ ಪೇಪರಿನ ಮುಖಪುಟದಲ್ಲಿ ಮೆಲುಗಡೆ ಇದ್ದ ಜಾಹೀರಾತನ್ನು ನೋಡುತ್ತಿತ್ತು.

'ನೋಡಿಲ್ಲಿ... ಮೋದಿಮಾಮನ ಸರ್ಕಾರದ ಗ್ಯಾರಂಟಿ! ಈ ಹತ್ತು ವರ್ಷದಾಗೆ ಕೃಷಿ ಬಜೆಟ್ ಐದು ಪಟ್ಟು ಹೆಚ್ಚಾಗೈತಿ. ಒಂದು ಲಕ್ಷ ಕೋಟಿ ರೂಪಾಯಿ ಅಂದರೆ ಒಂದರ ಮುಂದ ಎಷ್ಟು ಸೊನ್ನೆ ಲೆಕ್ಕಹಾಕು... ಅಷ್ಟ್ ರೊಕ್ಕ ಕೃಷಿಗೆ ಸಾಲ ಕೊಟ್ಟಾರೆ. ಖರೆ ನಮ್ ಮೋದಿಮಾಮ ಬಂದ್ ಮ್ಯಾಗೆ ರೈತ್ರ ಬಾಳು ಬಂಗಾರ ಆಗೈತಿ!' ಎಂದು ಉದ್ಗರಿಸಿತು.

'ಅಲ್ಲಲೇ... ಬರೇ ಜಾಹೀರಾತು ನೋಡಾಕ ಹತ್ತೀಯಲ್ಲ... ಅಲ್ಲೇ ಕೆಳಗಿರೋ ಸುದ್ದಿ ನೋಡು. ಪ್ರತಿಭಟನೆ ಮಾಡ್ತಿದ್ದ ರೈತರ ಮ್ಯಾಗೆ ರಬ್ಬರ್ ಗುಂಡು, ಅಶ್ರುವಾಯು, ಲಾಠಿಚಾರ್ಜ್... ಒಬ್ಬ ರೈತ ಸತ್ತಾನಂತ'.

'ನಿಜವಾದ ರೈತ್ರು ಹೊಲದಾಗೆ ಗೇಯೋದು ಬಿಟ್ಟು, ಹೋರಾಟ ಮಾಡಾಕೆ ಬರ್ತಾರೇನು? ಅವರೆಲ್ಲ ಖಲಿಸ್ತಾನಿಗಳಂತೆ' ಎಂದು ಬೆಕ್ಕಣ್ಣ ಉಡಾಫೆಯಿಂದ ಹೇಳಿತು.

'ಬಾಳು ಖರೇಖರೇ ಬಂಗಾರ ಆಗಿದ್ದರೆ ಅವರ್ಯಾಕೆ ಬೀದಿಗೆ ಬರತಿದ್ದರು?'

'ಇದೆಲ್ಲ ಆ 'ಇಂಡಿಯಾ'ದವರ ಕುತಂತ್ರ, ಮಾಡಕ್ಕೆ ಬ್ಯಾರೆ ದಗದ ಇಲ್ಲದೇ ರೈತರನ್ನ ಎತ್ತಿ ಕಟ್ಯಾರೆ. ಹೋರಾಟ ಮಾಡ್ತಿರೋರೆಲ್ಲ ಆಂದೋಲನಜೀವಿಗಳು, ಅವ್ರಿಗೆ ಯಾವಾಗ್ಲೂ ದೇಶಗಳಿಂದ ರೊಕ್ಕ ಬರತೈತಿ ಅಂತ ಟಿ.ವಿ. ವಳಗೆ ಸುದ್ದಿ ನಿರೂಪಕರು ಹೇಳ್ತಾರೆ ನೋಡು' ಎಂದು ಟಿ.ವಿ ನ್ಯೂಸ್ ಹಾಕಿತು.

'ಅಲ್ಲಲೇ... ಈ ಟಿ.ವಿ ಆ್ಯಂಕರ್‌ಗಳಿಗೆ ಇನ್ನೂ ಅನ್ನ ಎಲ್ಲಿಂದ ಬರತೈತಿ? ಇವೇ ಆಂದೋಲನವಾದಿಗಳ ಬೆಳೆದಿದ್ದನ್ನ ತಿನ್ತಾರ ಹೌದಿಲ್ಲೋ?'

'ಅವ್ರೆಲ್ಲ ಗ್ಲುಟನ್‌ಫ್ರೀ ಡಯಟ್‌ಗಳಿಗೆ ಬೆಳೆದ ತರಕಾರಿ, ಹಣ್ಣು ತಿಂತಾರಂತೆ!' ಕಿಸಕ್ಕನೆ ನಕ್ಕ ಬೆಕ್ಕಣ್ಣ 'ನೀ ಸುದ್ದಿ ಓದೋದು ಬಿಡು. ಇಂಥ ಜಾಹೀರಾತುಗಳನ್ನ ಮೋದಿಮಾಮ ಎಷ್ಟ್ ಗ್ಯಾರಂಟಿ ಕೊಟ್ಟಾನ, ಕಳೆದ ಹತ್ತು ವರ್ಷದಿಂದ ಕಲ್ಯಾಣದೇಶ ಆಗೈತಿ ಅಂತ ಮಾಹಿತಿ ಇರತೈತಿ, ಅವನ್ನ ಓದು. ಆಂದೋಲನವಾದಿಗಳ ಬಗ್ಗೆ ಟಿ.ವಿ ನಿರೂಪಕರ ಚರ್ಚೆ ಕೇಳು, ಅಷ್ಟೇ ಸಾಕು' ಎಂದು ನನ್ನ ತಲೆಗೆ ಮೊಟಕಿತು.

ದಿನದ ಟ್ವೀಟ್

ಅವಲಂಬನೆ ಕಡಿಮೆಯಾಗಬೇಕಾದರೆ...

ಬೆಂಗಳೂರಿನಲ್ಲಿ ಕಳೆದ ವರ್ಷ ಬಂದ ಕಡಿಮೆ ಮಳೆಯೂ ಸಾಕು ಬೆಂಗಳೂರಿನಲ್ಲಿರುವ ಎಲ್ಲರಿಗೂ ಎಲ್ಲಾ ರೀತಿಯ ಬಳಕೆಗೆ. ಮಳೆ ನೀರನ್ನು ಎಲ್ಲರೂ ಕೂಡಿಡಲು ಅಥವಾ ನೆಲದೊಳಗೆ ಬಿಡಲು ವ್ಯವಸ್ಥೆ ಮಾಡಿಕೊಂಡರೆ ಮುಂದಿನ 2-3 ವರ್ಷಗಳಲ್ಲಿ ಕಾವೇರಿಯ ಮೇಲೆ ಅವಲಂಬನೆಯನ್ನು ಪೂರ್ತಿ ಕಡಿಮೆ ಮಾಡಬಹುದು. ಈ ಬಗ್ಗೆ ಯೋಚನೆ ಮಾಡುವವರು ಬಹಳ ಕಡಿಮೆ.

ಗಿರೀಶ ಭೀ.ಶೋ.

ಕಿಡಿನುಡಿ

ರಾಜಕಾರಣವು ದಿನೇದಿನೇ ನಿಧಿ ಸಂಗ್ರಹಿಸುವ ಸ್ಪರ್ಧೆಯಾಗುತ್ತಿದೆ. ಈ ಸ್ಪರ್ಧೆಯಲ್ಲಿ ಯಾವ ಪಕ್ಷ ಗೆಲ್ಲುತ್ತದೋ ಅದು ಚುನಾವಣೆಯಲ್ಲಿ ಸೋಲಲು ಅರ್ಹವಾದುದು ಎಂದು ಮತದಾರರು ಯಾವಾಗ ಅರಿತುಕೊಳ್ಳುವರೋ ಆಗ ಪ್ರಪಂಚವು ಸುಧಾರಣೆಯತ್ತ ಹೊರಳುತ್ತದೆ.

ಕೌಶಿಕ್ ಬಸು, ಅರ್ಥಶಾಸ್ತ್ರಜ್ಞ

25 ವರ್ಷಗಳ ಹಿಂದೆ

ಶುಕ್ರವಾರ, 26-2-1999

• ಉನ್ನತ ದರ್ಜೆ ರೈಲು ಪ್ರಯಾಣ, ಸರಕು ಸಾಗಣೆ ದುಬಾರಿ

ನವದೆಹಲಿ, ಫೆ. 25 (ಪಿಟಿಐ, ಯುಎನ್ಐ)– ಉನ್ನತ ದರ್ಜೆಯ ಪ್ರಯಾಣ ದರಗಳಲ್ಲಿ ಶೇ 5 ಏರಿಕೆ ಹಾಗೂ ಸರಕು ಸಾಗಣೆ ದರದಲ್ಲಿ ಶೇಕಡ 4ರಷ್ಟು ಏರಿಕೆಯ ಮೂಲಕ ಮುಂದಿನ (1999–2000) ಹಣಕಾಸು ವರ್ಷದಲ್ಲಿ ಒಟ್ಟು 900 ಕೋಟಿ ರೂಪಾಯಿ ಹೆಚ್ಚು ವರಮಾನ ಸಂಗ್ರಹಿಸಲು ರೈಲ್ವೆ ಸಚಿವ ನಿತೀಶ್ ಕುಮಾರ್ ನಿರ್ಧರಿಸಿದ್ದಾರೆ.

ಅವರು ಇಂದು ಲೋಕಸಭೆಯಲ್ಲಿ ಮಂಡಿಸಿದ ರೈಲ್ವೆ ಆಯವ್ಯಯ ಮುಂಗಡ ಪತ್ರದ ಅಂದಾಜಿನಂತೆ, ಸರಕು ಸಾಗಣೆ ದರ ಹೆಚ್ಚಳದಿಂದ ಒಟ್ಟು 700 ಕೋಟಿ ರೂಪಾಯಿ ಬಂದರೆ, ಮಿಕ್ಕದ 200 ಕೋಟಿ ರೂಪಾಯಿಯು ಪ್ರಯಾಣದರ ಹೆಚ್ಚಳವೂ ಸೇರಿದಂತೆ ಇತರ ಬಾಬ್ತುಗಳಿಂದ ಸಿಗುವುದು. ಹೆಚ್ಚಿಸಲಾದ ದರಗಳು 1999ರ ಏಪ್ರಿಲ್ ಒಂದರಿಂದ ಜಾರಿಗೆ ಬರಲಿವೆ.

• ರೈಲುಗಳಲ್ಲಿ ಸಿಗರೇಟ್, ಬೀಡಿ ಮಾರಾಟ ನಿಷೇಧ

ನವದೆಹಲಿ, ಫೆ. 25 (ಪಿಟಿಐ)– ರೈಲ್ವೆ ಪ್ಲಾಟ್‌ಫಾರ್ಮ್ ಹಾಗೂ ಪ್ರಯಾಣಿಕರ ರೈಲುಗಳಲ್ಲಿ ಸಿಗರೇಟ್ ಮತ್ತು ಬೀಡಿ ಮಾರಾಟವನ್ನು ಬರುವ ಜೂನ್ 5 'ಪರಿಸರ ದಿನ'ದಿಂದ ನಿಷೇಧಿಸಲಾಗುವುದು ಎಂದು ರೈಲ್ವೆ ಸಚಿವ ನಿತೀಶ್ ಕುಮಾರ್ ಲೋಕಸಭೆಯಲ್ಲಿ ಇಂದು ತಿಳಿಸಿದರು.

ಪರಿಸರ ಸಂಬಂಧಿ ವಿಷಯಗಳಲ್ಲಿ ತಮ್ಮ ಇಲಾಖೆಯ ಬದ್ಧತೆಯನ್ನು ಬಿಂಬಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಅವರು ಸ್ಪಷ್ಟಪಡಿಸಿದರು.

'ರೈಲು ಪ್ರಯಾಣಿಕರ ದೂರುಗಳ ಬಗ್ಗೆ ಮಾಹಿತಿಯನ್ನು ನೀಡುವ 'ಗ್ರಾಹಕರ ಹಿತರಕ್ಷಣಾ ಸಂಸ್ಥೆಗಳನ್ನು ಶೀಘ್ರದಲ್ಲೇ ಸ್ಥಾಪಿಸಲಾಗುವುದು' ಎಂದರು.

50 ವರ್ಷಗಳ ಹಿಂದೆ

ಮಂಗಳವಾರ, 26-2-1974

• ಬೆಲೆ ಹತೋಟಿಗೆ ನಿರ್ದಿಷ್ಟ ಕ್ರಮ: ರಾಜ್ಯಪಾಲರಿಂದ ವಿವರಣೆ

ಬೆಂಗಳೂರು, ಫೆ. 25– ಬೆಲೆ ಏರಿಕೆಯ ನಿಯಂತ್ರಣ ಮತ್ತು ನಿತ್ಯಾವಶ್ಯಕ ವಸ್ತುಗಳ ಸಮರ್ಪಕ ವಿತರಣೆಗೆ ಮುಂದಿನ ದಿನಗಳಲ್ಲಿ ಕರ್ನಾಟಕ ಸರ್ಕಾರ ಕೈಗೊಳ್ಳಲಿರುವ ನಿರ್ದಿಷ್ಟ ಕ್ರಮಗಳನ್ನು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರು ಇಂದು ವಿಧಾನ ಮಂಡಲದ ಉಭಯ ಸದನಗಳ ಸಂಯುಕ್ತ ಅಧಿವೇಶನದಲ್ಲಿ ಪ್ರಕಟಿಸಿದರು.

ಮಂಗಳೂರಿನಲ್ಲಿ ಪೂರ್ತಿ ಹಾಗೂ ಹುಬ್ಬಳ್ಳಿ- ಧಾರವಾಡ, ಮೈಸೂರು, ಬೆಳಗಾವಿ, ಕಲ್ಬುರ್ಗಿಯಲ್ಲಿ ಹಂತಹಂತವಾಗಿ ಅನೌಪಚಾರಿಕ ಪಡಿತರ ಜಾರಿ ಈ ದಿಸೆಯಲ್ಲಿ ಮೊದಲನೇ ಕ್ರಮವಾದರೆ, ಸೀಮೆಎಣ್ಣೆ, ಟೈರು, ಶಿಶುಗಳ ಆಹಾರದಂಥ ಅಗತ್ಯ ವಸ್ತುಗಳನ್ನು ಸಹಕಾರಿ ಸಂಘಗಳ ಮೂಲಕ ನ್ಯಾಯಬೆಲೆಯಲ್ಲಿ ಪೂರೈಸುವುದು ಇನ್ನೊಂದು ಹೆಜ್ಜೆ.

• ಭೂಸುಧಾರಣೆ ವಿಧೇಯಕ ಜಾರಿಗೆ ಕ್ರಮ

ಬೆಂಗಳೂರು, ಫೆ. 25– ರಾಷ್ಟ್ರಪತಿಯವರ ಸಹಿ ಪಡೆದಿರುವ ಕರ್ನಾಟಕದ ಭೂ ಸುಧಾರಣಾ ವಿಧೇಯಕದ ಜಾರಿಗೆ ಸರ್ಕಾರವು ಸಮರ್ಪಕ ಕ್ರಮಗಳನ್ನು ಕೈಗೊಳ್ಳಲಿದೆ ಎಂದು ರಾಜ್ಯಪಾಲ ಶ್ರೀ ಮೋಹನ್‌ಲಾಲ್ ಸುಖಾಡಿಯಾ ಅವರು ವಿಧಾನ ಮಂಡಲಕ್ಕೆ ತಿಳಿಸಿದರು.

ರಾಜ್ಯಕ್ಕೆ ಬರಬೇಕಾಗಿರುವುದಕ್ಕಿಂತ ಕಡಿಮೆ ನೀರನ್ನು ಪಾಲು ಮಾಡಿರುವ ಕೃಷ್ಣಾ ಜಲ ವಿವಾದ ಪಂಚಾಯ್ತಿಯ ತೀರ್ಪಿನಿಂದ ಆಗಲಿರುವ ತೊಂದರೆಯಲ್ಲಿ ರಾಜ್ಯದ ಆಸಕ್ತಿಯನ್ನು ಕಾಯಲು ಸಾಧ್ಯವಿರುವ ಎಲ್ಲ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತದೆ ಎಂದು ಹೇಳಿದರು.

ಸಂಗತ

ಆ್ಯಂಟಿಬಯಾಟಿಕ್: ಇರಲಿ ಎಚ್ಚರ

ಆ್ಯಂಟಿಬಯಾಟಿಕ್ ಔಷಧಗಳ ಅತಿಯಾದ ಸೇವನೆಯು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುವುದರಿಂದ, ಈ ಸಂಬಂಧ ಹೊರಡಿಸಿರುವ ಮಾರ್ಗಸೂಚಿಯು ಮಹತ್ವದ್ದು

• ಡಾ. ಕೆ.ಎಸ್.ಚೈತ್ರಾ

'ಎರಡು ದಿನಗಳಿಂದ ಹಲ್ಲುನೋವು. ಹಿಂದಿನ ವರ್ಷ ನೀವೇ ಮಗಳಿಗೆ ಕೊಟ್ಟಿದ್ದ ಆ್ಯಂಟಿಬಯಾಟಿಕ್ ಸ್ವಲ್ಪ ಉಳಿದಿತ್ತು, ಅದನ್ನೇ ತೆಗೆದಿದೆ. ಮುಂದೆ ಏನು ಕೆಲಸ ಮಾಡಿತ್ತು. ಈ ಸಲ ಯಾಕೋ ನೋವು ಕಡಿಮೆ ಆಗುತ್ತಿಲ್ಲ, ಏನು ಮಾಡೋದು ಡಾಕ್ಟ್ರೇ?' ಇದು ವಾರದ ಹಿಂದೆ ಬಂದ ರೋಗಿಯೊಬ್ಬರ ಅಳಲು. ಪರೀಕ್ಷಿಸಿ ನೋಡಿದರೆ, ಅವರ ನೋವಿಗೆ ಕಾರಣ ವಸಡಿನಲ್ಲಿ ಸಿಕ್ಕಿಕೊಂಡಿದ್ದ ಆಹಾರದ ತುಣುಕು. ಆ್ಯಂಟಿಬಯಾಟಿಕ್ ಆಗತ್ಯವೇ ಇರಲಿಲ್ಲ, ಅದರೂ ತೆಗೆದುಕೊಂಡಿದ್ದರು!

ಇದು ಅವರೊಬ್ಬರ ಕಥೆಯಲ್ಲ. ಯಾವುದೇ ರೀತಿಯ ನೋವು, ಕೆಮ್ಮು, ಗಾಯ, ಜ್ವರ ಇದ್ದರೂ ಔಷಧ ಅಂಗಡಿಯಿಂದ ಒಳ್ಳೆಯ ಆ್ಯಂಟಿಬಯಾಟಿಕ್ ಪಡೆದು ಸೇವಿಸಿದರೆ ಬೇಗ ಗುಣವಾಗುತ್ತದೆ, ಖರ್ಚು ಕಡಿಮೆಯಾಗುತ್ತದೆ, ವೈದ್ಯರ ಭೇಟಿ ತಪ್ಪಿಸಬಹುದು ಎನ್ನುವುದು ನಮ್ಮಲ್ಲಿರುವ ನಂಬಿಕೆ.

1928ರಲ್ಲಿ ಪ್ರಖ್ಯಾತ ವಿಜ್ಞಾನಿ ಅಲೆಗ್ಸಾಂಡರ್ ಫ್ಲೆಮಿಂಗ್ ಆಕಸ್ಮಿಕವಾಗಿ ಕಂಡುಹಿಡಿದ ಪೆನ್ಸಿಲಿನ್ ಜಗತ್ತಿನ ಪ್ರಪ್ರಥಮ ಆ್ಯಂಟಿಬಯಾಟಿಕ್. ವೈದ್ಯವಿಜ್ಞಾನ ಮುಂದುವರಿದಂತೆ ಇಂದು ಹತ್ತು ಹಲವು ಆ್ಯಂಟಿಬಯಾಟಿಕ್‌ಗಳು ಸೋಂಕು ನಿಯಂತ್ರಿಸಿ ರೋಗ ಗುಣಪಡಿಸುವ, ಜೀವ ಉಳಿಸುವ ಮಾಂತ್ರಿಕ ಔಷಧಗಳಾಗಿವೆ. ನಿಜ. ಆದರೆ ಇತ್ತೀಚಿನ ಸಂಶೋಧನೆಗಳ ಪ್ರಕಾರ, ಶೇಕಡ 30ರಿಂದ 50ರಷ್ಟು ಸಂದರ್ಭಗಳಲ್ಲಿ ಇವುಗಳ ಬಳಕೆ ಅನಗತ್ಯ ಮತ್ತು ಅಪಾಯಕಾರಿಯಾಗಿದ್ದವು!

ಸೂಕ್ಷ್ಮಾಣುಜೀವಿಗಳಲ್ಲಿ ಅತಿ ಹೆಚ್ಚಿನ ತೊಂದರೆಯುಂಟು ಮಾಡುವುದು ರೋಗಕಾರಕ ಬ್ಯಾಕ್ಟೀರಿಯಾಗಳು. ಹಾಗಾಗಿ, ಸೂಕ್ಷ್ಮಜೀವಿಗಳನ್ನು ನಿಯಂತ್ರಿಸುವ ಔಷಧಗಳಲ್ಲಿ ಪ್ರಮುಖ ಭಾಗವೆಂದರೆ ಪ್ರತಿಜೈವಿಕಗಳು ಅಂದರೆ ಆ್ಯಂಟಿಬಯಾಟಿಕ್. ರೋಗಕಾರಕ ಬ್ಯಾಕ್ಟೀರಿಯಾಗಳನ್ನು ಸಾಕಷ್ಟು ಕೊಲ್ಲುವುದು, ನಿಗದಿತ ಪ್ರಮಾಣ, ನಿಯಮಿತ ಕಾಲ ಬಳಕೆಯಿಂದಲ್ಲಿ ಅವು ಜೀವರಕ್ಷಕಗಳು ಕಾರ್ಯ ನಿರ್ವಹಿಸುತ್ತವೆ. ಅದರೆ ಕಳೆದೊಂದು ದಶಕದಲ್ಲಿ ಇವುಗಳ ವಿವೇಚನೆ ಇಲ್ಲದ ಬಳಕೆಯಿಂದ ದೇಹದ ಮೇಲೆ ನಾನಾ ರೀತಿಯ ಅಡ್ಡ ಪರಿಣಾಮಗಳಾಗುತ್ತಿವೆ. ಹೊಟ್ಟೆಯಲ್ಲಿ, ಯಕೃತ್ತು ಮತ್ತು ಮೂತ್ರಪಿಂಡಕ್ಕೆ ಹಾನಿ ಜತೆಗೆ ಅತಿಯಾದ ಬಳಕೆಯಿಂದ ರೋಗನಿರೋಧಕ ಶಕ್ತಿ ಕುಗ್ಗುತ್ತದೆ. ಖರ್ಚು ಹೆಚ್ಚುತ್ತದೆ, ಬ್ಯಾಕ್ಟೀರಿಯಾಗಳ ಔಷಧ ನಿರೋಧಕ ಶಕ್ತಿ ಹೆಚ್ಚುತ್ತದೆ. ಎಲ್ಲಕ್ಕಿಂತ ಗಂಭೀರ ಪರಿಣಾಮ, ಜಾಗತಿಕ ಮಟ್ಟದಲ್ಲಿ ಕಾಡುತ್ತಿರುವ ಹೊಸ ಸಮಸ್ಯೆ, ಆ್ಯಂಟಿಮೈಕ್ರೋಬಿಯಲ್ ರೆಸಿಸ್ಟೆನ್ಸ್ (ಪ್ರತಿಜೈವಿಕಗಳ ಪ್ರತಿರೋಧಕತೆ)! ಅಂದರೆ ರೋಗ ಉಂಟು ಮಾಡುವ ಬ್ಯಾಕ್ಟೀರಿಯಾಗಳು ಆ್ಯಂಟಿಬಯಾಟಿಕ್‌ಗಳ ಅನಿಯಮಿತ ಬಳಕೆಯಿಂದಾಗಿ ಕ್ರಮೇಣ ಅವುಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತವೆ. ಇಂತಹ ಬ್ಯಾಕ್ಟೀರಿಯಾಗಳ ಮೇಲೆ ಆ್ಯಂಟಿಬಯಾಟಿಕ್‌ಗಳು ನಿಷ್ಪ್ರಯೋಜಕವಾಗುತ್ತವೆ. ಹೀಗಾದಾಗ, ಎಂತಹದ್ದೇ ಅತ್ಯಾಧುನಿಕ ವ್ಯವಸ್ಥೆ ಇದ್ದರೂ ಬ್ಯಾಕ್ಟೀರಿಯಾವನ್ನು ಎದುರು ಕೆಲಸ ಮಾಡುವ ಔಷಧ ಇಲ್ಲದೆ ಸೋಲುವುದು ಅನಿವಾರ್ಯ.

2019ರಲ್ಲಿ ಭಾರತದಲ್ಲಿಯೇ ಮೂರು ಲಕ್ಷಕ್ಕೂ ಹೆಚ್ಚು ಜನರು ಇದರಿಂದ ಸಾವನ್ನಪ್ಪಿದ್ದಾರೆ. ಕೋವಿಡ್ ಸಮಯದಲ್ಲಿ ನಿರ್ದಿಷ್ಟವಾದ ಚಿಕಿತ್ಸೆ ಲಭ್ಯವಿಲ್ಲದೇ ಇದ್ದಾಗ ಜನರು ಹೆದರಿಕೆಯಿಂದಲೇ ಅತಿಯಾದ ಪ್ರಮಾಣದಲ್ಲಿ ಆ್ಯಂಟಿಬಯಾಟಿಕ್ ಸೇವಿಸಿದ್ದರು ಎನ್ನುವ ಅಂಶ ಸಂಶೋಧನೆಗಳಿಂದ ಸಾಬೀತಾಗಿದೆ. ಇದರಿಂದಾಗಿ ದೀರ್ಘಕಾಲೀನ ಹಾಗೂ ಗಂಭೀರ ಆರೋಗ್ಯ ಸಮಸ್ಯೆಗಳು ಎದುರಾಗುವ ಸಾಧ್ಯತೆ ಇದೆ ಎಂದು ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ. ಹೀಗಿರುವಾಗ, ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯ ಈ ಕುರಿತಾಗಿ ಮಾರ್ಗಸೂಚಿಯನ್ನು ಹೊರಡಿಸಿರುವುದು ನಿಜಕ್ಕೂ ಮಹತ್ವದ್ದು.

ಆ್ಯಂಟಿಬಯಾಟಿಕ್ ಜೊತೆ ಸೂಕ್ಷ್ಮಾಣುನಿರೋಧಕ ಔಷಧಗಳನ್ನು ಬರೆಯುವಾಗ ವೈದ್ಯರು ಅದಕ್ಕೆ ಲಕ್ಷಣ, ಕಾರಣ ಮತ್ತು ಸಮರ್ಥನೆಯನ್ನು ಉಲ್ಲೇಖಿಸಬೇಕು, ಔಷಧ ಅಂಗಡಿಯವರು ವೈದ್ಯರ ಶಿಫಾರಸಿನ ಮೇಲೆ ಮಾತ್ರ ಇವುಗಳನ್ನು ಮಾರಾಟ ಮಾಡಬೇಕು ಎಂದು ಸೂಚಿಸಲಾಗಿದೆ.

ವೈದ್ಯರು ಅರ್ಥಕ ಸಂದರ್ಭಗಳಲ್ಲಿ ರೋಗಿಗಳ ಒತ್ತಡ, ಕೊಡದಿದ್ದರೆ ಬೇರೆ ಹೋಗುತ್ತಾರೆ ಎನ್ನುವ ವ್ಯಾವಹಾರಿಕ ದೃಷ್ಟಿ, ಔಷಧ ಕಂಪನಿಗಳ ಒತ್ತಡ, ಒತ್ತಡ, ರೋಗಕಾರಕ ಬ್ಯಾಕ್ಟೀರಿಯಾ ಕಂಡುಹಿಡಿಯಲು ಅಗತ್ಯವಾದ ಪ್ರಯೋಗಾಲಯದ ಕೊರತೆ, ರೋಗಿಗೆ ಹೆಚ್ಚುಕಡಿಮೆಯಾದರೆ ಎಂಬ ಆತಂಕ ಇವುಗಳಿಂದ ಆ್ಯಂಟಿಬಯಾಟಿಕ್‌ಗಳನ್ನು ತೆಗೆದು ಕೊಳ್ಳುವಂತೆ ಬರೆಯಬೇಕಾದ ಸಾಧ್ಯತೆ ಇರುತ್ತದೆ. ಇದು ಬದಲಾಗಬೇಕು.

ನಮ್ಮ ಸುತ್ತಮುತ್ತ ರೋಗಕಾರಕವಾದ ಸೂರಾರು ಬ್ಯಾಕ್ಟೀರಿಯಾಗಳಿದ್ದು ಅವುಗಳಿಂದ ಉಂಟಾಗುವ ಸೋಂಕುಗಳು ಬಹುತೇಕ ಬಹಳಷ್ಟು. ಜತೆಗೆ ಹೊಸ ರೂಪವನ್ನು ತಾಳಿ ಬರುತ್ತಿವೆ. ಇವುಗಳನ್ನು ನಿಯಂತ್ರಿಸಲು ಸದ್ಯಕ್ಕೆ ಇರುವಂತಹ ಆ್ಯಂಟಿಬಯಾಟಿಕ್‌ಗಳು ಕೆಲವೇ ಕೆಲವು! ಮತ್ತಷ್ಟನ್ನು ಹುಡುಕುವುದಕ್ಕೆ ಎಂದರೆ, ಸಂಶೋಧನೆಗಳು ನಡೆಯುತ್ತಿದ್ದರೂ ಅದು ಅಷ್ಟು ಸುಲಭವಲ್ಲ. ಅಪಾರ ಖರ್ಚು, ಸತತ ಪ್ರಯತ್ನ ಮತ್ತು ಸುರಕ್ಷಿತವಾದುದನ್ನು ಕಂಡುಹಿಡಿಯುವ ದೊಡ್ಡ ಜವಾಬ್ದಾರಿಯ ಕೆಲಸವದು. ಸದ್ಯದ ಪರಿಸ್ಥಿತಿಯಲ್ಲಂತೂ ಆ ರೀತಿಯ ಹೊಸದಾದ ಆ್ಯಂಟಿಬಯಾಟಿಕ್ ಮಾರುಕಟ್ಟೆಗೆ ಬರುವ ಯಾವುದೇ ಲಕ್ಷಣವಿಲ್ಲ. ಹೀಗಾಗಿ, ಇರುವಂತಹ ಜೀವರಕ್ಷಕ ಆ್ಯಂಟಿಬಯಾಟಿಕ್‌ಗಳನ್ನು ಕಟ್ಟೆಚ್ಚರದಿಂದ ಉಪಯೋಗಿಸಬೇಕಾದದ್ದು ಅನಿವಾರ್ಯ. ಆ ದಿಸೆಯಲ್ಲಿ ಈ ಮಾರ್ಗಸೂಚಿ ಅನುಷ್ಠಾನಗೊಳ್ಳಬೇಕಾದದ್ದು ತುರ್ತು ಅಗತ್ಯ!

ಲೇಖಕಿ: ದಂತ ವೈದ್ಯೆ

ವಾಚಕರ ವಾಣಿ

ಹುಂಡಿ ಹಣದ ಹಿಂದಿದೆ ಭಕ್ತರ ಮುಗ್ಧತೆ

ಹಿಂದೂ ದೇವಾಲಯಗಳ ಹಣ ಹಿಂದೂಗಳಿಗಾಗಿ ಎಂದು ವಾದಿಸುವವರಿಗೆ ಪ್ರತಿಯಾಗಿ, ಒಂದೊಂದು ಜಾತಿಯವರಿಗೆ ಒಂದೊಂದು ಪ್ರತ್ಯೇಕ ಹುಂಡಿ ಇಟ್ಟು, ಸಂಗ್ರಹವಾದ ಹಣವನ್ನು ಆಯಾ ಜಾತಿಯ ಅಭಿವೃದ್ಧಿ ನಿಗಮಗಳಿಗೆ ಕೊಡಬಹುದು ಎಂದು ಟಿ.ಗೋವಿಂದರಾಜು ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಫೆ. 24). ಎಲ್ಲ ಜಾತಿಯಲ್ಲಿಯೂ ಆಸ್ತಿಕರು ಮತ್ತು ನಾಸ್ತಿಕರು ಇರುವಾಗ ಇದರಿಂದ ಆಸ್ತಿಕರ ಹಣ ನಾಸ್ತಿಕರಿಗೂ ಸೇರಿದಂತಾಗುವ ವಾದ ಹುಟ್ಟುತ್ತದಲ್ಲವೇ? ಭಕ್ತರು ಹುಂಡಿಗೆ ಯಾವ ಉದ್ದೇಶ ಮತ್ತು ನಂಬಿಕೆಯಿಂದ ಹಣ ಹಾಕುತ್ತಾರೋ ಆ ಉದ್ದೇಶಕ್ಕೆ ಬಳಕೆ ಆದಲ್ಲಿ ಮಾತ್ರ ಭಕ್ತರ ಹಣವನ್ನು ಸದುಪಯೋಗ ಪಡಿಸಿಕೊಂಡಂತೆ ಆಗುತ್ತದೆ. ಈ ಹಣವನ್ನು ಆಯಾ ದೇವಸ್ಥಾನದ ಅಭಿವೃದ್ಧಿಗೆ ಮತ್ತು ಅಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ಮೂಲ ಸೌಕರ್ಯಕ್ಕೆ ಹಾಗೂ ಶ್ರೀಮಂತ ದೇವಾಲಯಗಳಲ್ಲಿ ಹೆಚ್ಚುವರಿಯಾಗಿ ಉಳಿಯುವಂತಹ ಹಣವನ್ನು ಆದಾಯವಿಲ್ಲದ ಪ್ರಾಚೀನ ದೇವಾಲಯಗಳ ಸಂರಕ್ಷಣೆ ಮತ್ತು ಅಲ್ಲಿಗೆ ಪ್ರವಾಸಿಗರನ್ನು ಆಕರ್ಷಿಸುವಂತಹ ಆಗತ್ಯವಾದ ಮೂಲ ಸೌಕರ್ಯ ಕಲ್ಪಿಸುವುದಕ್ಕೆ ಬಳಸುವುದು ಸೂಕ್ತ. ಆಗ, ಆಸ್ತಿಕ ಭಕ್ತರು ಮುಗ್ಧತೆಯಿಂದ ತಮ್ಮ ಶಕ್ತ್ಯಾನುಸಾರ ಹುಂಡಿಗೆ ಹಣ ಹಾಕಿದ್ದಾರೋ ಆ ಉದ್ದೇಶ ಸದ್ಬಳಕೆ ಆಗಬಹುದು. ಅನ್ಯ ಉದ್ದೇಶಕ್ಕೆ ಬಳಸುವುದಾದಲ್ಲಿ ಈ ಹೂಗಿಗೆ ಕತ್ತ ಬಂದು, ಕ್ರಮೇಣ ಭಕ್ತರು ಹುಂಡಿಗೆ ಹಣ ಹಾಕುವುದನ್ನೇ ನಿಲ್ಲಿಸುವ ಸಂಭವ ಬರಬಹುದು.

ಇತರ ಅಭಿವೃದ್ಧಿ ಕಾರ್ಯಗಳಿಗೆ ಸರ್ಕಾರವು ಆ ಸಲುವಾಗಿಯೇ ಜನರಿಂದ ಸಂಗ್ರಹಿಸುವ ತೆರಿಗೆ ಹಣವನ್ನು ಬಳಸಬೇಕು. ಇಲ್ಲವಾದಲ್ಲಿ ಅದಕ್ಕೆ ಇತರ ಆದಾಯ ಮೂಲಗಳನ್ನು ಹುಡುಕಿಕೊಳ್ಳುವ ಜವಾಬ್ದಾರಿ ಸರ್ಕಾರದ್ದು.

ಕೆ.ಎಂ.ನಾಗರಾಜು, ಮೈಸೂರು

ಉತ್ತರ ಪತ್ರಿಕೆ: ಇಲಾಖೆಯೇ ಒದಗಿಸಲಿ

ಎಸ್ಎಸ್ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಉತ್ತರ ಪತ್ರಿಕೆ ಒದಗಿಸುವ ಹೊಣೆ ಶಾಲೆಗಳದ್ದೇ ಎಂದು ಶಿಕ್ಷಣ ಇಲಾಖೆಯ ಅಧಿಕಾರಿಗಳು ಶಾಲಾ ಮುಖ್ಯಸ್ಥರಿಗೆ ವಾಟ್ಸ್‌ಆ್ಯಪ್ ಸಂದೇಶ ರವಾನಿಸಿದ ವಿಚಾರ ಮಾಧ್ಯಮಗಳಲ್ಲಿ ವರದಿಯಾಗಿದೆ. ಹೀಗಾದರೆ, ಉತ್ತರ ಪತ್ರಿಕೆ ಪೂರೈಕೆ ಹೊಣೆ ಶಿಕ್ಷಕರ ಜವಾಬ್ದಾರಿಯಾಗುವ ಸಾಧ್ಯತೆ ಇರುತ್ತದೆ. ಈ ಹೊಣೆಗಾರಿಕೆಯನ್ನು ಶಾಲೆಗಳು ಮಕ್ಕಳ ಮೇಲೆ ಹೇರುವ ಸಾಧ್ಯತೆಯೂ ಇದೆ. ಆಗ ಮಕ್ಕಳು ಬ್ಯಾಗ್‌ನಲ್ಲಿ ಉತ್ತರ ಪತ್ರಿಕೆಯನ್ನು ಇಟ್ಟುಕೊಂಡು ಬಂದರೆ, ಅದು ಮಡಚಿ ಹೋಗಬಹುದು, ಸುಕ್ಕಾಗಬಹುದು. ಈ ರೀತಿಯಾದ ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಬರೆದರೆ ಅಕ್ಷರ ಸ್ಪಷ್ಟವಾಗಿ ಕಾಣದು, ಅಲ್ಲದೆ ಅಕ್ಷರ ಚಿತ್ತಾಗಬಹುದು. ಪರೀಕ್ಷೆಯ ದಿನ, ಶಾಲೆಯ ಬಳಿ ಇರುವ ಅಂಗಡಿಯಲ್ಲಿ ಉತ್ತರ ಪತ್ರಿಕೆ ಖರೀದಿಸಲು ಮಕ್ಕಳು ಮುಗಿಬಿದ್ದರೆ, ಪರೀಕ್ಷೆಗೆ ಸಮಯಕ್ಕೆ ಸರಿಯಾಗಿ ಹಾಜರಾಗಲು ತೊಂದರೆ ಆಗಬಹುದು. ಹೀಗಾಗಿ, ಉತ್ತರ ಪತ್ರಿಕೆ ಒದಗಿಸುವ ಜವಾಬ್ದಾರಿಯನ್ನು ಇಲಾಖೆಯೇ ಹೊತ್ತುಕೊಳ್ಳುವುದು ಒಳಿತು.

ಲಕ್ಷ್ಮೀಕಾಂತ್ ಕೊಟ್ಯಾರ ಚೌಕಿ, ಮಂಗಳೂರು

ಬಿಬಿಎಂಪಿ: ಬೆಕ್ಕಿಗೆ ಗಂಟೆ ಕಟ್ಟುವವರಾರು?

ಬೃಹತ್ ಬೆಂಗಳೂರು ಮಹಾನಗರಪಾಲಿಕೆಯ (ಬಿಬಿಎಂಪಿ) ವಾರ್ಡ್‌ಗಳು ಹಾಗೂ ಉಪವಿಭಾಗಗಳ ಕಚೇರಿಗಳನ್ನು ತೆರೆಯಲು ಮುಖ್ಯ ಆಯುಕ್ತರು ಆದೇಶ ನೀಡಿ ಒಂದೂವರೆ ತಿಂಗಳಾದರೂ ವಲಯ ಆಯುಕ್ತರು ಈ ಕುರಿತು ಕ್ರಮ ಕೈಗೊಳ್ಳದೇ ಇರುವುದು (ಪ್ರ.ವಾ., ಫೆ.23) ಬೆಂಗಳೂರಿಗರ ದುರದೃಷ್ಟ. ನಿಯಮಗಳು ಮತ್ತು ಸುತ್ತೋಲೆಗಳನ್ನು ಉಲ್ಲಂಘಿಸುವುದು ಬಿಬಿಎಂಪಿಯಲ್ಲಿ ಸಾಮಾನ್ಯ ಎಂಬಂತಾಗಿದೆ. ಜನಸ್ನೇಹಿ ಆಡಳಿತ ನೀಡಬೇಕಾದ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಆಯುಕ್ತರ ಆದೇಶ ಪಾಲಿಸದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಬೇಕು. ಇಂತಹ ಪ್ರಕರಣಗಳು ಬೆಳಕಿಗೆ ಬರುತ್ತಲೇ ಇರುತ್ತವೆ. ಬಿಬಿಎಂಪಿ ಎಂಬ ವಿಶಾಲ ಆಲದ ಮರದ ಕೆಳಗೆ ಆಶ್ರಯ ಪಡೆದಿರುವವರು ಇದನ್ನೆಲ್ಲ ಗಂಭೀರವಾಗಿ ಪರಿಗಣಿಸುವುದಿಲ್ಲ.

ಹಲವು ವಿಭಾಗಗಳಿದ್ದರೂ ಆಡಳಿತ ಕುಂಠಿತವಾಗಿದೆ. ನಿಪುಣ ನಿಯಂತ್ರಕರಿಲ್ಲದ ಬಿಬಿಎಂಪಿ ಎಲ್ಲ ಲೆಕ್ಕಕ್ಕೂ ಸಲ್ಲುತ್ತದೆ, ಆಟ ಮಾತ್ರ ಕಳಪೆಯಾಗಿದೆ. ವಾರ್ಡ್‌ಗಳ ನೇಮಕವೂ ಈ ಕಾಲದಲ್ಲಿ ಪಕ್ವವಾದ ಚಿಕಿತ್ಸೆಯಾಗಬಹುದು. ಆದರೆ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ರಘುಪತಿಪೇಟೆ ನಟರಾಜ್, ಬೆಂಗಳೂರು

ಚಿಲ್ಲರೆ ಸಮಸ್ಯೆಗೆ ಇದೆ ಪರಿಹಾರ

₹ 10ರ ನಾಣ್ಯಗಳ ಚಲಾವಣೆಗೆ ರಾಜ್ಯದಲ್ಲಿ ಇರುವ ಸಮಸ್ಯೆ ಬೇರೆ ರಾಜ್ಯಗಳಲ್ಲಿ ಇರುವಂತೆ ಕಾಣುವುದಿಲ್ಲ. ನಾನು ನವಿಮುಂಬೈಯಲ್ಲಿ ಕೆಲವು ದಿನ ಇದ್ದಾಗ, ₹ 10ರ ನಾಣ್ಯಗಳು ಹೆಚ್ಚಿನ ಪ್ರಮಾಣದಲ್ಲಿ ಚಲಾವಣೆಯಲ್ಲಿ ಇದ್ದುದನ್ನು ಗಮನಿಸಿದೆ. ಅಲ್ಲಿಂದ ದಾವಣಗೆರೆಗೆ ಮರಳಿದಾಗ, ನನ್ನ ಬಳಿ ಉಳಿದಿದ್ದ ₹ 10ರ ನಾಣ್ಯಗಳು ಚಲಾವಣೆಯಾಗದೆ ದೇವರ ಹುಂಡಿಗೆ ಹಾಕಬೇಕಾಯಿತು. ಇತ್ತೀಚೆಗೆ, ಉಡುಪಿ ಜಿಲ್ಲೆಯ ಸಾಲಿಗ್ರಾಮದಲ್ಲಿ ಅಂಗಡಿಯೊಂದರ ಮುಂದೆ ₹ 10 ಮತ್ತು ₹ 20ರ ನಾಣ್ಯಗಳನ್ನು ಸ್ವೀಕರಿಸಲಾಗುತ್ತದೆ ಎಂಬ ಮಾಹಿತಿ ಇದ್ದ ಬ್ಯಾನರ್ ಗಮನಿಸಿದೆ. ಹಾಗೆಯೇ ದಾವಣಗೆರೆಯ ಹೋಟೆಲೊಂದರಲ್ಲೂ ಅಂತಹ ಬೋರ್ಡ್ ಹಾಕಲಾಗಿದೆ.

ಈಗಂತೂ, ₹ 10ರ ನೋಟುಗಳ ಅಭಾವ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಚಿಲ್ಲರೆ ಅಭಾವದಿಂದ ಬೇಡದ ವಸ್ತುಗಳನ್ನು ಅನಗತ್ಯವಾಗಿ ಖರೀದಿಸಬೇಕಾಗಿದೆ. ಹಾಗೆಯೇ, ಈಗೀಗ ₹ 50 ಹಾಗೂ ₹ 100ರ ನೋಟುಗಳು ಸಹ ದುರ್ಲಭವಾಗುತ್ತಿವೆ. ಎಟಿಎಂಗಳಲ್ಲಿ ಸಾಮಾನ್ಯವಾಗಿ ₹ 500ರ ನೋಟುಗಳೇ ಹೆಚ್ಚಾಗಿ ಸಿಗುತ್ತವೆ. ಕಡಿಮೆ ಮುಖಬೆಲೆಯ ಬಿಡಿನೋಟು ಪಡೆಯಲು ದ್ವಿಚಕ್ರ ವಾಹನಕ್ಕೆ ₹ 50 ಪೆಟ್ರೋಲ್ ಹಾಕಿಸಬೇಕಾದ ಪರಿಸ್ಥಿತಿ ನಮ್ಮದು. ಬಿಡಿನೋಟು ಪಡೆಯಲು ಬ್ಯಾಂಕಿಗೆ ಹೋದರೆ ಸರದಿಯಲ್ಲಿ ನಿಲ್ಲಬೇಕಾಗುತ್ತದೆ. ಕೆಲವೊಮ್ಮೆ ಕಡಿಮೆ ಮುಖಬೆಲೆಯ ಬಿಡಿನೋಟುಗಳನ್ನು ನೀಡಲು ಬ್ಯಾಂಕ್‌ನವರು ಹಿಂದೇಟು ಹಾಕುವುದೂ ಉಂಟು. ಹೀಗಾದರೆ ವ್ಯವಹರಿಸು ವುದಾದರೂ ಹೇಗೆ? ಈ ದಿಸೆಯಲ್ಲಿ, ಬ್ಯಾಂಕಿನಲ್ಲಿ ಶೀಘ್ರವಾಗಿ ಸಮಸ್ಯೆ ಬಗೆಹರಿಸಬೇಕಿದೆ. ಹಾಗೆಯೇ ಕೇಂದ್ರ ಸರ್ಕಾರ ಕ್ಯಾಶ್‌ಲೆಸ್ ವ್ಯವಹಾರಗಳಿಗೆ ಕ್ರಮ ಕೈಗೊಂಡು ಆರ್‌ಬಿಐ ಮುಖಾಂತರ ಸಂಸ್ಥೆಗಳು, ಹಾಲಿನ ಕೇಂದ್ರಗಳ ಮೂಲಕ ಗ್ರಾಹಕರು ಪಡೆಯುವಂತೆ ಮಾಡಬೇಕು.

ರಘುನಾಥ ರಾವ್ ತಾಪ್ಸೆ, ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದೇಶದ ಸಾಲ ಈ ವರ್ಷ ₹183.67 ಲಕ್ಷ ಕೋಟಿಗೆ ಏರುವ ಅಂದಾಜು

ಸಾಲದ ಹೊರೆ ಹೆಚ್ಚಳ ನಿರಂತರ



● ಜಯಸಿಂಹ ಆರ್.

ಭಾರತದ ಸಾಲ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ. ಮುಂದಿನ ವರ್ಷಗಳಲ್ಲಿ ಭಾರತದ ಒಟ್ಟು ಸಾರ್ವಜನಿಕ ಸಾಲ ಮತ್ತು ಜಿಡಿಪಿ ನಡುವಣ ಅನುಪಾತವು ಶೇ 100ರ ಗಡಿಯನ್ನು ಮೀರುತ್ತದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಇತ್ತೀಚೆಗೆ ಹೇಳಿತ್ತು. ಕೇಂದ್ರ ಸರ್ಕಾರವು ಇದನ್ನು ನಿರಾಕರಿಸಿತ್ತು. ಮಂಗಳವಾರವಷ್ಟೇ ಈ ಬಗ್ಗೆ ವಿವರಣೆ ನೀಡಿರುವ ಆರ್‌ಬಿಐ, ಹಣಕಾಸು ನಿಧಿಯ ಮುನ್ನೋಟಕ್ಕಿಂತ ಉತ್ತಮ ಸ್ಥಿತಿಯಲ್ಲಿ ಭಾರತದ ಆರ್ಥಿಕತೆ ಇರಲಿದೆ ಎಂದು ಹೇಳಿದೆ. ಸಾಲ ಮತ್ತು ಜಿಡಿಪಿ ಅನುಪಾತವೂ ಕಡಿಮೆಯಾಗಲಿದೆ ಎಂದೂ ಹೇಳಿದೆ. ಆದರೆ ಹಿಂದಿನ 22 ವರ್ಷಗಳಲ್ಲಿ ದೇಶದ ಸಾಲದ ಸ್ಥಿತಿಗತಿ ಕೆಟ್ಟದಾಗಿದೆ ಎನ್ನುವುದನ್ನು ಕೇಂದ್ರ ಸರ್ಕಾರದ್ದೇ ದಾಖಲೆಗಳು ಹೇಳುತ್ತಿವೆ.

2023ರ ಡಿಸೆಂಬರ್‌ನಲ್ಲಿ ವರದಿ ಬಿಡುಗಡೆ ಮಾಡಿದ್ದ ಅಂತರರಾಷ್ಟ್ರೀಯ ಹಣಕಾಸು ನಿಧಿಯು 2027–28ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಭಾರತದ ಸಾಲ ಮತ್ತು ಜಿಡಿಪಿ ಅನುಪಾತವು ಶೇ 100ರ ಗಡಿಯನ್ನು ದಾಟುತ್ತದೆ ಎಂದು ಹೇಳಿತ್ತು. ಇದಕ್ಕೆ ಕೇಂದ್ರ ಹಣಕಾಸು ಸಚಿವಾಲಯವು ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಕೋವಿಡ್‌ನ ಕಾರಣದಿಂದ ವಿಶ್ವದ ಎಲ್ಲಾ ಆರ್ಥಿಕತೆಗಳು ಹಿನ್ನಡೆ ಅನುಭವಿಸಿದ್ದವು. ಆಗ ನಮ್ಮ ಸಾಲ–ಜಿಡಿಪಿ ಅನುಪಾತವು ಶೇ 88ರಷ್ಟು ಇದ್ದುದ್ದನ್ನು ಈಗ ಶೇ 81ರಷ್ಟಕ್ಕೆ ಇಳಿಸಲಾಗಿದೆ ಎಂದು ಹೇಳಿತ್ತು. ಆದರೆ ಭಾರತದ ಸಾಲ–ಜಿಡಿಪಿ ಅನುಪಾತ ಏರಿಕೆಯು 2014–15ನೇ ಸಾಲಿನಿಂದಲೇ ಆರಂಭವಾಗಿತ್ತು ಎಂಬುದನ್ನು ಹಣಕಾಸು ಸಚಿವಾಲಯವು ಸಂಸತ್ತಿಗೆ ನೀಡಿರುವ ದಾಖಲೆಗಳೇ ಹೇಳುತ್ತಿವೆ. ಕೋವಿಡ್ ಅವಧಿಯಲ್ಲಿ ಅದು ಗರಿಷ್ಠ ಮಟ್ಟಕ್ಕೆ ಹೋಗಿತ್ತು. ಆನಂತರ ಅದು ಇಳಿಕೆಯಾದರೂ 20 ವರ್ಷಗಳ ಅವಧಿಯ ಗರಿಷ್ಠ ಮಟ್ಟದಲ್ಲೇ ಇದೆ ಎಂಬುದನ್ನು ಆ ದಾಖಲೆಗಳು ಹೇಳುತ್ತಿವೆ.

ಈ ಸಂಬಂಧ ಭಾರತೀಯ ರಿಸರ್ವ್ ಬ್ಯಾಂಕ್ ನೀಡಿರುವ ವರದಿಯು, 2030–31ನೇ ಸಾಲಿನ ವೇಳೆಗೆ ಈ ಅನುಪಾತವು ಶೇ 73.4ರಷ್ಟಕ್ಕೆ ಇಳಿಕೆಯಾಗಲಿದೆ. ಶಿಸ್ತಿನ ಆರ್ಥಿಕ ಕ್ರಮಗಳ ಕಾರಣದಿಂದ ಇದು ಸಾಧ್ಯವಾಗಲಿದೆ ಎಂದು ಆರ್‌ಬಿಐ ಅಂದಾಜಿಸಿದೆ. ಆದರೆ, ದೇಶದ ಸಾಲದ ಮೊತ್ತ ಪ್ರತಿ ವರ್ಷ ಏರಿಕೆಯಾಗುತ್ತಲೇ ಇದೆ ಮತ್ತು ದೇಶದ ಜನರ ಮೇಲೆ ಇರುವ ತಲಾ ಸಾಲದ ಮೊತ್ತವೂ ಏರಿಕೆಯಾಗುತ್ತಿದೆ ಎಂಬುದನ್ನು ಕೇಂದ್ರ ಹಣಕಾಸು ಸಚಿವಾಲಯವೇ ತನ್ನ ವರದಿಗಳಲ್ಲಿ ಮತ್ತು ಪ್ರಕಟಣೆಗಳಲ್ಲಿ ಹೇಳಿದೆ.

ಜನರ ಮೇಲೆ ತಲಾ ಸಾಲದ ಹೊರೆ

₹58,255
2011–12ರಲ್ಲಿ ದೇಶದ ಪ್ರತಿ ಪ್ರಜೆಯ ಮೇಲೆ ಇದ್ದ ಕೇಂದ್ರ ಸರ್ಕಾರದ ತಲಾ ಸಾಲದ ಮೊತ್ತ

₹1.17 ಲಕ್ಷ
2022–23ರ ಮಾರ್ಚ್ ಅಂತ್ಯದ ವೇಳೆಗೆ ದೇಶದ ಪ್ರತಿ ಪ್ರಜೆಯ ಮೇಲೆ ಇದ್ದ ಕೇಂದ್ರ ಸರ್ಕಾರದ ತಲಾ ಸಾಲದ ಮೊತ್ತ

- ಮನಮೋಹನ್ ಸಿಂಗ್ ಅವರ ನೇತೃತ್ವದ ಯುಪಿಎ–2 ಸರ್ಕಾರ ಅಸ್ತಿತ್ವಕ್ಕೆ ಬಂದಾಗ ದೇಶದ ಒಟ್ಟು ಸಾಲ ₹31.35 ಲಕ್ಷ ಕೋಟಿಯಷ್ಟು ಇತ್ತು. ಆ ಸರ್ಕಾರದ ಅವಧಿ ಮುಗಿದಾಗ ಒಟ್ಟು ಸಾಲದ ಮೊತ್ತ ₹55.87 ಲಕ್ಷ ಕೋಟಿಯಷ್ಟಾಗಿತ್ತು. ಐದು ವರ್ಷಗಳಲ್ಲಿ ದೇಶದ ಒಟ್ಟು ಸಾಲವು ಪ್ರತಿ ವರ್ಷ ₹4 ಲಕ್ಷ ಕೋಟಿಯಿಂದ ₹5 ಲಕ್ಷ ಕೋಟಿಯಷ್ಟು ಏರಿಕೆಯಾಗಿತ್ತು
- ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ–1 ಸರ್ಕಾರ ಅಧಿಕಾರಕ್ಕೆ ಬಂದಾಗ ₹55.87ರಷ್ಟಿದ್ದ ದೇಶದ ಸಾಲ ಐದು ವರ್ಷಗಳಲ್ಲಿ ₹90.56 ಲಕ್ಷ ಕೋಟಿಗೆ ಏರಿಕೆಯಾಗಿತ್ತು. ಆ ಐದು ವರ್ಷಗಳಲ್ಲಿ ದೇಶದ ಒಟ್ಟು ಸಾಲವು ಪ್ರತಿ ವರ್ಷ ಸರಾಸರಿ ₹6.9 ಲಕ್ಷದಷ್ಟು ಏರಿಕೆಯಾಗಿತ್ತು
- ಮೋದಿ ನೇತೃತ್ವದ ಎನ್‌ಡಿಎ–2 ಸರ್ಕಾರದ ಅವಧಿಯಲ್ಲೂ ದೇಶದ ಒಟ್ಟು ಸಾಲವು ₹90 ಲಕ್ಷ ಕೋಟಿಯಿಂದ ₹168 ಲಕ್ಷ ಕೋಟಿಗೆ ಏರಿಕೆಯಾಗಿದೆ. ಈ ಅವಧಿಯಲ್ಲಿ ದೇಶದ ಸಾಲವು ಪ್ರತಿ ವರ್ಷ ಸರಾಸರಿ ₹15.5 ಲಕ್ಷ ಕೋಟಿಯಷ್ಟು ಏರಿಕೆಯಾಗಿದೆ.
- ಎನ್‌ಡಿಎ ಸರ್ಕಾರದ ಎರಡು ಅವಧಿಯಲ್ಲಿ ದೇಶದ ಒಟ್ಟು ಸಾಲವು ಎರಡು ಪಟ್ಟು ಏರಿಕೆಯಾಗಿದೆ. 2024–25ನೇ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಸಾಲವು ₹183.67 ಲಕ್ಷ ಕೋಟಿಯನ್ನು ಮೀರಲಿದೆ

ಸಾಲ–ಜಿಡಿಪಿ ಅನುಪಾತ ವಿಪರೀತ ಏರಿಕೆ



82.9% ಅಟಲ್ ಬಿಹಾರಿ ವಾಜಪೇಯಿ ಅವರ ಅಧಿಕಾರದ ಅವಧಿಯ 2001–02ನೇ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಸಾಲ ಮತ್ತು ಜಿಡಿಪಿ ಅನುಪಾತ

66.4% ಮನಮೋಹನ್ ಸಿಂಗ್ ಅವರ ಅಧಿಕಾರದ ಅವಧಿಯ 2009–10ನೇ ಆರ್ಥಿಕ ವರ್ಷದಲ್ಲಿ ದೇಶದ ಒಟ್ಟು ಸಾಲ ಮತ್ತು ಜಿಡಿಪಿ ಅನುಪಾತ

ಸಾಲ ಮತ್ತು ಜಿಡಿಪಿಯ ಅನುಪಾತವು ದೇಶದ ಆರ್ಥಿಕತೆಯ ಸ್ಥಿತಿಯನ್ನು ತೋರಿಸುತ್ತದೆ. ಈ ಅನುಪಾತವನ್ನು ಶೇಕಡಾವಾರು ಪ್ರಮಾಣದಲ್ಲಿ ಲೆಕ್ಕಹಾಕಲಾಗುತ್ತದೆ. ಈ ಪ್ರಮಾಣವು ಕಡಿಮೆ ಇದ್ದಷ್ಟೂ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗಿದೆ ಎಂದರ್ಥ. ಅದು ಏರುತ್ತಾ ಹೋದರೆ, ಆರ್ಥಿಕತೆ ಬಿಗಡಾಯಿಸುತ್ತದೆ ಎಂದು ಅರ್ಥೈಸಲಾಗುತ್ತಿದೆ.

ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ಪ್ರಕಾರ ಈ ಅನುಪಾತವು ಶೇ 64ರಷ್ಟು ಇದ್ದರೆ ಅದು ಆರ್ಥಿಕತೆ ಉತ್ತಮವಾಗಿದೆ ಎಂಬುದನ್ನು ಸೂಚಿಸುತ್ತದೆ. ಈ ಪ್ರಮಾಣವು ಶೇ 64ಕ್ಕಿಂತಲೂ ಹೆಚ್ಚಾದರೆ, ದೇಶದ ಸಾಲ ತೀರಿಸುವ ಸಾಮರ್ಥ್ಯವು ಅಪಾಯಕಾರಿ ಮಟ್ಟಕ್ಕೆ ಕುಸಿಯುತ್ತಾ ಹೋಗುತ್ತದೆ. ಅದು ಹೆಚ್ಚುತ್ತಲೇ ಹೋದರೆ ಹತ್ತಾರು ದಶಕಗಳವರೆಗೂ ದೇಶಕ್ಕೆ ಸಾಲ ತೀರಿಸಲು ಸಾಧ್ಯವಾಗುವುದಿಲ್ಲ ಎನ್ನುತ್ತದೆ ಐಎಂಎಫ್.

ಹಿಂದಿನ 22 ಆರ್ಥಿಕ ವರ್ಷಗಳನ್ನು ಗಮನಿಸಿದರೆ ದೇಶದ ಒಟ್ಟು ಸಾಲ ಮತ್ತು ಜಿಡಿಪಿ ಅನುಪಾತವು ಉತ್ತಮ ಮಟ್ಟದಲ್ಲಿ ಇದ್ದದ್ದು ಮನಮೋಹನ್ ಸಿಂಗ್ ಅವರ ನೇತೃತ್ವದ ಸರ್ಕಾರದ ಅವಧಿಯಲ್ಲಿ ಎಂಬುದನ್ನು ಕೇಂದ್ರ ಸರ್ಕಾರದ ದಾಖಲೆಗಳೇ ಹೇಳುತ್ತವೆ. ಕೇಂದ್ರ ಹಣಕಾಸು ಸಚಿವಾಲಯವು ಬಿಡುಗಡೆ ಮಾಡಿರುವ ವರದಿಗಳು ಮತ್ತು

ರಾಜ್ಯಸಭೆಯಲ್ಲಿ ನೀಡಿರುವ ಲಿಖಿತ ಉತ್ತರಗಳಲ್ಲಿ ಈ ಮಾಹಿತಿ ಇದೆ. ಆ ವರದಿಗಳು ಮತ್ತು ಲಿಖಿತ ಉತ್ತರಗಳ ಪ್ರಕಾರ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಸರ್ಕಾರದ ಅವಧಿಯ 2001–2002ರಲ್ಲಿ ಸಾಲ ಮತ್ತು ಜಿಡಿಪಿ ಅನುಪಾತವು ಶೇ 82.9ರಷ್ಟು ಇತ್ತು. ಅಂದರೆ ದೇಶದ ಆರ್ಥಿಕ ಸ್ಥಿತಿ ಅಂದೂ ಉತ್ತಮವಾಗಿ ಇರಲಿಲ್ಲ ಎಂಬುದನ್ನು ಈ ದತ್ತಾಂಶ ಹೇಳುತ್ತದೆ.

2014–15ನೇ ಸಾಲಿನಲ್ಲಿ ಬಿಜೆಪಿಯು ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಚುನಾವಣೆ ಗೆದ್ದು, ಎನ್‌ಡಿಎ ಮೈತ್ರಿಕೂಟದ ಸರ್ಕಾರವನ್ನು ರಚಿಸಿತು. ಆಗಲೂ ದೇಶದ ಸಾಲ–ಜಿಡಿಪಿ ಅನುಪಾತವು ಉತ್ತಮ ಮಟ್ಟದಲ್ಲಿಯೇ ಇತ್ತು. ಆದರೆ ಆನಂತರದ ವರ್ಷಗಳಲ್ಲಿ ಸಾಲದ ಪ್ರಮಾಣವೂ ಏರಿಕೆಯಾಯಿತು ಮತ್ತು ಅದರೊಂದಿಗೆ ಸಾಲ–ಜಿಡಿಪಿ ಅನುಪಾತದ ಪ್ರಮಾಣವೂ ಏರಿಕೆಯಾಯಿತು. ದೇಶದಲ್ಲಿ ಕೋವಿಡ್ ಬರುವ ಒಂದು ವರ್ಷ ಮೊದಲೇ ಈ ಅನುಪಾತವು ಶೇ 75ರ ಗಡಿಯನ್ನು ದಾಟಿತ್ತು. ಕುಂಠಿತ ಆರ್ಥಿಕ ಪ್ರಗತಿಯನ್ನು ಅದು ಸೂಚಿಸುತ್ತದೆ. ಕೋವಿಡ್ ಬಂದ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿತು. ಕೋವಿಡ್‌ನ ಕಾರಣಕ್ಕೆ ಈ ಅನುಪಾತವು ಏರಿಕೆಯಾದದ್ದು, 22 ವರ್ಷಗಳಲ್ಲೇ ಗರಿಷ್ಠ ಮಟ್ಟವನ್ನು ಮುಟ್ಟಿತ್ತು. ಆನಂತರ ಅದು ತುಸು ಇಳಿಕೆಯಾಗಿದೆಯಾದರೂ, ಶೇ 80ಕ್ಕಿಂತ ಕೆಳಗೆ ಬಂದಿಲ್ಲ. ಈ ಎಲ್ಲಾ ಅಂಶಗಳು ಎನ್‌ಡಿಎ ಸರ್ಕಾರದ ಈಚಿನ ಒಂಬತ್ತು ವರ್ಷಗಳಲ್ಲಿ ದೇಶದ ಸಾಲದ ಇಕ್ಕಟ್ಟು ಬಿಗಿಗೊಳ್ಳುತ್ತಿರುವುದನ್ನು ಸೂಚಿಸುತ್ತವೆ.

ಆಧಾರ: ಕೇಂದ್ರ ಹಣಕಾಸು ಸಚಿವಾಲಯದ ವರದಿಗಳು, ಪ್ರಕಟಣೆಗಳು ಮತ್ತು ಸಂಸತ್ತಿಗೆ ನೀಡಿದ ಲಿಖಿತ ಉತ್ತರಗಳು, ಆರ್‌ಬಿಐನ ಮಾಸಿಕ ಬುಲೆಟಿನ್‌ಗಳು, ಪಿಟಿಐ, ಅಂತರರಾಷ್ಟ್ರೀಯ ಹಣಕಾಸು ನಿಧಿಯ ವರದಿ

‘ಕೆರೆಬೇಟೆ’ಯಲ್ಲಿ ಖಳ‘ನಾಯಕ’!

ಈ ಹಿಂದೆ ‘ರಾಜಹಂಸ’ ಚಿತ್ರದಲ್ಲಿ ನಟಿಸಿದ್ದ ಗೌರಿಶಂಕರ್ ಹಾಗೂ ಬಿಂದು ಶಿವರಾಂ ಜೋಡಿಯಾಗಿ ನಟಿಸಿರುವ ‘ಕೆರೆಬೇಟೆ’ ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಮಕ್ಕಳು ದೀಪಕ್ಕೆ ಎಣ್ಣೆ ಹಾಕುವ ಮೂಲಕ ಟ್ರೇಲರ್ ಬಿಡುಗಡೆಗೊಂಡಿದ್ದು ವಿಶಿಷ್ಟವಾಗಿತ್ತು.

ಅಂಟಿಗೆಪಿಂಟಿಗೆ ಆಚರಣೆ ಜೊತೆಗೆ ಮಲೆನಾಡಿನ ಹಲವು ವಿಶಿಷ್ಟ ಸಂಸ್ಕೃತಿಗಳು ಚಿತ್ರದಲ್ಲಿದೆ ಎಂಬುದು ಟ್ರೇಲರ್‌ನಿಂದ ಮೇಲ್ನೋಟಕ್ಕೆ ತಿಳಿಯುತ್ತಿದೆ. ಚಿತ್ರದಲ್ಲಿ ನಾಯಕ ಗೌರಿಶಂಕರ್ ರೈತನ ಮಗನಾಗಿದ್ದು, ಕೊನೆಗೆ ಆತನೇ ಖಳನಾಯಕನಾಗಿ ಬದಲಾಗುವ ವಿಚಿತ್ರ ಕಥೆಯ ಸುಳಿವನ್ನು ಟ್ರೇಲರ್ ನೀಡುತ್ತಿದೆ.

ಟೀಸರ್, ಹಾಡುಗಳಿಂದ ಗಮನ ಸೆಳೆದಿರುವ ಈ ಚಿತ್ರಕ್ಕೆ ರಾಜ್‌ಗುರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಜನಮನ ಸಂಸ್ಥೆ ನಿರ್ಮಿಸಿದ್ದು, ದಿನಕರ್ ತೂಗುದೀಪ್ ಚಿತ್ರವನ್ನು ಅರ್ಪಿಸುತ್ತಿದ್ದಾರೆ. ಗಗನ್ ಬದೇರಿಯ ಸಂಗೀತವಿದ್ದು, ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣವಿದೆ. ಗೋಪಾಲ್ ದೇಶಪಾಂಡೆ, ಸಂಪತ್ ಕುಮಾರ್, ಹರಿಣಿ ಮೊದಲಾದವರು ತಾರಾಗಣದಲ್ಲಿದ್ದಾರೆ.

ಸಿಗಂದೂರು, ಕೋಗಾರಿನ ಕಾಡು ಸೇರಿದಂತೆ ಮಲೆನಾಡಿನ ಸುಂದರ ತಾಣಗಳಲ್ಲಿ ಚಿತ್ರೀಕರಣಗೊಂಡಿರುವ ಚಿತ್ರ ಮಾ.15 ರಂದು ತೆರೆಗೆ ಬರುತ್ತಿದೆ.

ಸೈನಿಕನ ಕಥೆ ಹೇಳುವ ಚಿತ್ರ

ದೇಶದ ಗಡಿ ಕಾಯುವ ಸೈನಿಕನ ಕಥೆ ಹೊಂದಿರುವ ‘ನಮೋ ಭಾರತ್’ ಚಿತ್ರದ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. ಈ ಚಿತ್ರವನ್ನು ಶ್ರೀ ಚೌಡೇಶ್ವರಿ ಫಿಲ್ಮ್ಸ್ ಮೂಲಕ ರಮೇಶ್ ಎಸ್.ಪರವಿನಾಯ್ಕರ್ ನಿರ್ಮಿಸಿ, ನಿರ್ದೇಶಿಸಿದ್ದಾರೆ. ಜೊತೆಗೆ ನಾಯಕನಾಗಿಯೂ ಕಾಣಿಸಿಕೊಂಡಿದ್ದಾರೆ.

ಚಿತ್ರತಂಡಕ್ಕೆ ಶುಭ ಹಾರೈಸಿ ಮಾತನಾಡಿದ ಸಾಹಿತಿ ದೊಡ್ಡರಂಗೇಗೌಡ, ‘ಇದೊಂದು ಅಪ್ಪಟ ದೇಶಪ್ರೇಮದ ಕಥೆ. ನಾನೂ ಕೂಡ ಪ್ರಮುಖ ಪಾತ್ರದಲ್ಲಿ ನಟಿಸಿದ್ದೇನೆ. ರೈತರ ಸಮಸ್ಯೆಯ ಬಗ್ಗೆಯೂ ಹೇಳಲಾಗಿದೆ’ ಎಂದರು.

‘ನಾನು ಕೆಳದಿ ಚೆನ್ನಮ್ಮನ ವಂಶಸ್ಥ. ಈ ಹಿಂದೆ ‘ಗಾಂಧಿ ಕನಸು’ ಎಂಬ ಚಿತ್ರ ಮಾಡಿದ್ದೆ. ‘ನಮೋ ಭಾರತ್’ ಕಾಶ್ಮೀರದಲ್ಲಿ ಚಿತ್ರೀಕರಣಗೊಂಡಿದೆ. ಮಾ.1ಕ್ಕೆ ತೆರೆಗೆ ಬರಲಿದೆ’ ಎಂದರು ನಿರ್ದೇಶಕ.

ಈ ಚಿತ್ರಕ್ಕೆ ಎ.ಟಿ. ರವೀಶ್ ಸಂಗೀತ, ಗೌರಿ ವೆಂಕಟೇಶ್ ಛಾಯಾಚಿತ್ರಗ್ರಹಣವಿದೆ. ಸೋನಾಲಿ ಪಂಡಿತ್, ಸುಷ್ಮಾ ರಾಜ್, ಭವ್ಯ ಮುಂತಾದವರು ಚಿತ್ರದಲ್ಲಿದ್ದಾರೆ. ❖

ರಮೇಶ್ ಎಸ್ ಪರವಿನಾಯ್ಕರ್, ಸುಷ್ಮಾರಾಜ್

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ರಾಹುಲ್ ಗಾಂಧಿ ಅವರು ಭಾರತ ನ್ಯಾಯ ಯಾತ್ರೆಯಲ್ಲಿ ಮಾಡಿದ ಭಾಷಣವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ‘ತಿಂಗಳ ಜೋಕು, ಎಕ್ಸ್‌ರೇ ಅಂದರೆ ಜಾತಿ ಗಣತಿಯಂತೆ’ ಎಂದು ರಾಹುಲ್ ಭಾಷಣದ ವಿಡಿಯೊದೊಂದಿಗೆ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ‘ಎಕ್ಸ್‌ರೇ ಅಂದರೆ ಜಾತಿ ಗಣತಿಯಂತೆ. ರಾಹುಲ್ ಗಾಂಧಿ ಅವರು ದಿನಾಲೂ ನಗುವುದಕ್ಕೆ ಒಂದೊಂದು ಕಾರಣ ಒದಗಿಸುತ್ತಿದ್ದಾರೆ’ ಎಂದೂ ಕೆಲವರು ಪೋಸ್ಟ್ ಹಂಚಿಕೊಂಡಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ ಫೆ. 19ರಂದು ರಾಹುಲ್ ಗಾಂಧಿ ಅವರು ಮಾಡಿದ ಭಾಷಣದ ತುಣುಕನ್ನು ತಿರುಚಿ, ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಅವರ ಭಾಷಣದ ಪೂರ್ಣ ಪಾಠವು ಕಾಂಗ್ರೆಸ್‌ನ ಯುಟ್ಯೂಬ್ ಚಾನೆಲ್‌ನಲ್ಲಿ ಲಭ್ಯವಿದೆ. ‘ನಾವು ಒಂದು ಕ್ರಾಂತಿಕಾರಿ ಹೆಜ್ಜೆಯನ್ನು ಇಟ್ಟು, ಪ್ರತಿಯೊಬ್ಬರ ಗಣತಿ ನಡೆಸಬೇಕಿದೆ. ದೇಶದಲ್ಲಿ ಎಷ್ಟು ಮಂದಿ ಸಾಮಾನ್ಯ ವರ್ಗಕ್ಕೆ ಸೇರಿದ ಬಡವರು ಇದ್ದಾರೆ ಮತ್ತು ಅವರ ಬಳಿ ಎಷ್ಟು ಆಸ್ತಿ ಇದೆ? ದೇಶದಲ್ಲಿ ಎಷ್ಟು ಮಂದಿ ಹಿಂದುಳಿದ ವರ್ಗದ ಜನರ ಇದ್ದಾರೆ? ಅವರು ಯಾವ ಜಾತಿಯವರು? ಅವರ ಬಳಿ ಎಷ್ಟು ಹಣವಿದೆ? ಆದಿವಾಸಿಗಳ ಬಳಿ ಎಷ್ಟು ಆಸ್ತಿ ಇದೆ? ದಲಿತರ ಬಳಿ ಎಷ್ಟು ಹಣವಿದೆ? ಇದನ್ನೇ ಜಾತಿ ಗಣತಿ ಎನ್ನುವುದು. ಇಂದು ನನ್ನ ಭದ್ರತಾ ಸಿಬ್ಬಂದಿಯ ಕಾಲು ಕಾರಿನ ಅಡಿಗೆ ಸಿಲುಕಿತು. ಮೊದಲು ಎಕ್ಸ್‌ರೇ ಮಾಡಿಸು ಎಂದು ನಾವು ಆತನಿಗೆ ತಕ್ಷಣವೇ ಹೇಳಿದೆವು. ಆಗ ಕಾಲಿನಲ್ಲಿ ಏನಾಗಿದೆ ಎಂದು ತಿಳಿಯುತ್ತದೆ. ಹಾಗಾಗಿ, ಜಾತಿ ಗಣತಿ ಅಂದರೆ ಎಕ್ಸ್‌ರೇ ಇದ್ದಂತೆ’ ಎಂದು ಅವರು ತಮ್ಮ ಭಾಷಣದಲ್ಲಿ ಹೇಳಿದ್ದರು ಎಂದು ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನುಡಿ ಬೆಳಗು

ಯಶಸ್ಸು ಹಾಗೂ ಅದರ ಶಿಸ್ತಿನ ನಿರ್ವಹಣೆ

ಎಚ್.ಎಸ್.ನವೀನಕುಮಾರ್, ಹೊಸದುರ್ಗ

ಉತ್ತರ ಪ್ರದೇಶದ ಭಡೋಹಿ ಎಂಬ ಪುಟ್ಟ ಊರಿನ ಈ ಬಾಲಕ ಕ್ರಿಕೆಟ್ ಆಡುವ ಅಪಾರ ಹುಚ್ಚಲ್ಲಿ 10ನೇ ವಯಸ್ಸಿನವನಿದ್ದಾಗಲೇ ಮುಂಬೈಗೆ ಬಂದ. ಹೀಗೆ ಬಂದ ಈ ಬಾಲಕ ಕಲ್ಬಾದೇವಿಯ ಡೈರಿ ಶಾಪ್‌ವೊಂದರಲ್ಲಿ, ಕೆಲಸದ ಜೊತೆಗೆ ಕ್ರಿಕೆಟ್ ಕಲಿಬಹುದು ಎಂಬ ಆಸೆಯಿಂದ ಕೆಲಸಕ್ಕೆ ಸೇರಿಕೊಂಡ. ಆದರೆ ಇವನ ಆಸಕ್ತಿ ಕ್ರಿಕೆಟ್ ಕಡೆಗೇ ಹೆಚ್ಚಿದ್ದುದರಿಂದ ಕೆಲಸದ ಮೇಲೆ ಇವನ ಗಮನ ಕಡಿಮೆಯಾಗಿ ಕೆಲಸ ಕಳೆದುಕೊಂಡ.

ಇವನ ಅತೀವವಾದ ಕ್ರಿಕೆಟ್ ಹುಚ್ಚು ಇವನನ್ನು ಮರಳಿ ಊರಿಗೆ ಹೋಗದಂತೆ ಕಟ್ಟಿ ಹಾಕಿತ್ತು. ಅದೃಷ್ಟವಶಾತ್ ಈ ಹುಡುಗನ ಈ ಪರಿಯ ಕ್ರಿಕೆಟ್ ಹುಚ್ಚು, ಚಿಕ್ಕ ವಯಸ್ಸಿನಲ್ಲೇ ಅವನಿಗಿದ್ದ ಆಟದ ಮೇಲಿನ ಅದಮ್ಯ ಬದ್ಧತೆ, ಆಜಾದ್ ಮೈದಾನದಲ್ಲಿ ಕ್ರಿಕೆಟ್ ಕೋಚ್ ಆಗಿರುವ ಜ್ವಾಲಾ ಸಿಂಗ್‌ರ ಕಣ್ಣಿಗೆ ಬಿತ್ತು. ಇವನಿಗೆ ತರಬೇತಿ ಕೊಡಲು ಅವರು ನಿರ್ಧರಿಸಿದರು. ಆದರೆ ತರಬೇತಿಗೆ ತಗಲುವ ವೆಚ್ಚವನ್ನು ಭರಿಸುವಷ್ಟು ಸ್ಥಿತಿವಂತರಲ್ಲ, ಈ ಬಾಲಕನ ಪೋಷಕರು. ಹೀಗಾಗಿ ಅವರು ಕೋಚ್ ಜ್ವಾಲಾಸಿಂಗ್‌ರನ್ನೇ ಈ ಬಾಲಕನ ಲೀಗಲ್ ಗಾರ್ಡಿಯನ್ ಮಾಡಿಬಿಟ್ಟರು.

ಮುಂಬೈ ತಂಡಕ್ಕೆ ರಣಜಿ ಆಡಿ ಹೊರೆಗಟ್ಟಲೆ ರನ್ ಗಳಿಸಿದ ಈತ, ಐಪಿಎಲ್‌ನಲ್ಲೂ ಅತ್ಯಂತ ಯಶಸ್ವಿಯಾದ. ಈತ ಟೆಸ್ಟ್ ಇನ್ನಿಂಗ್ಸ್‌ವೊಂದರಲ್ಲಿ 12 ಸಿಕ್ಸರ್ ಸಿಡಿಸಿ, ವಸೀಂ ಅಕ್ರಂರವರ ವಿಶ್ವ ದಾಖಲೆ ಸರಿಗಟ್ಟಿದ. ಭಾರತ ತಂಡದ ಓಪನರ್ ಆಗಿ ಇಂಗ್ಲೆಂಡ್ ವಿರುದ್ಧ ಸತತ ಎರಡು ಟೆಸ್ಟ್ ಗಳಲ್ಲಿ ದ್ವಿಶತಕದ ಸಾಧನೆ ಮಾಡಿ, ಈ ದಾಖಲೆ ಮಾಡಿರುವ ಬ್ರಾಡ್ಮನ್, ವಿನೋದ್ ಕಾಂಬ್ಳಿ ಅವರಂಥ ಸರ್ವಶ್ರೇಷ್ಠ ಆಟಗಾರರ ಪಟ್ಟಿ ಸೇರಿದ. ಭಾರತೀಯ ಕ್ರಿಕೆಟ್‌ನ ಹೊಸ ಸೆನ್ಸೇಶನ್ ಬರೀ 22 ವಯಸ್ಸಿನ ಯಶಸ್ವಿ ಜೈಸ್ವಾಲ್‌ನ ಯಶಸ್ಸಿನ ಕಥೆ ಇದು.

ಪರಿಸ್ಥಿತಿ ಹೇಗೇ ಇರಲಿ ಮಾಡಲೇಬೇಕೆಂಬ ಛಲ ನಮ್ಮಲ್ಲಿದ್ದರೆ, ಸಾಧನೆಯ ಕನಸು ಕಣ್ಣಲ್ಲಿದ್ದರೆ, ಅದನ್ನು ಖಂಡಿತ ಸಾಕಾರ ಮಾಡಿಕೊಳ್ಳಬಹುದು ಎನ್ನುವುದಕ್ಕೆ ಇದೊಂದು ವಿಶಿಷ್ಟ ಉದಾಹರಣೆ. ಅಂದಹಾಗೆ ಯಶಸ್ಸಿನ ಶಿಖರ ಏರಿರುವ ಯಶಸ್ವಿ ಜೈಸ್ವಾಲ್, ಈ ಯಶಸ್ಸಿನ ನಿರ್ವಹಣೆ ಹೇಗೆ ಮಾಡುತ್ತಾನೆ ಎಂಬುದನ್ನು ಸಹ ಕಾದು ನೋಡಬೇಕು. ಇದೇ ರೀತಿ ಅದ್ಭುತ ಪ್ರತಿಭೆ ಹೊಂದಿದ್ದು ಇವನಂತೆಯೇ ಎಡಗೈ ಬ್ಯಾಟರ್ ಆಗಿ ಸತತ ಎರಡು ಟೆಸ್ಟ್ ದ್ವಿಶತಕ ಗಳಿಸಿದ್ದ ವಿನೋದ್ ಕಾಂಬ್ಳಿ ಹಾಗೂ ‘ಕ್ರಿಕೆಟ್ ದೇವರು’ ಸಚಿನ್ ತೆಂಡೂಲ್ಕರ್ ಬಾಲ್ಯದಿಂದಲೂ ಆಪ್ತಮಿತ್ರರು. ಇಬ್ಬರೂ ಜೊತೆಯಾಗಿ ಹೈಸ್ಕೂಲ್‌ನಲ್ಲಿದ್ದಾಗಲೇ ವಿಶ್ವ ದಾಖಲೆ ಸ್ಥಾಪಿಸಿದ್ದರು. ಜೊತೆ ಜೊತೆಯಾಗಿ ಅಂತರರಾಷ್ಟ್ರೀಯ ಕ್ರಿಕೆಟಿಗೂ ಪದಾರ್ಪಣೆ ಮಾಡಿದ್ದರು. ಹಾಗೆ ನೋಡಿದರೆ ಕಾಂಬ್ಳಿ, ಸಚಿನ್‌ಗಿಂತಲೂ ಹೆಚ್ಚು ಪ್ರತಿಭಾನ್ವಿತ. ಆದರೆ ಆತನಲ್ಲಿ ಶಿಸ್ತಿನ ಕೊರತೆ ಇತ್ತು.

ಈ ಎರಡು ವಿಚಾರಗಳನ್ನು ಜೋಡಿಸಿ ನೋಡಿದಾಗ ಒಂದು ಬಹುಮುಖ್ಯ ಅಂಶವನ್ನು ನಾವು ಅರ್ಥ ಮಾಡಿಕೊಳ್ಳಬಹುದು. ನಿಮ್ಮಲ್ಲಿ ಸಾಧಿಸಬೇಕೆಂಬ ಛಲವಿದ್ದರೆ ಎಂತಹ ಪ್ರತಿಕೂಲ ಪರಿಸ್ಥಿತಿಯನ್ನೂ ನೀವು ಮೀರಿ ನಿಂತು ಯಶಸ್ಸು ಗಳಿಸಬಹುದು ಹಾಗೂ ಗಳಿಸಿದ ಯಶಸ್ಸನ್ನು ಅತ್ಯಂತ ಶಿಸ್ತಿನಿಂದ ನಿರ್ವಹಣೆ ಮಾಡಿದಾಗ ಮಾತ್ರ, ನೀವು ಸರ್ವಶ್ರೇಷ್ಠರಾಗಲು ಸಾಧ್ಯ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ಫೆಬ್ರುವರಿ 26, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ದ್ವಿತೀಯ ಗಂ. 23-17 **ನಕ್ಷತ್ರ:** ಉತ್ತರಫಲ್ಗುನಿ ಗಂ. 28-31 **ಯೋಗ:** ಧೃತಿ ಗಂ. 15-27 **ಕರಣ:** ತೈತಿಲ ಗಂ. 09-56, ಕುಂಭ ಮಾಸದ 13 ನೇ ದಿನ, ಮಳೆನಕ್ಷತ್ರ: ಶತಭಿಷ 3.
ರಾಹುಕಾಲ: ಬೆಳಿಗ್ಗೆ 07-30 – 09-00, **ಸೂರ್ಯೋದಯ:** 06-52 **ಸೂರ್ಯಾಸ್ತ:** 06-35
ಮುಸ್ಲಿಂ ದಿನಾಂಕ : 15 ಶಬನ್
ದಿನ ವಿಶೇಷ: ಶಬ್-ಎ- ಬರಾತ್
ಅದೃಷ್ಟ ಸಂಖ್ಯೆ: 3, 9

ಮೇಷ: ಯಾರನ್ನು ಹಿತೈಷಿಗಳು ಎಂದು ತಿಳಿದಿರುವಿರೋ ಅವರೇ ಬೆನ್ನ ಹಿಂದೆ ಚೂರಿ ಹಾಕುವ ಕೆಲಸ ಮಾಡುತ್ತಾರೆ. ವಿದೇಶಕ್ಕೆ ತೆರಳಲು ತಯಾರಿ ನಡೆಸುತ್ತಿರುವವರು ಆಘಾತಕಾರಿ ಸುದ್ದಿ ಕೇಳಬಹುದು.

ವೃಷಭ: ಮದುವೆ ತಯಾರಿ ನಡೆಸುತ್ತಿರುವವರು ಶೀಘ್ರವಾಗಿ ಕೆಲಸಗಳನ್ನು ಮುಗಿಸುವಿರಿ. ಮನೆಯಲ್ಲಿನ ವೃದ್ಧರ ಆರೋಗ್ಯದಲ್ಲಿ ಏರುಪೇರಾಗುವ ಸಂದರ್ಭವಿರುವುದರಿಂದ ಜಾಗ್ರತರಾಗಿರಿ.

ಮಿಥುನ: ವಿದ್ಯಾಭ್ಯಾಸವನ್ನು ಮುಂದುವರಿಸಬೇಕೆಂದು ಬಯಸುತ್ತಿರುವ ಗೃಹಿಣಿಯರಿಗೆ ಸರಿಯಾದ ಮಾರ್ಗವೊಂದು ಪ್ರಾಪ್ತಿಯಾಗಲಿದೆ. ಮಧ್ಯಮವರ್ಗದವರಿಗೆ ವಿವಿಧ ಕೆಲಸಗಳಿಗೆ ಹಣ ಹೊಂದಿಸುವ ಚಿಂತೆಯಾಗಲಿದೆ.

ಕರ್ಕಾಟಕ: ಚರ್ಮದ ಆಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವವರಿಗೆ ಲಾಭದ ದಿನ. ಸಂತೋಷವನ್ನು ನಿಮ್ಮ ಜೀವನದಲ್ಲಿ ಪಡೆಯಲು ಯೋಗ ಹಾಗೂ ಪ್ರಾಣಾಯಾಮ ಅಳವಡಿಸಿಕೊಳ್ಳಿ.

ಸಿಂಹ: ಉತ್ಸವಾದಿ ಬೃಹತ್ ಕಾರ್ಯಕ್ರಮದ ಉಸ್ತುವಾರಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನಿಮ್ಮ ಮೇಲೆ ಇರುವುದು ಆಯಾಸಕ್ಕೆ ಕಾರಣವಾಗಿದೆ. ಮಕ್ಕಳ ಬಗ್ಗೆ ಅತಿಯಾಗಿ ಚಿಂತೆ ಮಾಡುವುದನ್ನು ಕಡಿಮೆ ಮಾಡಿ.

ಕನ್ಯಾ: ಮರಳಿ ಯತ್ನವ ಮಾಡು ಮನುಜ ಎಂದು ಹಿರಿಯರು ಹೇಳುವಂತೆ ವ್ಯವಹಾರದಲ್ಲಿ ಒಮ್ಮೆ ಸೋಲನ್ನು ಅನುಭವಿಸಿದ ಮಾತ್ರಕ್ಕೆ ಹಿಂದೆ ಸರಿಯಬೇಡಿ. ಹೂವುಗುಚ್ಛ ವ್ಯಾಪಾರಿಗಳಿಗೆ ಉತ್ತಮ ದಿನ.

ತುಲಾ: ಕೇಶ ವಿನ್ಯಾಸಕಾರರು ಮತ್ತು ಬ್ಯೂಟಿ ಪಾರ್ಲರ್‌ನವರಿಗೆ ವೈಯಕ್ತಿಕ ಜೀವನದ ಬಗ್ಗೆ ಗಮನಹರಿಸಲು ಸಮಯಾವಕಾಶ ದೊರೆಯುತ್ತದೆ. ಗೃಹಿಣಿಯರಿಗೆ ಕೆಲವು ಕೆಲಸಗಳಲ್ಲಿ ಏರುಪೇರು ಉಂಟಾಗಬಹುದು.

ವೃಶ್ಚಿಕ: ಸರಕುಗಳನ್ನು ರಫ್ತು ಹಾಗು ಆಮದನ್ನು ಮಾಡಿಕೊಳ್ಳುವವರು ಕೆಲಸಗಾರರ ಮೇಲೆ ಕಣ್ಣಿಡಿ. ಸಿಹಿ ತಿಂಡಿಗಳ ತಯಾರಕರು ಹಾಗೂ ಮಾರಾಟಗಾರರು ಲಾಭವನ್ನು ಎದುರುನೋಡಬಹುದು.

ಧನು: ವಿವಾಹ ಯೋಗ್ಯ ವಯಸ್ಕರು ಜೀವನ ಸಂಗಾತಿಯ ಮೇಲೆ ಇರುವ ನಿರೀಕ್ಷೆಗಳನ್ನು ಸ್ವಲ್ಪ ಕಡಿಮೆಗೊಳಿಸಿಕೊಳ್ಳುವುದು ಒಳ್ಳೆಯದು. ಸಣ್ಣ ಗುಡಿಕೈಗಾರಿಕೆ ಅವರಿಗೆ ಉತ್ತಮ ವೇದಿಕೆ ಸಿಗಲಿದೆ.

ಮಕರ: ಕಾಲೇಜು ವಿದ್ಯಾರ್ಥಿಗಳು ರಜಾದಿನದಲ್ಲಿ ಮಾಡಿದ ಮೋಜುಮಸ್ತಿಯ ಅಡ್ಡಪರಿಣಾಮ ಇಂದು ಗೊತ್ತಾಗಲಿದೆ. ಮೊದಲ ಮಗಳ ಉತ್ತಮ ನಡತೆಯಿಂದ ಗೌರವವನ್ನು ಕೊಡಲಿದ್ದಾರೆ.

ಕುಂಭ: ಕೆಲಸ ಬದಲಾವಣೆಗಾಗಿ ಪ್ರಯತ್ನಪಡುತ್ತಿದ್ದರೆ ಸೋದರಮಾವನ ಸಹಾಯ ಪಡೆದುಕೊಂಡಲ್ಲಿ ಶೀಘ್ರವಾಗಿ ನಡೆಯುವುದು. ಕುಟುಂಬದಲ್ಲಿ ಎಲ್ಲರ ಸಹಕಾರ ದೊರೆಯುವ ಅದೃಷ್ಟವಂತರಾಗಿರುತ್ತೀರಿ.

ಮೀನ: ಆಹಾರದ ವ್ಯತ್ಯಾಸದಿಂದಾಗಿ ಆರೋಗ್ಯದ ತೊಂದರೆಗಳನ್ನು ಎದುರಿಸುವಿರಿ. ಹೊಸದಾಗಿ ಕಾರ್ಯವನ್ನು ಶುರುಮಾಡುವ ಮೊದಲು ಹಿರಿಯರಿಂದ ಉತ್ತಮ ದಿನ ತಿಳಿದುಕೊಂಡು ಆಶೀರ್ವಾದ ಪಡೆಯಿರಿ.

ಪದಬಂಧ 5603

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಿನ್ನುವವನು ಇಲ್ಲಿದ್ದಾನೆ! (3)
5.ಇದು ಪಕ್ಕಾ ಹೊಣೆಗೇಡಿತನವೇ ಬಿಡಿ! (5)
7.ವರ ಪಡೆದಿರುವ ಬೇಡ (4)
9.ಮಧುರ ಫಲ ನೀಡುವ ವೃಕ್ಷ (2)
10.ಸುಲಭವಲ್ಲದುದು ಇದು (3)
12.ತವರು ಮನೆಯಲ್ಲಿರುವ ಮರ ಉಲ್ಟಾ ಆಗಿದೆ (2)
14.ನಮ್ಮ ಸುತ್ತಮುತ್ತಲಿನ ಪ್ರದೇಶ (4)
16.ಸಂಸಾರದ ಸೆರೆಯಿದು (5)
18.ತಪ್ಪಿಗಾಗಿ ತೆರಬೇಕಾದ ಹಣ (3)

ಮೇಲಿಂದ ಕೆಳಕ್ಕೆ
1.ನಡುವೆ ಧ್ವನಿ ಕೊಟ್ಟರೆ ಇದು ಅಶ್ವಾಸನೆ! (4)
2.ನೂಲುವ ರಾಟೆ ಉಲ್ಟಾ ಆಗಿದೆ (3)
3.ಶಿಕಾರಿಯಿಲ್ಲಿ ತಿರುವುಮುರುವಾಗಿದೆ (2)
4.ಚಿಮುಕಿಸುವುದನ್ನ ಹೀಗೆನ್ನಿ (4)
6.ವಾರದೊಳಗೆ ಕಾಣಿಸಿದ ಮಂಗ! (3)
8.ರಕ್ತದಲ್ಲಿ ಸೇರಿದುದು (4)
9.ದ್ವೇಷಕ್ಕೊಂದು ಪರ್ಯಾಯ ಪದ (4)
11.ನಡುವೆ ಲೋಭ ತೋರಿಸಿ ಆಸೆ ಹುಟ್ಟಿಸುವುದು (4)
12.ಹಡಗು ನಿಲ್ಲುವ ಸ್ಥಳ ಉಲ್ಟಾ ಕಾಣುತ್ತಿದೆ (3)
13.ರಾಜನ ಗೃಹ ಇಲ್ಲಿದೆ (4)
15.ರೀತಿಯೊಡಗೂಡುವ ಜೋಡು ನುಡಿ (3)
17.ಮೈಮೇಲೆ ಹೊದಿಕೆ ಬಟ್ಟೆಗಳಿಲ್ಲದಿರುವವನು (2)



5602ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
4.ನವಸಾಗರ 5.ಸರಿಗೆ
7.ಮಟ್ಟಸ 9.ರಪಣ
10.ಮಾವುತ 11.ತರಂಗ
12.ಮಧುರ 14.ಪ್ರಾಕಾರ
15.ರಜತೋತ್ಸವ

ಮೇಲಿಂದ ಕೆಳಕ್ಕೆ:
1.ನವಸುಮ 2.ಕ್ಷೌರ
3.ಪರಿಮಾಣ 6.ತರತಮ
8.ಸಮಾಗಮ 11.ತರಕಾರಿ
13.ರಥೋತ್ಸವ 15.ರಕ್ತ

ಸುಡೊಕು 5988

		1		8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5987 ಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ನಿಯಮ ಪಾಲಿಸದ ತೈಲ ಕಂಪನಿಗಳಿಗೆ ಮತ್ತೆ ದಂಡ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಸಂಸ್ಥೆಗಳು ಮೂರನೇ ತ್ರೈಮಾಸಿಕದಲ್ಲೂ ತಮ್ಮ ಮಂಡಳಿಯಲ್ಲಿ ಅಗತ್ಯ ಸಂಖ್ಯೆಯ ನಿರ್ದೇಶಕರನ್ನು ನೇಮಕ ಮಾಡಲು ವಿಫಲವಾದ ಕಾರಣ ಷೇರು ಮಾರುಕಟ್ಟೆಯು (ಸ್ಟಾಕ್ ಎಕ್ಸ್‌ಚೇಂಜ್) ತೈಲ ಕಂಪನಿಗಳಿಗೆ ದಂಡ ವಿಧಿಸಿದೆ.

ಭಾರತೀಯ ತೈಲ ನಿಗಮ (ಐಒಸಿ), ತೈಲ ಮತ್ತು ನೈಸರ್ಗಿಕ ಅನಿಲ ನಿಗಮ (ಒಎನ್‌ಜಿಸಿ), ಆಯಿಲ್ ಇಂಡಿಯಾ ಲಿಮಿಟೆಡ್ (ಒಐಎಲ್), ಯುಟಿಲಿಟಿ ಗೇಲ್, ಹಿಂದುಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಮತ್ತು ಮಂಗಳೂರು ರಿಫೈನರಿ ಮತ್ತು ಪೆಟ್ರೊ ಕೆಮಿಕಲ್ಸ್ ಲಿಮಿಟೆಡ್‌ಗೆ (ಎಂಆರ್‌ಪಿಎಲ್) ₹32.5 ಲಕ್ಷ ದಂಡ ವಿಧಿಸಿದೆ.

ಷೇರು ಮಾರುಕಟ್ಟೆಯ ನಿಯಮದ ಪ್ರಕಾರ ಕಂಪನಿಗಳ ಮಂಡಳಿಯಲ್ಲಿ ಅಗತ್ಯ ಸಂಖ್ಯೆಯ ಸ್ವತಂತ್ರ ನಿರ್ದೇಶಕರು ಮತ್ತು ಮಹಿಳಾ ನಿರ್ದೇಶಕರು ಇರಬೇಕು. ಈ ನಿಯಮ ಪಾಲನೆ ಮಾಡದ ಕಾರಣ ಹಿಂದಿನ ಎರಡನೇ ತ್ರೈಮಾಸಿಕದಲ್ಲೂ ಕಂಪನಿಗಳಿಗೆ ಷೇರುಪೇಟೆ ದಂಡ ವಿಧಿಸಿತ್ತು.

ತೈಲ ನಿಗಮವು ಸರ್ಕಾರದ ಸಂಸ್ಥೆಯಾಗಿದ್ದು, ನಿರ್ದೇಶಕರನ್ನು ನೇಮಕ ಮಾಡುವ ಅಧಿಕಾರ ಕೇಂದ್ರದ ಪೆಟ್ರೋಲಿಯಂ ಮತ್ತು ನೈಸರ್ಗಿಕ ಸಚಿವಾಲಯಕ್ಕೆ ಇರುತ್ತದೆ. ಅದಕ್ಕಾಗಿ ದಂಡವನ್ನು ಪಾವತಿಸಲು ಹೊಣೆಗಾರರನ್ನಾಗಿ ಮಾಡಬಾರದು ಮತ್ತು ಅದನ್ನು ಮನ್ನಾ ಮಾಡುವಂತೆ ತೈಲ ಸಂಸ್ಥೆಗಳು ಷೇರುಪೇಟೆಗೆ ಮನವಿ ಮಾಡಿದೆ.

ಪಾಕ್: ಅಧ್ಯಕ್ಷೀಯ ಚುನಾವಣೆ ಮಾರ್ಚ್ 9ಕ್ಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಅಧ್ಯಕ್ಷ ಸ್ಥಾನಕ್ಕೆ ಮಾರ್ಚ್ 9ರಂದು ಚುನಾವಣೆ ನಡೆಸಲು ಚುನಾವಣಾ ಆಯೋಗ ಸಿದ್ಧತೆಗಳನ್ನು ನಡೆಸಿದೆ.

ಅರ್ಧಕ್ಕೂ ಹೆಚ್ಚು ಸೆನೆಟರ್‌ಗಳು ಆರು ವರ್ಷಗಳ ಅಧಿಕಾರವಧಿ ಪೂರ್ಣಗೊಳಿಸಿ ನಿವೃತ್ತರಾಗುವ ಎರಡು ದಿನಗಳ ಮುಂಚಿತವಾಗಿ ಅಧ್ಯಕ್ಷೀಯ ಚುನಾವಣೆ ನಡೆಸುವ ನಿರ್ಧಾರವನ್ನು ಪಾಕಿಸ್ತಾನ ಚುನಾವಣಾ ಆಯೋಗ ಮಾಡಿದೆ ಎಂದು 'ಡಾನ್' ಪತ್ರಿಕೆ ವರದಿ ಮಾಡಿದೆ. ಪಾಕಿಸ್ತಾನ ಮುಸ್ಲಿಂ ಲೀಗ್-ನವಾಜ್ (ಪಿಎಂಎಲ್-ಎನ್) ನೇತೃತ್ವದಲ್ಲಿ ಸರ್ಕಾರ ರಚಿಸಲಿರುವ ಆರು ಪಕ್ಷಗಳ ಮೈತ್ರಿಕೂಟವು ಆಸಿಫ್ ಅಲಿ ಜರ್ದಾರಿ ಅವರನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹560
12 ಕ್ಕೆ	₹76
ಮೈಸೂರು	
100ಕ್ಕೆ	₹560

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲ ವರ್ಷದ ಪುಣ್ಯ ಸ್ಮರಣೆ

ದಿ|| ಎಂ.ಪಿ.ಕಾಂತಮ್ಮ
30-03-2023
(ದಿ|| ಹೆಚ್.ಸಿ.ಪುಟ್ಟಸ್ವಾಮಿ ಅಬಕಾರಿ ಗುತ್ತಿಗೆದಾರರು ಅವರ ಧರ್ಮಪತ್ನಿ)
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನಿಮ್ಮ ದಿವ್ಯಾತ್ಮಕ್ಕೆ ಭಗವಂತನು ಚಿರಶಾಂತಿ ಕೊಡಲ್ಲೆಂದು ಸ್ಮರಿಸುವ ದುಃಖ ತಪ್ತ ಕುಟುಂಬ.
ಪುಣ್ಯ ಸ್ಮರಣೆ : 27-2-2024
ಪೂಜಾ ಸ್ಥಳ: Q35, 1ನೇ ಮುಖ್ಯ ರಸ್ತೆ, 1ನೇ ಅಡ್ಡ ರಸ್ತೆ, ದೇವಯ್ಯ ಪಾರ್ಕ್ 9, ಮಾರುತಿ ಬಡಾವಣೆ, ಬೆಂ.21.
ಭೋಜನ 12 ಘಂಟೆ
ಬಂಧು ಮತ್ತು ಮಿತ್ರರು ಭಾಗವಹಿಸಿ
ದುಃಖ ತಪ್ತರು : ಮಕ್ಕಳಾದ
ಹೆಚ್ ಪಿ ನರಸಿಂಹಸ್ವಾಮಿ,
ಹೆಚ್ ಪಿ. ರೇಣುಕ, ಹೆಚ್ ಪಿ ದೇವಿಕ
M- 6363105277

ಹಣ ನಿರ್ವಹಣೆಗೆ ಪಂಚ ಸೂತ್ರಗಳು

ಬಂಡವಾಳ ಮಾರುಕಟ್ಟೆ

ಕಾವ್ಯ ಡಿ.

ಉಳಿತಾಯ ಮತ್ತು ಹೂಡಿಕೆಯನ್ನು ಉತ್ತಮ ರೀತಿಯಲ್ಲಿ ಮಾಡಲು ಹಣಕಾಸು ನಿರ್ವಹಣೆಯ ಕೆಲ ಮೂಲ ತತ್ವಗಳನ್ನು ಅನುಸರಿಸಬೇಕು. ಹೀಗೆ ಮಾಡಿದಾಗ ದೀರ್ಘಾವಧಿಯಲ್ಲಿ ಸಂಪತ್ತು ಸೃಷ್ಟಿ ಸಾಧ್ಯವಾಗುತ್ತದೆ. ಕುಟುಂಬದ ಒಟ್ಟಾರೆ ಆರ್ಥಿಕ ಸ್ಥಿತಿಗತಿ ಉತ್ತಮವಾಗಿರುತ್ತದೆ. ಬನ್ನಿ ವೈಯಕ್ತಿಕ ಹಣಕಾಸು ನಿರ್ವಹಣೆಯ ಐದು ಪ್ರಮುಖ ಸೂತ್ರಗಳ ಬಗ್ಗೆ ತಿಳಿಯೋಣ.

1. ರೂಲ್ ಆಫ್ 70: ಬೆಲೆ ಏರಿಕೆಯಿಂದಾಗಿ ಎಷ್ಟು ವರ್ಷಗಳಿಗೊಮ್ಮೆ ಹಣದ ಮೌಲ್ಯ ಕುಸಿತಗೊಳ್ಳಲಿದೆ ಎನ್ನುವುದನ್ನು 'ರೂಲ್ ಆಫ್ 70' ತಿಳಿಸುತ್ತದೆ. 70ರ ಜತೆ ಪ್ರಸುತ ಬೆಲೆ ಏರಿಕೆ ದರವನ್ನು ಭಾಗಿಸಿದಾಗ ಎಷ್ಟು ವರ್ಷಗಳಿಗೊಮ್ಮೆ ನಿಮ್ಮ ದುಡ್ಡಿನ ಮೌಲ್ಯ ಅರ್ಧಕ್ಕೆ ಇಳಿಯಲಿದೆ ಎನ್ನುವುದು ಗೊತ್ತಾಗುತ್ತದೆ. ಉದಾಹರಣೆಗೆ ಪ್ರಸ್ತುತ ಹಣದುಬ್ಬರ ದರ ಶೇ 7ರಷ್ಟಿದೆ ಎಂದುಕೊಳ್ಳೋಣ. 70ರ ಜೊತೆ 7 ಅನ್ನು ಭಾಗಿಸಿದಾಗ 10 ವರ್ಷಗಳಿಗೊಮ್ಮೆ ನಿಮ್ಮ ದುಡ್ಡು ಅರ್ಧದಷ್ಟು ಮೌಲ್ಯ ಕಳೆದುಕೊಳ್ಳಲಿದೆ ಎಂದು ತಿಳಿಯುತ್ತದೆ. ಅಂದರೆ ಇವತ್ತು ನಿಮ್ಮ ಬಳಿ ಇರುವ ₹5 ಸಾವಿರ 10 ವರ್ಷಗಳ ಬಳಿಕ ₹2,500ರ ಮೌಲ್ಯವನ್ನು ಮಾತ್ರ ಹೊಂದಿರಲಿದೆ. ಹಾಗಾಗಿಯೇ ನಾವು ಹೂಡಿಕೆ ಮಾಡುವಾಗ ಬೆಲೆ ಏರಿಕೆಯನ್ನು ಮೀರಿ ಲಾಭ ತಂದುಕೊಡುವ ಉತ್ಪನ್ನಗಳನ್ನು ಆಯ್ಕೆ ಮಾಡಿಕೊಳ್ಳಬೇಕು.

2. 40% ಇಎಂಐ ನಿಯಮ: ನಿಮ್ಮ ಮಾಸಿಕ ಸಾಲದ ಕಂತು ತಿಂಗಳ ಆದಾಯದ ಶೇ 40ಕ್ಕಿಂತ ಹೆಚ್ಚಿಗೆ ಇರಬಾರದು ಎನ್ನುವುದನ್ನು 40% ಇಎಂಐ ನಿಯಮ ಹೇಳುತ್ತದೆ. ಉದಾಹರಣೆಗೆ ನಿಮ್ಮ ಮಾಸಿಕ ಆದಾಯ ₹1 ಲಕ್ಷ ಇದ್ದರೆ ನಿಮ್ಮ ಎಲ್ಲ ಸಾಲಗಳ (ವೈಯಕ್ತಿಕ ಸಾಲ, ಗೃಹ ಸಾಲ, ವಾಹನ ಸಾಲ, ಇತರೆ) ಒಟ್ಟು ಮಾಸಿಕ ಕಂತು ₹40 ಸಾವಿರ ದಾಟಬಾರದು. ಸಾಲದ ಕಂತು ಆದಾಯದ ಶೇ 40ಕ್ಕಿಂತ ಹೆಚ್ಚಿಗೆ ಇದ್ದರೆ ಭವಿಷ್ಯದ ಹೂಡಿಕೆ ಮೇಲೆ ಅದು ನಕಾರಾತ್ಮಕ ಪರಿಣಾಮ ಬೀರುತ್ತದೆ. ಆದಾಯದಲ್ಲಿ ಹೆಚ್ಚಿನ ಪಾಲು ಸಾಲಕ್ಕೆ ಹೋದರೆ ನಿವೃತ್ತಿಗಾಗಿ ಹೂಡಿಕೆ, ಮಕ್ಕಳ ಶಿಕ್ಷಣಕ್ಕಾಗಿ ಹೂಡಿಕೆ ಕಷ್ಟವಾಗುತ್ತದೆ.

3. 30 ದಿನಗಳ ನಿಯಮ: ಆಸೆಬುರುಕತನದಿಂದ ಅಥವಾ ಕೊಳ್ಳುಬಾಕತನದಿಂದ ಕೆಲವು ಖರೀದಿಗೆ ನಾವು ಮುಂದಾಗುತ್ತೇವೆ. ಅದನ್ನು ನಿಯಂತ್ರಿಸಲು 30 ದಿನಗಳ ನಿಯಮ ನೆರವಿಗೆ ಬರುತ್ತದೆ. ಉದಾಹರಣೆಗೆ ನೀವು ಯಾವುದೋ ವಸ್ತುವನ್ನು ನೋಡುತ್ತೀರಿ. ಅದನ್ನು ಖರೀದಿಸಬೇಕು ಎನಿಸುತ್ತದೆ. ಇಂತಹ ಸಂದರ್ಭಗಳಲ್ಲಿ ಆ ವಸ್ತುವನ್ನು ತಕ್ಷಣ ಕೊಳ್ಳಲು ಹೋಗಬೇಡಿ. 30 ದಿನ ಆ ಖರೀದಿಯನ್ನು ಮುಂದೂಡಿ. ಅದಾದ ಮೇಲೂ ವಸ್ತು ಕೊಳ್ಳುವ ಅಗತ್ಯವಿದೆ ಎನಿಸಿದರೆ ಖರೀದಿಸಿ. ಹೀಗೆ ಮಾಡುವುದರಿಂದ ಧುತ್ತೆಂದು ಅನಗತ್ಯ ವಸ್ತುಗಳ ಬಿಕರಿಯಿಂದ ದೂರ ಉಳಿಯಬಹುದು.

4. 6X ಎಮರ್ಜೆನ್ಸಿ ಫಂಡ್ ರೂಲ್: ದಿಢೀರ್ ಎಂದು ಬರುವ ಹಣಕಾಸಿನ ಕೊರತೆಗಳನ್ನು ನೀಗಿಸಿಕೊಳ್ಳಲು ನಮ್ಮ ಮಾಸಿಕ ಖರ್ಚು- ವೆಚ್ಚದ ಕನಿಷ್ಠ 6 ಪಟ್ಟು ಹಣವನ್ನು ತುರ್ತು ನಿಧಿಯಲ್ಲಿ ಇಟ್ಟುಕೊಳ್ಳಬೇಕು ಎಂದು 6X ಎಮರ್ಜೆನ್ಸಿ ಫಂಡ್ ರೂಲ್ ಹೇಳುತ್ತದೆ. ತುರ್ತು ನಿಧಿ ಆಪತ್ಕಾಲದ ಆಪ್ತಮಿತ್ರ. ಕೆಲಸ ಕಳೆದುಕೊಂಡಾಗ, ಮನೆಯಲ್ಲಿ ಯಾರಿಗೋ ಅನಾರೋಗ್ಯ ಕಾಡಿದಾಗ, ಅನಿರೀಕ್ಷಿತ ಖರ್ಚುಗಳು ಬಂದಾಗ 6X ಎಮರ್ಜೆನ್ಸಿ ಫಂಡ್ ನಮ್ಮ ನೆರವಿಗೆ ನಿಲ್ಲುತ್ತದೆ. ತುರ್ತು ನಿಧಿಯನ್ನು ಲಿಕ್ವಿಡ್ ಫಂಡ್ಸ್, ಸ್ವೀಪ್ ಇನ್ ಎಫ್.ಡಿ ಅಥವಾ ಉಳಿತಾಯ ಖಾತೆಯಲ್ಲಿ ಇಡುವುದು ಸೂಕ್ತ.

5. ರೂಲ್ ಆಫ್ 72: ನಾವು ಹೂಡಿಕೆ ಮಾಡುವ ಹಣ ಎಷ್ಟು ವರ್ಷಕ್ಕೆ ಡಬಲ್ ಆಗುತ್ತೆ? ಹೀಗೊಂದು ಪ್ರಶ್ನೆ ನಿಮಗೂ ಬಂದಿರಬಹುದು. ಈ ಪ್ರಶ್ನೆಗೆ ಉತ್ತರ ಕೂಡುವ ಸೂತ್ರವೇ 'ರೂಲ್ ಆಫ್ 72.' ಹೂಡಿಕೆ ಮೊತ್ತದ ಮೇಲೆ ಪ್ರತಿ ವರ್ಷ ಪಡೆಯುವ ಬಡ್ಡಿ ಲಾಭವನ್ನು 72ರ ಜೊತೆ ಭಾಗಿಸಿದಾಗ ನಿಮ್ಮ ಹೂಡಿಕೆ ಎಷ್ಟು ವರ್ಷಗಳಲ್ಲಿ ದ್ವಿಗುಣಗೊಳ್ಳಲಿದೆ ಎನ್ನುವುದು ತಿಳಿಯುತ್ತದೆ. ಉದಾಹರಣೆಗೆ ನೀವು ₹1 ಲಕ್ಷ ಹೂಡಿಕೆ ಮಾಡಿದ್ದು ಶೇ 7.2ರ ಬಡ್ಡಿ ಲಾಭ ಸಿಗುತ್ತಿದೆ ಎಂದುಕೊಳ್ಳಿ. ಈ ಲೆಕ್ಕಾಚಾರದಲ್ಲಿ ಒಂದು ಲಕ್ಷ 2 ಲಕ್ಷವಾಗಲು 10 ವರ್ಷಗಳು ಬೇಕಾಗುತ್ತವೆ. ಹೀಗೆ ಲೆಕ್ಕಾಚಾರ ಮಾಡಿ ನೋಡಿ (72/7.2 = 10 ವರ್ಷಗಳು)

(ಲೇಖಕಿ ಚಾರ್ಟರ್ಡ್ ಅಕೌಂಟೆಂಟ್)

ಮತ್ತಷ್ಟು ಜಿಗಿದ ಷೇರುಪೇಟೆ ಸೂಚ್ಯಂಕಗಳು

ಫೆಬ್ರುವರಿ 23ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಜಿಗಿತ ಕಂಡಿವೆ. 73,142 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 1ರಷ್ಟು ಗಳಿಸಿಕೊಂಡಿದೆ. 22,212 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.78 ರಷ್ಟು ಹೆಚ್ಚಳ ಕಂಡಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ತೈಲ ಬೆಲೆ ಏರಿಕೆಯನ್ನು ಹೂಡಿಕೆದಾರರು ಪರಿಗಣಿಸದೇ ಇದ್ದದ್ದು, ದೇಶಿಯ ಹೂಡಿಕೆದಾರರ ಖರೀದಿ ಉತ್ಸಾಹ ಸೇರಿ ಹಲವು ಅಂಶಗಳು ಷೇರುಪೇಟೆ ಸೂಚ್ಯಂಕಗಳ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ರಿಯಲ್ ಎಸ್ಟೇಟ್ ಸೂಚ್ಯಂಕ ಶೇ 4, ಟೆಲಿಕಾಂ ಸೂಚ್ಯಂಕ ಶೇ 3.8, ಬಿಎಸ್‌ಇ ಎಫ್‌ಎಂಸಿಜಿ ಮತ್ತು ಪವರ್ ಸೂಚ್ಯಂಕ ತಲಾ ಶೇ 1.5ರಷ್ಟು ಗಳಿಸಿಕೊಂಡಿವೆ. ಮತ್ತೊಂದೆಡೆ ಬಿಎಸ್‌ಇ ಅನಿಲ ಮತ್ತು ತೈಲ ಸೂಚ್ಯಂಕ ಶೇ 2ರಷ್ಟು ಮತ್ತು ಬಿಎಸ್‌ಇ ಮಾಹಿತಿ ತಂತ್ರಜ್ಞಾನ ಸೂಚ್ಯಂಕ ಶೇ 1ರಷ್ಟು ಕುಸಿದಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹1,939.40 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿಯ ಸಾಂಸ್ಥಿಕ ಹೂಡಿಕೆದಾರರು ₹3,532.82 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಪೇಟಿಎಂ, ಎಬಿಬಿ ಇಂಡಿಯಾ, ಅದಾನಿ ವಿಲ್ಮಾರ್, ಭಾರತ್ ಇಲೆಕ್ಟ್ರಾನಿಕ್ಸ್, ಇಂಡಸ್ ಟವರ್ಸ್, ವರುಣ್ ಬಿವರೇಜಸ್, ಮಹೀಂದ್ರ ಆ್ಯಂಡ್ ಮಹೀಂದ್ರ ಜಿಗಿತ ಕಂಡಿವೆ. ಹಿರೋ ಮೋಟೋ ಕಾರ್ಪ್, ಕೋಲ್ ಇಂಡಿಯಾ, ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಮತ್ತು ಚೋಳಮಂಡಲಂ ಇನ್ವೆಸ್ಟ್‌ಮೆಂಟ್ ಕುಸಿದಿವೆ.

ಮಾರುಕಟ್ಟೆ ಮೌಲ್ಯದ ಲೆಕ್ಕಾಚಾರದಲ್ಲಿ ನೋಡಿದಾಗ ರಿಲಯನ್ಸ್ ಇಂಡಸ್ಟ್ರೀಸ್ ಅತಿ ಹೆಚ್ಚು ಮೌಲ್ಯ ಹೆಚ್ಚಿಸಿಕೊಂಡಿದೆ. ಐಸಿಐಸಿಐ ಬ್ಯಾಂಕ್, ಸನ್ ಫಾರ್ಮಾ, ಮಹೀಂದ್ರ ಆ್ಯಂಡ್ ಮಹೀಂದ್ರ ಕೂಡ ಮೌಲ್ಯ ಹೆಚ್ಚಿಸಿಕೊಂಡಿವೆ. ಮತ್ತೊಂದೆಡೆ ಟಿಸಿಎಸ್, ಇನ್ಫೊಸಿಸ್ ಮತ್ತು ವಿಪ್ರೊ ಮೌರುಕಟ್ಟೆ ಮೌಲ್ಯ ತಗ್ಗಿದೆ.

ಮುನ್ನೋಟ: ಈ ವಾರ ಸ್ನೋವೆಕ್ ಇಂಡಸ್ಟ್ರೀಸ್, ಕ್ಯಾಪಿಟಲ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿ., ಕೆಎಸ್‌ಬಿ ಲಿ., ಮಾರ್ಬಲ್ ಸಿಟಿ ಇಂಡಿಯಾ ಲಿ., ಕೆ ಆ್ಯಂಡ್ ಆರ್ ರೇಲ್ ಎಂಜಿನಿಯರಿಂಗ್ ಲಿ., ಮತ್ತು ರಾಶಿ ಫೆರಿಫೆರಲ್ಸ್ ಲಿ., ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಎಲ್‌ಐಸಿ ಹೌಸಿಂಗ್: ₹5 ಸಾವಿರ ಕೋಟಿ ಲಾಭ ಗಳಿಕೆ ನಿರೀಕ್ಷೆ

ನವದೆಹಲಿ (ಪಿಟಿಐ): ಸಾಲಕ್ಕೆ ಬೇಡಿಕೆ ಹೆಚ್ಚಳ ಮತ್ತು ವ್ಯವಹಾರದ ವಿಸ್ತರಣೆಯಿಂದಾಗಿ 2023-24ರ ಹಣಕಾಸು ವರ್ಷದ ಕೊನೆಯ ತ್ರೈಮಾಸಿಕದ ವೇಳೆಗೆ ಎಲ್‌ಐಸಿ ಹೌಸಿಂಗ್ ಫೈನಾನ್ಸ್‌ನ ನಿವ್ವಳ ಲಾಭವು ₹5 ಸಾವಿರ ಕೋಟಿ ಆಗಬಹುದು ಎಂದು ನಿರೀಕ್ಷಿಸಲಾಗಿದೆ ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ತ್ರಿಭುವನ್ ಅಧಿಕಾರಿ ತಿಳಿಸಿದ್ದಾರೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹2,891 ಕೋಟಿ ನಿವ್ವಳ ಲಾಭವನ್ನು ಕಂಪನಿ ಗಳಿಸಿತ್ತು ಎಂದು ಪಿಟಿಐಗೆ ತಿಳಿಸಿದ್ದಾರೆ. ಪ್ರಸಕ್ತ ಹಣಕಾಸು ವರ್ಷದ ಮೂರು ತ್ರೈಮಾಸಿಕದಲ್ಲಿ ಕಂಪನಿ ₹3,675 ಕೋಟಿ ನಿವ್ವಳ ಲಾಭ ಗಳಿಸಿದೆ. ಇದು ಕೊನೆಯ ತ್ರೈಮಾಸಿಕದ ವೇಳೆಗೆ ₹5 ಸಾವಿರ ಕೋಟಿಗೆ ಮುಟ್ಟುವ ಭರವಸೆ ಇದೆ ಎಂದು ಹೇಳಿದ್ದಾರೆ.

'ಎರಡು ಮತ್ತು ಮೂರನೇ ಶ್ರೇಣಿಯ (ಟೈರ್-2 ಮತ್ತು ಟೈರ್-3) ಮಾರುಕಟ್ಟೆಗಳಲ್ಲಿ ಕೈಗೆಟುಕುವ ಬೆಲೆಯ ವಸತಿ ವಿಭಾಗವು ಪ್ರಬಲವಾಗಿದೆ. ಈ ವಿಭಾಗವು ಲಕ್ಷಾಂತರ ಭಾರತೀಯರಿಗೆ ಮಧ್ಯಮ ಬಜೆಟ್‌ನೊಂದಿಗೆ ತಮ್ಮ ಸ್ವಂತ ಮನೆಯನ್ನು ಹೊಂದಲು ಅವಕಾಶವನ್ನು ನೀಡುವುದರಿಂದ ನಾವು ಈ ವಿಭಾಗದತ್ತ ಗಮನಹರಿಸಿದ್ದೇವೆ' ಎಂದು ಅವರು ಹೇಳಿದರು.

ಅಬುಧಾಬಿಯಲ್ಲಿ ಸಚಿವರ ಸಭೆ ಇಂದಿನಿಂದ

ನವದೆಹಲಿ (ಪಿಟಿಐ): ವಿಶ್ವ ವ್ಯಾಪಾರ ಸಂಘಟನೆಯ (ಡಬ್ಲ್ಯುಟಿಒ) 13ನೇ ಸಚಿವರ ಸಭೆ ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಅಬುಧಾಬಿಯಲ್ಲಿ ಸೋಮವಾರ (ಫೆ.26) ಆರಂಭವಾಗಲಿದೆ. ಭಾರತೀಯ ನಿಯೋಗವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ನೇತೃತ್ವ ವಹಿಸಲಿದ್ದಾರೆ.

ಚೀನಾ ಮುಂದಿಟ್ಟಿರುವ ಹೂಡಿಕೆ ಉತ್ತೇಜನ ಒಪ್ಪಂದ ಪ್ರಸ್ತಾವವನ್ನು ಭಾರತವು ಸಭೆಯಲ್ಲಿ ವಿರೋಧಿಸಲಿದೆ. ಹಾಗೆಯೇ, ಆಹಾರ ಭದ್ರತೆಗಾಗಿ ಸರ್ಕಾರವು ಧಾನ್ಯ ಸಂಗ್ರಹಿಸಿ ಇರಿಸುವ ವಿಚಾರ ಹಾಗೂ ಮೀನುಗಾರರ ಹಿತರಕ್ಷಣೆಯಂತಹ ವಿಚಾರಗಳಿಗೆ ಕಾಯಂ ಪರಿಹಾರ ಕಂಡುಕೊಳ್ಳಬೇಕು ಎಂದು ಭಾರತವು ಒತ್ತಾಯಿಸಲಿದೆ.

ಸಭೆಯಲ್ಲಿ ಭಾರತವು, ಆಹಾರ ಭದ್ರತೆ, ಕೃಷಿ ಸುಧಾರಣೆಗಳು, ಮೀನುಗಾರಿಕೆ ಸಬ್ಸಿಡಿಗಳು, ವಿವಾದಗಳ ಇತ್ಯರ್ಥ ಸೇರಿದಂತೆ ವಿವಿಧ ವಿಷಯಗಳಿಗೆ ಕಾಯಂ ಪರಿಹಾರವನ್ನು ಕಂಡು ಹಿಡಿಯವುದರ ಕುರಿತು ಪ್ರಸ್ತಾಪ ಮಾಡಲಿದೆ.

ಕೆಂಪು ಸಮುದ್ರ ಬಿಕ್ಕಟ್ಟು, ಉಕ್ರೇನ್-ರಷ್ಯಾ ಯುದ್ಧ ಮತ್ತು ಇಸ್ರೇಲ್ ಹಮಾಸ್‌ನಲ್ಲಿನ ಸಂಘರ್ಷದಿಂದಾಗಿ ಉಂಟಾಗಿರುವ ಅನಿಶ್ಚಿತ ಜಾಗತಿಕ ಆರ್ಥಿಕ ಪರಿಸ್ಥಿತಿಯ ಹಿನ್ನಲೆಯಲ್ಲಿ ವಿಶ್ವ ವ್ಯಾಪಾರ ಸಂಘಟನೆಯ 164 ಸದಸ್ಯ ರಾಷ್ಟ್ರಗಳ ಸಚಿವರು ಸಭೆ ಸೇರಲಿದ್ದಾರೆ.

ಸೌತ್ ಕೆರೋಲಿನಾ: ಟ್ರಂಪ್‌ಗೆ ಗೆಲುವು

ಚಾರ್ಲ್ಸ್‌ಟನ್ (ಸೌತ್ ಕೆರೋಲಿನಾ) (ಎಪಿ): ಸೌತ್ ಕೆರೋಲಿನಾದ ಮಾಜಿ ಗವರ್ನರ್, ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಸ್ಪರ್ಧೆಯ ಆಕಾಂಕ್ಷಿಯಾದ ಭಾರತ ಮೂಲದ ನಿಕ್ಕಿ ಹ್ಯಾಲಿ ಅವರನ್ನು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಶನಿವಾರ ಸುಲಭವಾಗಿ ಸೋಲಿಸಿದರು. ಈ ಮೂಲಕ ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿಯಾಗುವ ನಿಟ್ಟಿನಲ್ಲಿ ಟ್ರಂಪ್ ತನ್ನ ಹಾದಿ ಮತ್ತಷ್ಟು ಬಲಪಡಿಸಿಕೊಂಡರು.

ಟ್ರಂಪ್

ಈಗಾಗಲೇ ಅಯೋವಾ, ನ್ಯೂ ಹ್ಯಾಂಪ್‌ಶೈರ್, ನೆವಡಾ, ಯು.ಎಸ್. ವರ್ಜಿನ್ ಐಲ್ಯಾಂಡ್ಸ್‌ಗಳಲ್ಲಿ ಗೆಲುವು ದಾಖಲಿಸಿರುವ ಟ್ರಂಪ್, ಪಕ್ಷದ ಇತರ ಸ್ಪರ್ಧಿಗಳಿಗಿಂತ ಮುನ್ನಡೆ ಕಾಯ್ದುಕೊಂಡಿದ್ದಾರೆ. ಇದೀಗ ಸೌತ್ ಕೆರೋಲಿನಾದಲ್ಲೂ ಟ್ರಂಪ್‌ಗೆ ವಿಜಯ ಒಲಿದಿದೆ. ಇದು ಹ್ಯಾಲಿ ಅವರನ್ನು ಸ್ಪರ್ಧೆಯಿಂದ ನಿರ್ಗಮಿಸುವಂತೆ ಒತ್ತಡ ಹೆಚ್ಚಿಸುವ ಸಾಧ್ಯತೆ ಇದೆ ಎಂದು ವಿಶ್ಲೇಷಿಸಲಾಗುತ್ತಿದೆ.

ದೇಶದ ಕಾಗದ ಉದ್ಯಮದ ಮೇಲೆ ನಕಾರಾತ್ಮಕ ಪರಿಣಾಮ: ಐಪಿಎಂಎ

ಕಾಗದ ಆಮದು ಶೇ 37ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): 2023-24ರ ಹಣಕಾಸು ವರ್ಷದ ಏಪ್ರಿಲ್-ಡಿಸೆಂಬರ್ ಅವಧಿಯಲ್ಲಿ 14.70 ಲಕ್ಷ ಟನ್ ಕಾಗದ ಮತ್ತು ಕಾಗದದ ಹಾಳೆಗಳು (ಪೇಪರ್-ಪೇಪರ್ ಬೋರ್ಡ್ಸ್) ಆಮದಾಗಿವೆ. ಈ ಆಮದು ಸ್ಥಳೀಯ ಕಾಗದ ಕಾರ್ಖಾನೆಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂದು ಭಾರತೀಯ ಕಾಗದ ತಯಾರಕರ ಸಂಸ್ಥೆ (ಐಪಿಎಂಎ) ಭಾನುವಾರ ಹೇಳಿದೆ.

2022-23ರ ಹಣಕಾಸು ವರ್ಷದ ಇದೇ ಅವಧಿಯಲ್ಲಿ 10.07 ಲಕ್ಷ ಟನ್ ಆಮದಾಗಿತ್ತು. ಇದಕ್ಕೆ ಹೋಲಿಸಿದರೆ ಪ್ರಸಕ್ತ ಅವಧಿಯಲ್ಲಿ ಶೇ 37ರಷ್ಟು ಏರಿಕೆಯಾಗಿದೆ. ಬರವಣಿಗೆ, ಮುದ್ರಣ ಕಾಗದ ಸೇರಿದಂತೆ ಎಲ್ಲ ದರ್ಜೆಯ ಕಾಗದವು ಆಮದಾಗಿವೆ ಎಂದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ 9 ತಿಂಗಳಲ್ಲಿ ₹10 ಸಾವಿರ ಕೋಟಿ ಮೌಲ್ಯದ ಕಾಗದ ಮತ್ತು ಪೇಪರ್ ಬೋರ್ಡ್ಸ್ ಆಮದಾಗಿವೆ. ಇದು ಮೇಕ್ ಇನ್ ಇಂಡಿಯಾಗೆ ಮತ್ತು ಕಾಗದದ ಉದ್ಯಮವನ್ನು ನಂಬಿರುವ 5 ಲಕ್ಷ ಜನರ ಉದ್ಯೋಗದ ಮೇಲೆ ಪರಿಣಾಮ ಬೀರಲಿದೆ ಎಂದು ಐಪಿಎಂಎ ಅಧ್ಯಕ್ಷ ಪವನ್ ಅಗರ್ವಾಲ್ ಹೇಳಿದ್ದಾರೆ.

ದೇಶದಲ್ಲಿ ಬಹುತೇಕ ಎಲ್ಲ ರೀತಿಯ ಕಾಗದವನ್ನು ತಯಾರಿಸಲು ಬೇಕಾದ ಸಾಮರ್ಥ್ಯವಿದೆ. ಆದರೆ, ಇಂತಹ ಆಮದು ದೇಶದ ಕಾಗದದ ಕಾರ್ಖಾನೆಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂದು ಅಗರ್ವಾಲ್ ಹೇಳಿದ್ದಾರೆ.

ಸರ್ಕಾರದ ಅಂಕಿ ಅಂಶಗಳ ಪ್ರಕಾರ, ದೇಶದಲ್ಲಿನ 900 ಕಾಗದ ಕಾರ್ಖಾನೆಗಳ ಪೈಕಿ 553 ಮಾತ್ರ ಕಾರ್ಯಾಚರಣೆ ನಡೆಸುತ್ತಿವೆ.

ಆಮದು ಹೆಚ್ಚಳಕ್ಕೆ ಕಾರಣ?

- ಆಸಿಯಾನ್-ಭಾರತ ಮುಕ್ತ ವ್ಯಾಪಾರ ಒಪ್ಪಂದದ ಅಡಿಯಲ್ಲಿನ ಶೂನ್ಯ ಆಮದು ಸುಂಕದಿಂದಾಗಿ ಆಸಿಯಾನ್‌ನಿಂದ ಬರುವ ಪೇಪರ್ ಮತ್ತು ಪೇಪರ್ ಬೋರ್ಡ್‌ನ ಆಮದುಗಳಲ್ಲಿ ಶೇ 142ರಷ್ಟು ಹೆಚ್ಚಾಗಿದೆ.
- ಏಷ್ಯಾ ಪೆಸಿಫಿಕ್ ವ್ಯಾಪಾರ ಒಪ್ಪಂದದ ಅಡಿಯಲ್ಲಿ ಚೀನಾಕ್ಕೆ ಆಮದು ಸುಂಕದ ರಿಯಾಯಿತಿಗಳು ಸಹ ಕಾಗದದ ಆಮದನ್ನು ಹೆಚ್ಚಿಸಿವೆ.
- ಕೆಲವು ದೇಶಗಳು ತಮ್ಮ ಕಾಗದ ಕಾರ್ಖಾನೆಗಳಿಗೆ ಗಣನೀಯವಾದ ಸಬ್ಸಿಡಿ ನೀಡುತ್ತಿವೆ. ಇದು ಭಾರತೀಯ ಕಾಗದ ಕಾರ್ಖಾನೆಗಳಿಗೆ ಹೋಲಿಸಿದರೆ ಹೆಚ್ಚಿದೆ ಎಂದು ಐಪಿಎಂಎ ಹೇಳಿದೆ.

ದೇಶದ ಉಕ್ಕು ರಫ್ತು 18 ತಿಂಗಳ ಗರಿಷ್ಠಕ್ಕೆ

ನವದೆಹಲಿ (ಪಿಟಿಐ): 2024ರ ಜನವರಿಯಲ್ಲಿ ದೇಶದ ಉಕ್ಕು ರಫ್ತು 18 ತಿಂಗಳ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ ಎಂದು ಸ್ಟೀಲ್‌ಮಿಂಟ್ ತಿಳಿಸಿದೆ.

ಯುರೋಪಿಯನ್ ಒಕ್ಕೂಟದಿಂದ ಹೆಚ್ಚಿದ ಬೇಡಿಕೆ, ದೇಶದ ಉಕ್ಕಿನ ಸ್ಪರ್ಧಾತ್ಮಕ ಬೆಲೆಗಳು ರಫ್ತು ಹೆಚ್ಚಳಕ್ಕೆ ಕಾರಣವಾಗಿವೆ ಎಂದು ಸಂಶೋಧನಾ ಸಂಸ್ಥೆ ತನ್ನ ವರದಿಯಲ್ಲಿ ತಿಳಿಸಿದೆ.

2023ರ ಜನವರಿಯಲ್ಲಿ 6.7 ಲಕ್ಷ ಟನ್ (0.67 ದಶಲಕ್ಷ ಟನ್) ರಫ್ತಾಗಿದ್ದರೆ, ಅದು ಈ ಬಾರಿ 11.10 ಲಕ್ಷ ಟನ್‌ಗೆ (1.11 ದಶಲಕ್ಷ ಟನ್) ಏರಿಕೆಯಾಗಿದೆ ಎಂದು ತಿಳಿಸಿದೆ.

ದೇಶದ ಮಾರುಕಟ್ಟೆಯಲ್ಲಿ ಪ್ರತಿ ಟನ್ ಹಾಟ್ ರೋಲ್ಡ್ ಕಾಯಿಲ್ (ಎಚ್‌ಆರ್‌ಸಿ) ಬೆಲೆ ₹54,300 ಇದ್ದರೆ, ಜಾಗತಿಕ ದರವು ₹58 ಸಾವಿರ ಇದೆ. ಈ ಅಂಶವು ಜಾಗತಿಕ ಮಾರುಕಟ್ಟೆಯಲ್ಲಿ ಭಾರತದ ಉಕ್ಕಿನ ಬೇಡಿಕೆಯನ್ನು ಹೆಚ್ಚಾಗುವಂತೆ ಮಾಡಿತು ಎಂದು ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

31 ಸಾವಿರ ಸೈನಿಕರ ಸಾವು: ಝೆಲೆನ್‌ಸ್ಕಿ

ಕೀವ್ (ಎಎಫ್‌ಪಿ/ ರಾಯಿಟರ್ಸ್): ರಷ್ಯಾ ವಿರುದ್ಧದ ಯುದ್ಧದಲ್ಲಿ ಇದುವರೆಗೆ ಉಕ್ರೇನ್‌ನ 31 ಸಾವಿರ ಯೋಧರು ಮೃತಪಟ್ಟಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷ ವ್ಲಾದಿಮಿರ್ ಝೆಲೆನ್‌ಸ್ಕಿ ಭಾನುವಾರ ಹೇಳಿದರು.

ಎರಡು ವರ್ಷಗಳಿಂದ ನಡೆಯುತ್ತಿರುವ ಯುದ್ಧದಲ್ಲಿ ಉಕ್ರೇನ್ ತನ್ನ ಸೈನಿಕರ ಸಾವಿನ ಸಂಖ್ಯೆಯನ್ನು ಅಧಿಕೃತವಾಗಿ ಪ್ರಕಟಿಸಿದ್ದು ಇದೇ ಮೊದಲು. 'ಈ ಯುದ್ಧದಲ್ಲಿ ಉಕ್ರೇನ್‌ನ 31 ಸಾವಿರ ಸೈನಿಕರು ಸಾವನ್ನಪ್ಪಿದ್ದಾರೆ. ಪುಟಿನ್ (ರಷ್ಯಾ ಅಧ್ಯಕ್ಷ) ಮತ್ತು ಅವರ 'ಸುಳ್ಳಿನ ವಲಯ' ಹೇಳುವಂತೆ 3 ಲಕ್ಷ ಅಥವಾ 1.50 ಲಕ್ಷ ಯೋಧರನ್ನು ನಾವು ಕಳೆದುಕೊಂಡಿಲ್ಲ. ಆದರೆ ಪ್ರತಿಯೊಬ್ಬ ಸೈನಿಕನ ಸಾವು ಕೂಡಾ ನಮಗೆ ಆಗಿರುವ ಬಲುದೊಡ್ಡ ನಷ್ಟ' ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಯುದ್ಧದಲ್ಲಿ ಗಾಯಗೊಂಡಿರುವ ಸೈನಿಕರ ಸಂಖ್ಯೆಯನ್ನು ಬಹಿರಂಗ ಪಡಿಸುವುದಿಲ್ಲ. ಅದು ರಷ್ಯಾಕ್ಕೆ ಯುದ್ಧ ತಂತ್ರ ರೂಪಿಸಲು ನೆರವಾಗಬಹುದು' ಎಂದು ಹೇಳಿದರು.

ಸ್ವತಂತ್ರ ಸತ್ಯಶೋಧನಾ ಸಮಿತಿಗೆ ತಡೆ

ಸಂದೇಶ್‌ಖಾಲಿ: ತನಿಖೆಗೆ ತೆರಳುತ್ತಿದ್ದವರು ಪೊಲೀಸ್ ವಶಕ್ಕೆ

ಕೋಲ್ಕತ್ತ (ಪಿಟಿಐ): ಹಿಂಸಾಚಾರಪೀಡಿತ ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಗೆ ತೆರಳುತ್ತಿದ್ದ ಪಟ್ನಾ ಹೈಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಲ್. ನರಸಿಂಹ ರೆಡ್ಡಿ ನೇತೃತ್ವದ ಆರು ಮಂದಿ ಸದಸ್ಯರಿದ್ದ ಸ್ವತಂತ್ರ ಸತ್ಯಶೋಧನಾ ಸಮಿತಿಗೆ ಪೊಲೀಸರು ಭಾನುವಾರ ತಡೆಯೊಡ್ಡಿದ್ದಾರೆ.

ಮಹಿಳೆಯರ ಮೇಲೆ ನಡೆದಿದೆ ಎನ್ನಲಾದ ದೌರ್ಜನ್ಯ ಪ್ರಕರಣಗಳ ಕುರಿತು ತನಿಖೆ ನಡೆಸಲು ಸಮಿತಿಯು ತೆರಳುತ್ತಿತ್ತು. ಸಂದೇಶ್‌ಖಾಲಿ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ 144ನೇ ಸೆಕ್ಷನ್ ಜಾರಿಗೊಳಿಸಿರುವ ಕಾರಣ ಸತ್ಯಶೋಧನಾ ಸಮಿತಿಯನ್ನು ಭೋಜೆರ್‌ಹತ್ ಎಂಬಲ್ಲಿ ಪೊಲೀಸ್ ಅಧಿಕಾರಿಗಳು ತಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ನಿವೃತ್ತ ಐಪಿಎಸ್ ಅಧಿಕಾರಿ ರಾಜ್‌ಪಾಲ್ ಸಿಂಗ್, ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಚಾರು ವಾಲಿ ಖನ್ನಾ, ವಕೀಲರಾದ ಒ.ಪಿ. ವ್ಯಾಸ್ ಮತ್ತು ಭಾವನಾ ಬಜಾಜ್ ಹಾಗೂ ಪತ್ರಕರ್ತ ಸಂಜೀವ್ ನಾಯಕ್ ಅವರು ನರಸಿಂಹ ರೆಡ್ಡಿ ಜೊತೆಗಿದ್ದರು.

ಸಮಿತಿ ಸದಸ್ಯರಾದ ಆರು ಮಂದಿಯನ್ನು ವಶಕ್ಕೆ ಪಡೆದು, ಬಳಿಕ ಬಿಡುಗಡೆಗೊಳಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಮತ್ತು ಸಹಚರರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಮತ್ತು ಭೂಮಿಯನ್ನು ಕಬಳಿಸಿದ್ದಾರೆ ಎಂದು ಆರೋಪಿಸಿ ಸಂದೇಶ್‌ಖಾಲಿಯ ಜನರು ಪ್ರತಿಭಟನೆ ಮುಂದುವರಿಸಿದ್ದಾರೆ.

ಬಂಧನ: ಟಿಎಂಸಿ ಮುಖಂಡ ಶಿಬಾ ಪ್ರಸಾದ್ ಹಜ್ರಾ ಅವರ ಮಾಲೀಕತ್ವದ ಕೋಳಿ ಫಾರ್ಮ್‌ಗೆ ಬೆಂಕಿ ಹಚ್ಚಿದ ಆರೋಪದಲ್ಲಿ ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ನಾಯಕಿ ಆಯೆಷಾ ಬೀಬಿ ಅವರನ್ನು ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಯಲ್ಲಿ ಪೊಲೀಸರು ಭಾನುವಾರ ಬಂಧಿಸಿದ್ದಾರೆ.

ಇದೇ ಪ್ರಕರಣಕ್ಕೆ ಸಂಬಂಧಿಸಿ ಕೆಲವು ಗ್ರಾಮಸ್ಥರನ್ನೂ ಪೊಲೀಸರು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕೋಳಿ ಫಾರ್ಮ್‌ಗೆ ಬೆಂಕಿ ಹಚ್ಚಿರುವ ಪ್ರಕರಣದಲ್ಲಿ ಆಯೆಷಾ ಅವರು ಭಾಗಿಯಾಗಿರುವುದು ದೃಢಪಟ್ಟಿರುವುದರಿಂದ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಂದೇಶ್‌ಖಾಲಿಗೆ ತೆರಳುತ್ತಿದ್ದ ರಾಷ್ಟ್ರೀಯ ಮಹಿಳಾ ಆಯೋಗದ ಮಾಜಿ ಸದಸ್ಯೆ ಚಾರು ವಾಲಿ ಖನ್ನಾ ಮತ್ತು ವಕೀಲರಾದ ಭಾವನಾ ಬಜಾಜ್ ಅವರನ್ನು ಪೊಲೀಸರು ಭಾನುವಾರ ತಡೆದರು —ಪಿಟಿಐ ಚಿತ್ರ

ಐಎನ್‌ಎಲ್‌ಡಿ ಮುಖಂಡ ನಫೇ ಸಿಂಗ್ ರಾಠೀ ಹತ್ಯೆ

ಚಂಡೀಗಢ (ಪಿಟಿಐ): ಭಾರತೀಯ ರಾಷ್ಟ್ರೀಯ ಲೋಕದಳ (ಐಎನ್‌ಎಲ್‌ಡಿ) ಹರಿಯಾಣ ಘಟಕದ ಅಧ್ಯಕ್ಷ ನಫೇ ಸಿಂಗ್ ರಾಠೀ ಮತ್ತು ಪಕ್ಷದ ಒಬ್ಬ ಕಾರ್ಯಕರ್ತ ನವದೆಹಲಿ ಸಮೀಪದ ಜಜ್ಜರ್ ಜಿಲ್ಲೆಯ ಬಹಾದೂರ್‌ಗಢದಲ್ಲಿ ಭಾನುವಾರ ದುಷ್ಕರ್ಮಿಗಳ ಗುಂಡಿಗೆ ಬಲಿಯಾಗಿದ್ದಾರೆ.

'ರಾಠೀ ಅವರು ಪ್ರಯಾಣಿಸುತ್ತಿದ್ದ ಕಾರಿನ ಮೇಲೆ ದುಷ್ಕರ್ಮಿಗಳು ಗುಂಡಿನ ಮಳೆಗರೆದಿದ್ದಾರೆ. ಘಟನೆಯಲ್ಲಿ ರಾಠೀ ಮತ್ತು ಅವರ ಜತೆಗಿದ್ದ ಪಕ್ಷದ ಒಬ್ಬ ಕಾರ್ಯಕರ್ತ ಬಲಿಯಾಗಿದ್ದಾರೆ. ಅವರ ಭದ್ರತೆಗೆ ನಿಯೋಜಿಸಿದ್ದ ಮೂವರು ಗನ್‌ಮ್ಯಾನ್‌ಗಳು ಗಾಯಗೊಂಡಿದ್ದಾರೆ' ಎಂದು ಐಎನ್‌ಎಲ್‌ಡಿ ಮುಖಂಡ ಅಭಯ್ ಚೌಟಾಲಾ ಹೇಳಿದ್ದಾರೆ. 70 ವರ್ಷದ ರಾಠೀ ಅವರು ಬಹಾದೂರ್‌ಗಢದ ಮಾಜಿ ಶಾಸಕರೂ ಹೌದು. ಅವರಿಗೆ ಜೀವ ಬೆದರಿಕೆ ಯಿದ್ದು, ಭದ್ರತೆ ಒದಗಿಸುವಂತೆ ಪೊಲೀಸ್ ಅಧಿಕಾರಿಗಳು, ಗೃಹ ಸಚಿವರಿಗೆ ಮನವಿ ಮಾಡಿದ್ದೆವು. ಆದರೂ ಭದ್ರತೆ ನೀಡಿಲ್ಲ' ಎಂದು ಆರೋಪಿಸಿದರು.

ಮಾರ್ಚ್ 1ರಿಂದ ಮೂರು ದಿನ ಅಂಬಾನಿ ಮಗನ ಮದುವೆ ಪೂರ್ವ ಕಾರ್ಯಕ್ರಮ

ಜಾಮ್‌ನಗರಕ್ಕೆ ಉದ್ಯಮ ದಿಗ್ಗಜರು, ತಾರೆಯರು

ನವದೆಹಲಿ (ಪಿಟಿಐ): ಉದ್ಯಮಿ ಮುಕೇಶ್ ಅಂಬಾನಿ ಅವರು ಕಿರಿಯ ಮಗ ಅನಂತ್ ಅಂಬಾನಿ ಹಾಗೂ ಎನ್‌ಕೋರ್ ಹೆಲ್ತ್‌ಕೇರ್‌ನ ಸಿಇಒ ವಿರೇನ್ ಮರ್ಚೆಂಟ್ ಹಾಗೂ ಉದ್ಯಮಿ ಶೈಲಾ ಮರ್ಚೆಂಟ್ ಅವರ ಕಿರಿಯ ಮಗಳು ರಾಧಿಕಾ ಮರ್ಚೆಂಟ್ ಅವರ ವಿವಾಹವು ಇದೇ ವರ್ಷದ ಜುಲೈನಲ್ಲಿ ನಡೆಯಲಿದೆ. ಮದುವೆಪೂರ್ವ ಕಾರ್ಯಕ್ರಮಗಳು ಮಾರ್ಚ್ 1ರಿಂದ ಮೂರು ದಿನಗಳ ಕಾಲ ನಡೆಯಲಿದ್ದು, ಈ ಸಂಭ್ರಮದಲ್ಲಿ ಪಾಲ್ಗೊಳ್ಳಲು ಜಗತ್ತಿನಾದ್ಯಂತದಿಂದ ಖ್ಯಾತನಾಮರು ಆಗಮಿಸಲಿದ್ದಾರೆ.

ಭಾರತದ ಶ್ರೀಮಂತ ಉದ್ಯಮಿ ಗೌತಮ್ ಅದಾನಿ, ಸುನೀಲ್ ಭಾರ್ತಿ ಮಿತ್ತಲ್, ಬಾಲಿವುಡ್‌ನ ಅಮಿತಾಬ್ ಬಚ್ಚನ್ ಹಾಗೂ ಶಾರುಕ್ ಖಾನ್, ಕ್ರಿಕೆಟ್‌ನ ದಿಗ್ಗಜ ಸಚಿನ್ ತೆಂಡೂಲ್ಕರ್ ಹಾಗೂ ಎಂ.ಎಸ್.ಧೋನಿ, ಮೆಟಾದ ಸಿಇಒ ಮಾರ್ಕ್ ಜುಕರ್‌ಬರ್ಗ್ ಸೇರಿದಂತೆ ನೂರಾರು ಮಂದಿ ಗಣ್ಯರು ಗುಜರಾತ್‌ನ ಜಾಮ್‌ನಗರದಲ್ಲಿ ನಡೆಯಲಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

ಅನಂತ್ ಜೊತೆ ರಾಧಿಕಾ — ಪಿಟಿಐ ಚಿತ್ರ

ಹಾಲಿವುಡ್‌ನ ಖ್ಯಾತ ಪಾಪ್ ಗಾಯಕಿ ರಿಹಾನಾ ಅವರು ಗಣ್ಯರನ್ನು ತಮ್ಮ ಗಾಯನದ ಮೂಲಕ ಸ್ವಾಗತಿಸಲಿದ್ದಾರೆ. ಭಾರತದ ಗಾಯಕ ದಿಲ್‌ಜೀತ್ ದೋಸಂಡಾ ಹಾಗೂ ಇತರರು ರಿಹಾನಾ ಅವರಿಗೆ ಜೊತೆಯಾಗಲಿದ್ದಾರೆ.

ಹೇಗಿದೆ ತಯಾರಿ: ಗಣ್ಯರಿಗೆ ಉಳಿದುಕೊಳ್ಳಲು ಜಾಮ್‌ನಗರದಲ್ಲಿ ಐಷಾರಾಮಿ ಟೆಂಟ್‌ಗಳನ್ನು ನಿರ್ಮಾಣ ಮಾಡಲಾಗುತ್ತದೆ. ಈ ಟೆಂಟ್‌ಗಳು ಐಷಾರಾಮಿ ಬಾತ್‌ರೂಮ್‌ಗಳನ್ನು ಒಳಗೊಂಡಿವೆ. ದೆಹಲಿ ಹಾಗೂ ಮುಂಬೈನಿಂದ ಬರುವ ಗಣ್ಯರಿಗೆ ಜಾಮ್‌ನಗರಕ್ಕೆ ಬರಲು ವಿಮಾನ ವ್ಯವಸ್ಥೆಯನ್ನೂ ಮಾಡಲಾಗಿದೆ. ಜೊತೆಗೆ, ಗಣ್ಯರನ್ನು ವಾಪಸ್ ದೆಹಲಿ ಹಾಗೂ ಮುಂಬೈಗೆ ಕಳುಹಿಸಿಕೊಡುವ ಅನುಕೂಲತೆಯನ್ನೂ ಮಾಡಿಕೊಡಲಾಗಿದೆ.

ಏನೇನು ಕಾರ್ಯಕ್ರಮ: ಮೂರು ದಿನಗಳ ಕಾರ್ಯಕ್ರಮಗಳು ಮೂರು ಪರಿಕಲ್ಪನೆಗಳಲ್ಲಿ (ಥೀಮ್) ನಡೆಯಲಿದೆ. 'ಕಾರ್ಯಕ್ರಮಗಳ ಮಾರ್ಗಸೂಚಿ'ಯನ್ನು ಗಣ್ಯರಿಗೆ ಈಗಾಗಲೇ ಕಳುಹಿಸಿ ಕೊಡಲಾಗಿದೆ.

'ಆನ್ ಇವನಿಂಗ್ ಇನ್ ಎವರ್‌ಲ್ಯಾಂಡ್'- ಇದು ಮೊದಲ ದಿನ ಥೀಮ್. ಈ ಕಾರ್ಯಕ್ರಮದಲ್ಲಿ ಅತಿಥಿಗಳು ಕಾಕ್‌ಟೈಲ್ ದಿರಿಸುಗಳನ್ನು ತೊಡಬೇಕಿದೆ. 'ಎ ವಾಕ್ ಆನ್ ದಿ ವೈಲ್ಡ್‌ಸೈಡ್'- ಇದು ಎರಡನೇ ದಿನದ ಕಾರ್ಯಕ್ರಮ. 'ಅರಣ್ಯ' ಪರಿಕಲ್ಪನೆಗೆ ತಕ್ಕಂತೆ ಉಡುಗೆಗಳನ್ನು ಗಣ್ಯರು ತೊಡಬೇಕಿದೆ. ಅಂಬಾನಿ ಅವರ ಪ್ರಾಣಿ ಸಂರಕ್ಷಣೆ ಕೇಂದ್ರದ ಆವರಣದಲ್ಲಿ ಈ ಕಾರ್ಯಕ್ರಮವು ನಡೆಯಲಿದೆ. ಎರಡನೇ ದಿನದ ಕಾರ್ಯಕ್ರಮದ ನಂತರ, ಅತಿಥಿಗಳು 'ಮೇಲಾ ರೋಗ್'ಗೆ ತೆರಳಬೇಕಿದೆ. ಅಲ್ಲಿ ಭಾರತದ ದೇಶಿ ಕ್ರೀಡೆಗಳನ್ನು ಆಡಿಸಲಾಗುತ್ತದೆ. ಇದಕ್ಕೆ ಗಣ್ಯರು ದಕ್ಷಿಣ ಏಷ್ಯಾದ ಭಾಗದ ಉಡುಪುಗಳನ್ನು ತೊಡಬೇಕಿದೆ.

'ಟಸ್ಕರ್ ಟೇಲ್ಸ್' ಮತ್ತು 'ಹಸ್ತಾಕ್ಷರ್' - ಇವು ಮೂರನೇ ದಿನದ ಚಟುವಟಿಕೆಗಳು. ಟಸ್ಕರ್ ಟೇಲ್ಸ್‌ನಲ್ಲಿ ಅತಿಥಿಗಳು ಜಾಮ್‌ನಗರದ ಸೌಂದರ್ಯವನ್ನು ಸವಿಯಲಿದ್ದಾರೆ. ಇದಾದ ಬಳಿಕ ಕೊನೆಯ ಕಾರ್ಯಕ್ರಮದ ಅಂಗವಾಗಿ ಎಲ್ಲ ಗಣ್ಯರು ಭಾರತೀಯ ಸಾಂಪ್ರದಾಯಿಕ ಉಡುಪು ಧರಿಸಲಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9845114560 : 9731810277
9901641752 : 9886213331
080 - 45557163 / 164

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Wanted

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆ ಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟ ವಸತಿಯಿದೆ. 13,000- 17,000. 8951315839, 9141634619

Multiple Vacancy

REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

ಭವಿಷ್ಯ

Astrology

ವಶೀಕರಣ ಸ್ಪೆಷಲಿಸ್ಟ್, ಕೇರಳದ ಮಾಂತ್ರಿಕರು, ಪ್ರೇಮವಿಚಾರ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ ಅಷ್ಟಮಂಗಲ ಪೂಜೆಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. 9900574892

ಪ್ರವಾಸ

Travel

8 ದಿನಗಳ ಸೌತ್‌ಆಫ್ರಿಕಾ 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 7 ದಿನಗಳ ಜಪಾನ್, 7 ದಿನಗಳ ಶ್ರೀಲಂಕಾ, 6 ದಿನಗಳ ಕಾಶ್ಮೀರ, 8 ದಿನಗಳ ಭೂತಾನ್ 5 ದಿನಗಳ ಬಾಕು ಭಟ್ ಟ್ರಾವೆಲ್ಸ್: 9844166555/ 9844037295

29/04/2024 ಮತ್ತು 05/05/2024ರಿಂದ 22ದಿನಗಳ ವಿಮಾನ ಮತ್ತು ಎಸಿ.ಬಸ್ಸಿನಲ್ಲಿ ಬದರಿನಾಥ್, ಕೇದಾರನಾಥ್,ಕಾಶ್ಮೀರ, ಗುಲ್ಮಾರ್ಗ್,ವೈಷ್ಣೋದೇವಿ, ಅಮೃತಸರ,ಕಾಶಿ,ಅಯೋಧ್ಯ ಇತ್ಯಾದಿ 13ದಿನಗಳ ಚಾರದಾಮ್ ಮತ್ತು 27/6/2024ರಿಂದ ಅಮರನಾಥ್ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ಏಷ್ಯನ್ ಟ್ರಾವೆಲ್ ಲೈನ್ಸ್,164/3 ಮಿನರ್ವ ಬಸ್-ಸ್ಟಾಪ್ ಎದುರು ಆರ್.ವಿ.ರಸ್ತೆ. ಬೆಂಗಳೂರು-04. 8105657052/ 9480182865.

ಏಪ್ರಿಲ್ ಮೇ ಜೂನ್ ತಿಂಗಳಲ್ಲಿ 8 ದಿನಗಳ ಕಾಶಿ, ಗಯಾ/ 13 ದಿನಗಳ ಚಾರ್-ಧಾಮ ಬದರಿನಾಥ್, ಕೇದಾರನಾಥ್ ಗಂಗೋತ್ರಿ ಯಮನೋತ್ರಿ, ದೆಹಲಿ/ 5 ದಿನಗಳ ಹರಿದ್ವಾರ್ ಅಮೃತಸರ್ ವೈಷ್ಣೋದೇವಿ ಸಂಪರ್ಕಿಸಿ 'ಶ್ರೀಸುಧಾ ಟ್ರಾವೆಲ್ಸ್' 080- 22429289 9448119290 9019301300 8088826815

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಣಜಿ: ಸೆಮಿ ಪ್ರವೇಶಕ್ಕೆ ಕರ್ನಾಟಕಕ್ಕೆ ಗೆಲುವೊಂದೇ ದಾರಿ

ಮಯಂಕ್ ಪಡೆಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ಕರ್ನಾಟಕ ತಂಡದ ಬ್ಯಾಟರ್ ನಿಕಿನ್ ಜೋಸ್ —ಪ್ರಜಾವಾಣಿ ಸಂಗ್ರಹದಿಂದ

ನಾಗ್ಪುರ: ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟದ ಪಂದ್ಯದಲ್ಲಿ ವಿದರ್ಭ ಎದುರು ಮೊದಲ ಇನಿಂಗ್ಸ್‌ನಲ್ಲಿ ಹಿನ್ನಡೆ ಅನುಭವಿಸಿದೆ. ಇದರಿಂದಾಗಿ ತಂಡಕ್ಕೆ ಸೆಮಿಫೈನಲ್ ಪ್ರವೇಶಿಸುವ ಹಾದಿ ಕಠಿಣವಾಗಿದೆ.

ಪಂದ್ಯದಲ್ಲಿ ಇನ್ನೆರಡು ದಿನಗಳು ಉಳಿದಿದ್ದು, ಆತಿಥೇಯ ಬಳಗದ ಎದುರು ಗೆದ್ದರಷ್ಟೇ ಕರ್ನಾಟಕಕ್ಕೆ ನಾಲ್ಕರ ಘಟ್ಟ ತಲುಪಲು ಸಾಧ್ಯವಿದೆ.

ವಿದರ್ಭ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 460 ರನ್‌ಗಳಿಗೆ ಉತ್ತರವಾಗಿ ಕರ್ನಾಟಕ ತಂಡಕ್ಕೆ 90.3 ಓವರ್‌ಗಳಲ್ಲಿ 286 ರನ್ ಗಳಿಸಲಷ್ಟೇ ಸಾಧ್ಯವಾಯಿತು. ಬ್ಯಾಟರ್‌ಗಳ ವೈಫಲ್ಯದಿಂದಾಗಿ ಕರ್ನಾಟಕ ತಂಡವು ಪ್ರಥಮ ಇನಿಂಗ್ಸ್‌ನಲ್ಲಿ 174 ರನ್‌ಗಳ ಹಿನ್ನಡೆ ಅನುಭವಿಸಿತು.

ಭಾನುವಾರ ದಿನದಾಟದ ಮುಕ್ತಾಯಕ್ಕೆ ವಿದರ್ಭ ತಂಡವು ಎರಡನೇ ಇನಿಂಗ್ಸ್‌ನಲ್ಲಿ 14 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 50 ರನ್ ಗಳಿಸಿದೆ. ಇದರಿಂದಾಗಿ ತಂಡವು ಒಟ್ಟು 224 ರನ್‌ಗಳ ಮುನ್ನಡೆ ಸಾಧಿಸಿದೆ.

ಸದ್ಯದ ಪರಿಸ್ಥಿತಿಯಲ್ಲಿ ಆತಿಥೇಯರು ಡ್ರಾ ಸಾಧಿಸಿದರೂ ಸಾಕು ಸೆಮಿಫೈನಲ್ ಸ್ಥಾನ ಖಚಿತವಾಗಲಿದೆ. ಆದರೆ ಕರ್ನಾಟಕ ಬೌಲರ್‌ಗಳು ವಿದರ್ಭದ ವಿಕೆಟ್‌ಗಳನ್ನು ಬೇಗನೆ ಉರುಳಿಸಬೇಕು. ಗುರಿಯನ್ನು ಬೆನ್ನಟ್ಟಿ ಗೆಲ್ಲಬೇಕು.

ಶನಿವಾರ ದಿನದಾಟದ ಮುಕ್ತಾಯಕ್ಕೆ ಕರ್ನಾಟಕವು 24 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 98 ರನ್ ಗಳಿಸಿತ್ತು. ಆರ್. ಸಮರ್ಥ್ (43) ಮತ್ತು ನಿಕಿನ್ ಜೋಸ್ (20) ಕ್ರೀಸ್‌ನಲ್ಲಿದ್ದರು.

ಆದರೆ ಮೂರನೇ ದಿನದಾಟದಲ್ಲಿ ಸಮರ್ಥ್ ಮತ್ತು ನಿಕಿನ್ ತಂಡದ ಇನಿಂಗ್ಸ್ ಬೆಳೆಸಲು ಪ್ರಯತ್ನಿಸಿದರು. ಇಬ್ಬರೂ ಮೂರನೇ ವಿಕೆಟ್ ಜೊತೆಯಾಟದಲ್ಲಿ 64 ರನ್ ಸೇರಿಸಿದರು. ಊಟದ ವಿರಾಮಕ್ಕೂ ಮುನ್ನವೇ ಹರ್ಷ ದುಬೆ ಅವರ ಬೌಲಿಂಗ್‌ನಲ್ಲಿ ಸಮರ್ಥ್ (59; 97ಎ, 4X7) ಔಟಾಗುವುದರೊಂದಿಗೆ ಜೊತೆಯಾಟ ಮುರಿಯಿತು.

ನಿಕಿನ್ ಜೋಸ್ (82; 212ಎ, 4X11) ನೆಲಕಚ್ಚಿ ಆಡಿದರು. ಆದರೆ ಅವರೊಂದಿಗೆ ದೊಡ್ಡ ಜೊತೆಯಾಟವಾಡುವಲ್ಲಿ ಅನುಭವಿ ಮನೀಷ್ ಪಾಂಡೆ, ಯುವ ಆಟಗಾರರಾದ ಹಾರ್ದಿಕ್ ರಾಜ್, ಎಸ್. ಶರತ್ ಅವರು ಸಫಲರಾಗಲಿಲ್ಲ.

ಕಳೆದ ಪಂದ್ಯದಲ್ಲಿ ಶತಕ ಗಳಿಸಿದ್ದ ವೈಶಾಖ ವಿಜಯಕುಮಾರ್ ಮತ್ತು ಪದಾರ್ಪಣೆ ಪಂದ್ಯವಾಡುತ್ತಿರುವ ಧೀರಜ್ ಗೌಡ ಕೂಡ ಹೆಚ್ಚು ರನ್ ಗಳಿಸಲಿಲ್ಲ. ಇದರಿಂದಾಗಿ ತಂಡವು 90.3 ಓವರ್‌ಗಳಲ್ಲಿ 286 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಆದಿತ್ಯ ಸರವಟೆ (50ಕ್ಕೆ3) ಮತ್ತು ಯಶ್ ಠಾಕೂರ್ (48ಕ್ಕೆ3) ಕರ್ನಾಟಕ ತಂಡದ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್ ವಿದರ್ಭ: 143.1 ಓವರ್‌ಗಳಲ್ಲಿ 460. ಕರ್ನಾಟಕ: 90.3 ಓವರ್‌ಗಳಲ್ಲಿ 286 (ಆರ್. ಸಮರ್ಥ್ 59, ಹಾರ್ದಿಕ್ ರಾಜ್ 23, ಶರತ್ ಶ್ರೀನಿವಾಸ್ 29, ವೈಶಾಖ ವಿಜಯಕುಮಾರ್ 23, ಉಮೇಶ್ ಯಾದವ್ 54ಕ್ಕೆ2, ಆದಿತ್ಯ ಸರವಟೆ 50ಕ್ಕೆ3, ಯಶ್ ಠಾಕೂರ್ 48ಕ್ಕೆ3) ಎರಡನೇ ಇನಿಂಗ್ಸ್: ವಿದರ್ಭ: 14 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 50 (ಅಥರ್ವ್ ತೈಡೆ ಬ್ಯಾಟಿಂಗ್ 21, ಧ್ರುವ ಶೋರೆ ಬ್ಯಾಟಿಂಗ್ 29)

ಸೆಮಿಗೆ ತಮಿಳುನಾಡು

ಕೋಯಮತ್ತೂರು (ಪಿಟಿಐ): ನಾಯಕ ಆರ್. ಸಾಯಿಕಿಶೋರ್ ಅವರ ಅಮೋಘ ಬೌಲಿಂಗ್ ಬಲದಿಂದ ತಮಿಳುನಾಡು ತಂಡವು ರಣಜಿ ಟ್ರೋಫಿಯ ಎಂಟರ ಘಟ್ಟದ ಪಂದ್ಯದಲ್ಲಿ ಸೌರಾಷ್ಟ್ರ ವಿರುದ್ಧ ಜಯಿಸಿತು. ನಾಲ್ಕರ ಘಟ್ಟಕ್ಕೆ ಪ್ರವೇಶಿಸಿತು.ಪಂದ್ಯದ 3ನೇ ದಿನವಾದ ಭಾನುವಾರ ಇನಿಂಗ್ಸ್ ಮತ್ತು 33 ರನ್‌ಗಳಿಂದ ತಮಿಳುನಾಡು ಜಯಿಸಿತು. ಈ ಬಾರಿಯ ಟೂರ್ನಿಯಲ್ಲಿ ಸೆಮಿ ಹಂತಕ್ಕೆ ಪ್ರವೇಶಿಸಿದ ಮೊದಲ ತಂಡವಾಗಿದೆ.

ಸಂಕ್ಷಿಪ್ತ ಸ್ಕೋರು: ಸೌರಾಷ್ಟ್ರ: ಮೊದಲ ಇನಿಂಗ್ಸ್: 77.1 ಓವರ್‌ಗಳಲ್ಲಿ 183. ತಮಿಳುನಾಡು: 119.4 ಓವರ್‌ಗಳಲ್ಲಿ 338. ಎರಡನೇ ಇನಿಂಗ್ಸ್: ಸೌರಾಷ್ಟ್ರ: 75.4 ಓವರ್‌ಗಳಲ್ಲಿ 122 (ಚೇತೇಶ್ವರ್ ಪೂಜಾರ 46, ಕೆವಿನ್ ಜೀವರಜಿನಿ 27, ಸಂದೀಪ್ ವಾರಿಯರ್ 18ಕ್ಕೆ3, ಆರ್. ಸಾಯಿಕಿಶೋರ್ 27ಕ್ಕೆ4,) ಫಲಿತಾಂಶ: ತಮಿಳುನಾಡು ತಂಡಕ್ಕೆ ಇನಿಂಗ್ಸ್ ಮತ್ತು 33 ರನ್‌ಗಳ ಜಯ. ಸೆಮಿಫೈನಲ್ ಪ್ರವೇಶ.

ಬಿಕೆಸಿ ಮೈದಾನ, ಮುಂಬೈ: ಮೊದಲ ಇನಿಂಗ್ಸ್: 384. ಬರೋಡಾ: 110.3 ಓವರ್‌ಗಳಲ್ಲಿ 348 (ಶಾಶ್ವರ್ ರಾವತ್ 124, ವಿಷ್ಣು ಸೋಳಂಕಿ 136, ಶಮ್ಸ್ ಮುಲಾನಿ 121ಕ್ಕೆ4, ತನುಷ್ ಕೋಟ್ಯಾನ್ 49ಕ್ಕೆ2) ಎರಡನೇ ಇನಿಂಗ್ಸ್: ಮುಂಬೈ 12 ಓವರ್‌ಗಳಲ್ಲಿ 1 ವಿಕೆಟ್‌ಗೆ 21 (ಹಾರ್ದಿಕ್ ತಮೋರೆ ಬ್ಯಾಟಿಂಗ್ 12, ಮೋಹಿತ್ ಅವಸ್ತಿ ಬ್ಯಾಟಿಂಗ್ 3)

ಇಂದೋರ್: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 81.1 ಓವರ್‌ಗಳಲ್ಲಿ 234. ಆಂಧ್ರ: 68.3 ಓವರ್‌ಗಳಲ್ಲಿ 172. ಎರಡನೇ ಇನಿಂಗ್ಸ್: ಮಧ್ಯಪ್ರದೇಶ: 40.5 ಓವರ್‌ಗಳಲ್ಲಿ 107 (ಹಿಮಾಂಶು ಮಂತ್ರಿ 43, ನಿತೀಶ್ ಕುಮಾರ್ ರೆಡ್ಡಿ 28ಕ್ಕೆ4, ಕೆ.ವಿ. ಶಶಿಕಾಂತ್ 20ಕ್ಕೆ3, ಲಲಿತಾ ಮೋಹನ್ 20ಕ್ಕೆ3) ಆಂಧ್ರ: 44 ಓವರ್‌ಗಳಲ್ಲಿ 4ಕ್ಕೆ95 (ಹನುಮವಿಹಾರಿ ಔಟಾಗದೆ 43, ಅನುಭವ್ ಅಗರವಾಲ್ 22ಕ್ಕೆ2)

ಗುಜರಾತ್ ಕರಾವಳಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಸ್ಕೂಬಾ ಡೈವಿಂಗ್‌ನ ವಿವಿಧ ದೃಶ್ಯಗಳು –ಪಿಟಿಐ ಚಿತ್ರ

ಪ್ರಾಚೀನ ದ್ವಾರಕಾ ನಗರದ ದರ್ಶನ ದಿವ್ಯಾನುಭವ ನೀಡಿದೆ: ಮೋದಿ ಬಣ್ಣನೆ

ಪ್ರಧಾನಿ ಸ್ಕೂಬಾ ಡೈವಿಂಗ್ ಸಾಹಸ

ದ್ವಾರಕಾ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಗುಜರಾತ್ ಕರಾವಳಿಯಲ್ಲಿ ಸ್ಕೂಬಾ ಡೈವಿಂಗ್‌ನ ರೋಚಕ ಅನುಭವ ಪಡೆದರು.

ಪಂಚಕುಯಿ ತೀರದಲ್ಲಿರುವ ಬೇಟ್ ದ್ವಾರಕಾ ದ್ವೀಪದ ಬಳಿ ಈ ಸಾಹಸ ಕೈಗೊಂಡ ಅವರು ನೀರಿನಡಿ ಮುಳುಗಿರುವ ಪ್ರಾಚೀನ ದ್ವಾರಕಾ ನಗರದ ಅವಶೇಷಗಳನ್ನು ವೀಕ್ಷಿಸಿದರು.

‘ಪ್ರಾಚೀನ ದ್ವಾರಕಾ ನಗರದಲ್ಲಿ ಪ್ರಾರ್ಥನೆ ಮಾಡುವುದು ದಿವ್ಯ ಅನುಭವ ವಾಗಿತ್ತು. ಪ್ರಾಚೀನ ಯುಗದ ಆಧ್ಯಾತ್ಮಿಕತೆಯೊಂದಿಗೆ ಸಂಪರ್ಕ ಸಾಧಿಸಿದ ಭಾವ ಉಂಟಾಯಿತು. ಭಗವಾನ್ ಶ್ರೀ ಕೃಷ್ಣ ನಮ್ಮೆಲ್ಲರನ್ನು ಆಶೀರ್ವದಿಸಲಿ’ ಎಂದು ಪ್ರಧಾನಿ ತಮ್ಮ ಅನುಭವವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

ನೌಕಾಪಡೆಯ ಡೈವರ್‌ಗಳ ತಂಡ ಸ್ಕೂಬಾ ಡೈವಿಂಗ್‌ನಲ್ಲಿ ಪ್ರಧಾನಿ ಅವರಿಗೆ ನೆರವಾಯಿತು. ‘ಇಲ್ಲಿ ಧೈರ್ಯಕ್ಕಿಂತಲೂ ನಂಬಿಕೆಯೇ ಮುಖ್ಯವಾಗಿತ್ತು’ ಎಂದು ನೀರಿನಿಂದ ಮೇಲೆ ಬಂದ ಬಳಿಕ ಪ್ರಧಾನಿ ಪ್ರತಿಕ್ರಿಯಿಸಿದರು.

‘ನಾನು ಸಮುದ್ರದ ಆಳಕ್ಕೆ ಹೋಗಿ ಪ್ರಾಚೀನ ದ್ವಾರಕಾ ನಗರವನ್ನು ನೋಡಿದೆ. ನೀರಿನಡಿ ಮುಳುಗಿರುವ ದ್ವಾರಕಾ ಬಗ್ಗೆ ಪುರಾತತ್ವ ತಜ್ಞರು ಬಹಳ ಸಂಶೋಧನೆ ನಡೆಸಿದ್ದಾರೆ. ನಮ್ಮ ಗ್ರಂಥಗಳಲ್ಲಿಯೂ ಈ ಬಗ್ಗೆ ಬಹಳಷ್ಟು ಹೇಳಲಾಗಿದೆ. ಭಗವಾನ್ ವಿಶ್ವಕರ್ಮ ಸ್ವತಃ ದ್ವಾರಕಾ ನಗರವನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ ಎಂದು ನುಡಿದರು.

‘ದಶಕಗಳಿಂದ ಕಂಡಿದ್ದ ಕನಸು ಆ ಪುಣ್ಯಸ್ಥಳವನ್ನು ಸ್ಪರ್ಶಿಸುವ ಮೂಲಕ ಈಡೇರಿದೆ. ರೋಮಾಂಚನಗೊಂಡಿದ್ದು, ಭಾವೋದ್ವೇಗಕ್ಕೆ ಒಳಗಾಗಿದ್ದೇನೆ. ನೀರಿನ ಆಳದಲ್ಲಿ ಶ್ರೀಕೃಷ್ಣನಿಗೆ ಶಿರಬಾಗಿ ನಮಸ್ಕರಿಸಿದೆ. ಶ್ರೀಕೃಷ್ಣನಿಗೆ ಅರ್ಪಿಸಲು ನವಿಲು ಗರಿಗಳನ್ನೂ ಕೊಂಡೊಯ್ದಿದ್ದೆ’ ಎಂದರು.

ಪ್ರಧಾನಿ ಅವರು ಇದಕ್ಕೂ ಮುನ್ನ ದ್ವಾರಕಾದಲ್ಲಿರುವ ಶ್ರೀಕೃಷ್ಣ ದೇವಾಲಯದಲ್ಲಿ ಪೂಜೆ ಸಲ್ಲಿಸಿದರು. ದ್ವಾರಕಾ, ಜಾಮ್‌ನಗರ ಮತ್ತು ಪೋರ್‌ಬಂದರ್ ಜಿಲ್ಲೆಗಳಲ್ಲಿ ₹4,100 ಕೋಟಿ ಮೊತ್ತದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ಐದು ‘ಏಮ್ಸ್’ ಉದ್ಘಾಟನೆ: ಪ್ರಧಾನಿ ಅವರು ರಾಜ್‌ಕೋಟ್‌ನಲ್ಲಿ ಸ್ಥಾಪಿಸಿರುವ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು (ಏಮ್ಸ್) ಭಾನುವಾರ ಉದ್ಘಾಟಿಸಿದರು. ಬಠಿಂಡಾ (ಪಂಜಾಬ್), ರಾಯಬರೇಲಿ (ಉತ್ತರ ಪ್ರದೇಶ), ಕಲ್ಯಾಣಿ (ಪಶ್ಚಿಮ ಬಂಗಾಳ) ಮತ್ತು ಮಂಗಳಗಿರಿಯಲ್ಲಿ (ಆಂಧ್ರ ಪ್ರದೇಶ) ಸ್ಥಾಪಿಸಿರುವ ಇತರ ನಾಲ್ಕು ‘ಏಮ್ಸ್’ ಸಂಸ್ಥೆಗಳನ್ನು ವರ್ಚುವಲ್ ಆಗಿ ಉದ್ಘಾಟಿಸಿದರು.

ಅತಿದೊಡ್ಡ ತೂಗುಸೇತುವೆ ಲೋಕಾರ್ಪಣೆ

ಓಖಾ– ಬೇಟ್ ದ್ವಾರಕಾ ದ್ವೀಪಕ್ಕೆ ಸಂಪರ್ಕಕಲ್ಪಿಸುವ ಸುದರ್ಶನ್ ಸೇತು ತೂಗುಸೇತುವೆ –ಪಿಟಿಐ ಚಿತ್ರ

ಪ್ರಧಾನಿ ಮೋದಿ ಅವರು ದೇಶದ ಅತಿದೊಡ್ಡ ತೂಗುಸೇತುವೆ ‘ಸುದರ್ಶನ್ ಸೇತು’ಅನ್ನು ಭಾನುವಾರ ಲೋಕಾರ್ಪಣೆಗೊಳಿಸಿದರು. 2.32 ಕಿ.ಮೀ ಉದ್ದದ ಈ ಸೇತುವೆಯು ಗುಜರಾತ್‌ನ ದ್ವಾರಕಾದ ಓಖಾ ಪ್ರದೇಶದಿಂದ ಬೇಟ್ ದ್ವಾರಕಾ ದ್ವೀಪಕ್ಕೆ ಸಂಪರ್ಕ ಕಲ್ಪಿಸುತ್ತದೆ.

ನಾಲ್ಕು ಪಥಗಳ ಈ ಸೇತುವೆಯನ್ನು ₹ 979 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. 27.20 ಮೀ. ಅಗಲವಿರುವ ಸೇತುವೆಯು ಎರಡೂ ಬದಿಗಳಲ್ಲಿ ತಲಾ 2.50 ಮೀ. ಅಗಲದ ಪಾದಚಾರಿ ಮಾರ್ಗವನ್ನು ಹೊಂದಿದೆ. ಸೇತುವೆಯ ವಿನ್ಯಾಸವೂ ವಿಶೇಷವಾಗಿದ್ದು, ಪಾದಚಾರಿ ಮಾರ್ಗದ ಬದಿಯಲ್ಲಿ ಭಗವದ್ಗೀತೆಯ ಶ್ಲೋಕಗಳು ಮತ್ತು ಶ್ರೀಕೃಷ್ಣನ ಚಿತ್ರಗಳನ್ನು ಬಿಡಿಸಲಾಗಿದೆ.

ಪ್ರಸ್ತುತ, ಬೇಟ್ ದ್ವಾರಕಾದಲ್ಲಿರುವ ದೇವಾಲಯಕ್ಕೆ ಭೇಟಿ ನೀಡುವ ಭಕ್ತರು ಹಗಲಲ್ಲಿ ಮಾತ್ರ ದೋಣಿಯಲ್ಲಿ ಪ್ರಯಾಣಿಸಬಹುದಿತ್ತು. ಸೇತುವೆ ನಿರ್ಮಾಣದ ಕಾರಣ ಭಕ್ತರಿಗೆ ಎಲ್ಲ ಸಮಯದಲ್ಲೂ ದೇವಾಲಯದ ಭೇಟಿ ಸಾಧ್ಯವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮತದಾನದಲ್ಲಿ ಪಾಲ್ಗೊಳ್ಳಿ: ಯುವಜನರಿಗೆ ಮನವಿ

ನವದೆಹಲಿ (ಪಿಟಿಐ): ಮೊದಲ ಬಾರಿಯ ಮತದಾರರು ಮುಂಬರುವ ಲೋಕಸಭಾ ಚುನಾವಣೆಯಲ್ಲಿ ದಾಖಲೆ ಸಂಖ್ಯೆಯಲ್ಲಿ ಮತ ಚಲಾಯಿಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಯುವ ಸಮೂಹಕ್ಕೆ ಭಾನುವಾರ ಮನವಿ ಮಾಡಿಕೊಂಡರು.

‘ಮನದ ಮಾತು’ ರೇಡಿಯೊ ಕಾರ್ಯಕ್ರಮದ 110ನೇ ಸಂಚಿಕೆಯಲ್ಲಿ ಮಾತನಾಡಿದ ಅವರು, ‘ನಿಮ್ಮ ಮೊದಲ ಮತ ಈ ದೇಶಕ್ಕಾಗಿ ಆಗಬೇಕು ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಬಂದು ಮತದಾನ ಮಾಡಿ’ ಎಂದು ಕರೆ ನೀಡಿದರು. ಚುನಾವಣೆಯ ನೀತಿ ಸಂಹಿತೆ ಜಾರಿಯಾಗಲಿರುವ ಕಾರಣ ಮುಂದಿನ ಮೂರು ತಿಂಗಳು ‘ಮನದ ಮಾತು’ ಪ್ರಸಾರವಾಗುವುದಿಲ್ಲ ಎಂದು ಹೇಳಿದರು.

ಜನಪದ ಗಾಯಕ ಸುಗತೇಕರಗೆ ಮೆಚ್ಚುಗೆ

ಬಾಗಲಕೋಟೆ: ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ನಡೆಸಿದ ‘ಮನ್ ಕಿ ಬಾತ್’ ಕಾರ್ಯಕ್ರಮದಲ್ಲಿ ಬಾಗಲಕೋಟೆಯ ಜಾನಪದ ಗಾಯಕ ವೆಂಕಪ್ಪ ಸುಗತೇಕರ ಅವರ ಸೇವೆಯನ್ನು ಕೊಂಡಾಡಿದ್ದಾರೆ.

ಅಸಂಖ್ಯಾತ ಜನರು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ರಕ್ಷಿಸಲು ನಿಸ್ವಾರ್ಥವಾಗಿ ಸೇವೆ ಸಲ್ಲಿಸುತ್ತಿದ್ದು, ಅಂತಹವರಲ್ಲಿ ಸುಗತೇಕರ ಕೂಡ ಒಬ್ಬರು ಎಂದಿದ್ದಾರೆ.

‘ವೆಂಕಪ್ಪ ವಿಶ್ವ ಗಾಯಕರಾಗಿದ್ದು, ಒಂದು ಸಾವಿರಕ್ಕೂ ಅಧಿಕ ಗೋಂದಳಿ (ಜಾನಪದ) ಹಾಡುಗಳನ್ನು ಹಾಡಿದ್ದಾರೆ. ಇದರೊಂದಿಗೆ ಕಥೆಗಳನ್ನೂ ಜನಪ್ರಿಯಗೊಳಿಸಿದ್ದಾರೆ. ಯಾವುದೇ ಶುಲ್ಕ ತೆಗೆದುಕೊಳ್ಳದೆ ನೂರಾರು ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ್ದಾರೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸುಗತೇರಕ ಅವರಿಗೆ ರಾಜ್ಯ ಸರ್ಕಾರವು ಹಿರಿಯ ನಾಗರಿಕ ಪ್ರಶಸ್ತಿ ಪ್ರದಾನ ಮಾಡಿದೆ. ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ. ಅಲ್ಲದೇ ಹಲವು ಪ್ರಶಸ್ತಿಗಳು ಸಂದಿವೆ.

ಸೆಮಿಫೈನಲ್ ನಿರೀಕ್ಷೆಯಲ್ಲಿ ಪಟ್ನಾ–ಡೆಲ್ಲಿ

ಪ್ರೊ ಕಬಡ್ಡಿ ಲೀಗ್: ನಾಲ್ಕರ ಘಟ್ಟ ಪ್ರವೇಶಕ್ಕೆ ಜೈಂಟ್ಸ್– ಸ್ಟೀಲರ್ಸ್ ಪೈಪೋಟಿ

• ವಿಕ್ರಂ ಕಾಂತಿಕೆರೆ

ಹರಿಯಾಣದ ಡಿಫೆಂಡರ್‌ಗಳನ್ನು ಗುಜರಾತ್ ರೇಡರ್‌ಗಳು ಮೀರಿ ನಿಲ್ಲುವರೇ ಎಂಬುದು 2ನೇ ಎಲಿಮಿನೇಟರ್ ಪಂದ್ಯದ ಕುತೂಹಲ

ಹೈದರಾಬಾದ್: ಸತತ 3 ಬಾರಿ ಚಾಂಪಿಯನ್, 3 ಬಾರಿ ಸೆಮಿಫೈನಲ್ ಪ್ರವೇಶ ಮಾಡಿ ಪ್ರೊ ಕಬಡ್ಡಿ ಲೀಗ್‌ನಲ್ಲಿ ಪಟ್ನಾ ಪೈರೇಟ್ಸ್ ಮಿಂಚಿದೆ. ಈ ತಂಡ ಲೀಗ್‌ನ 10ನೇ ಆವೃತ್ತಿಯ ಎಲಿಮಿನೇಟರ್ ಪಂದ್ಯದಲ್ಲಿ ಮಾಜಿ ಚಾಂಪಿಯನ್ ದಬಂಗ್ ಡೆಲ್ಲಿ ಎದುರು ಸೆಣಸಲಿದೆ.

ಗಚ್ಚಿಬೌಲಿಯ ಜಿ.ಎಂ.ಸಿ ಬಾಲಯೋಗಿ ಕ್ರೀಡಾಂಗಣದಲ್ಲಿ ಸೋಮವಾರ ಪಂದ್ಯ ನಡೆಯಲಿದ್ದು, ಮತ್ತೊಂದು ಹಣಾಹಣಿಯಲ್ಲಿ 2 ಬಾರಿಯ ರನ್ನರ್ ಅಪ್ ಗುಜರಾತ್ ಜೈಂಟ್ಸ್ ತಂಡವನ್ನು ಹರಿಯಾಣ ಸ್ಟೀಲರ್ಸ್ ಎದುರಿಸಲಿದೆ.

ಪುಣೇರಿ ಪಲ್ಟನ್ ಮತ್ತು ಜೈಪುರ ಪಿಂಕ್ ಪ್ಯಾಂಥರ್ಸ್ ಈಗಾಗಲೇ ಸೆಮಿಫೈನಲ್ ಪ್ರವೇಶಿಸಿದ್ದು, ಮೊದಲ ಎಲಿಮಿನೇಟರ್‌ನಲ್ಲಿ ಗೆದ್ದ ತಂಡ ಪುಣೇರಿ ವಿರುದ್ಧ ಮತ್ತು 2ನೇ ಎಲಿಮಿನೇಟರ್‌ನ ವಿಜೇತ ತಂಡ ಹಾಲಿ ಚಾಂಪಿಯನ್ ಜೈಪುರ್ ವಿರುದ್ಧ ಸೆಣಸಲಿದೆ.

ಲೀಗ್ ಹಂತದಲ್ಲಿ ಪಟ್ನಾ ಎದುರಿನ ಮೊದಲ ಪಂದ್ಯದಲ್ಲಿ ಡೆಲ್ಲಿ ಜಯ ಗಳಿಸಿದ್ದು 2ನೇ ಪಂದ್ಯ ಟೈ ಆಗಿತ್ತು. ನಾಯಕರಾದ ಆಶು ಮಲಿಕ್ ಮತ್ತು ಸಚಿನ್ ಕ್ರಮವಾಗಿ ಡೆಲ್ಲಿ ಮತ್ತು ಪಟ್ನಾ ತಂಡಗಳ ಭರವಸೆ. ಆಶು ಈ ಬಾರಿ ಒಟ್ಟು 257 ಪಾಯಿಂಟ್ ಕಲೆ ಹಾಕಿದ್ದರೆ, ಡು ಆರ್ ಡೈ ರೈಡ್‌ಗಳಲ್ಲಿ ಮಿಂಚಿರುವ ಸಚಿನ್ 157 ಪಾಯಿಂಟ್ ಗಳಿಸಿದ್ದಾರೆ. ಟ್ಯಾಕ್ಲಿಂಗ್‌ನಲ್ಲಿ ಡೆಲ್ಲಿ ತಂಡ ಯೋಗೇಶ್ ದತ್ತ ಮೇಲೆ ನಿರೀಕ್ಷೆ ಇರಿಸಿಕೊಂಡಿದೆ. ಪಟ್ನಾದ ರಕ್ಷಣಾ ವಿಭಾಗಕ್ಕೆ ಕೃಷನ್ ಆಸರೆ. ಆಲ್‌ರೌಂಡರ್ ಅಂಕಿತ್ ಬಲವೂ ತಂಡಕ್ಕೆ ಇದೆ.

ಜೈದೀಪ್–ಫಜಲ್ ಆಕರ್ಷಣೆ: ಗುಜರಾತ್ ಮತ್ತು ಹರಿಯಾಣ ತಂಡಗಳು ಲೀಗ್ ಹಂತದ ಕೊನೆಯ ಪಂದ್ಯಗಳಲ್ಲಿ ಸೋತು ಇಲ್ಲಿಗೆ ಬಂದಿವೆ. ಉಭಯ ತಂಡಗಳು ಮುಖಾಮುಖಿಯಾದ ಪಂದ್ಯಗಳಲ್ಲಿ ಹರಿಯಾಣ ಮೇಲುಗೈ ಸಾಧಿಸಿತ್ತು.

ಎರಡೂ ತಂಡಗಳನ್ನು ಡಿಫೆಂಡರ್‌ಗಳು ಮುನ್ನಡೆಸುತ್ತಿದ್ದಾರೆ. ಗುಜರಾತ್ ನಾಯಕ ಫಜಲ್ ಅತ್ರಾಚಲಿ ಈ ಬಾರಿ ಟ್ಯಾಕ್ಲಿಂಗ್‌ನಲ್ಲಿ 62 ಪಾಯಿಂಟ್ ಕಲೆ ಹಾಕಿದ್ದರೆ ಹರಿಯಾಣ ನಾಯಕ ಜೈದೀಪ್ ದಹಿಯಾ 67 ಟ್ಯಾಕಲ್ ಪಾಯಿಂಟ್ ಗಳಿಸಿದ್ದಾರೆ.

ಗುಜರಾತ್‌ಗೆ ರೈಡಿಂಗ್ ವಿಭಾಗದಲ್ಲಿ ಪ್ರತೀಕ್ ದಹಿಯಾ ಮತ್ತು ಆಲ್‌ರೌಂಡರ್ ರೋಹಿತ್ ಗುಲಿಯಾ ಭರವಸೆಯಾಗಿದ್ದಾರೆ. ಡು ಆರ್ ಡೈ ರೈಡಿಂಗ್‌ನಲ್ಲಿ ಪಳಗಿರುವ ವಿನಯ್, ಸ್ಟೀಲರ್ಸ್‌ಗೆ ಏನು ಕೊಡುಗೆ ನೀಡುತ್ತಾರೆ ಎಂಬ ಕುತೂಹಲವೂ ಗರಿಗೆದರಿದೆ.

ಎಲಿಮಿನೇಟರ್ ಹಣಾಹಣಿ

ದಬಂಗ್ ಡೆಲ್ಲಿ–ಪಟ್ನಾ ಪೈರೇಟ್ಸ್
ಸಮಯ: ರಾತ್ರಿ 8.00

ಗುಜರಾತ್ ಜೈಂಟ್ಸ್–ಹರಿಯಾಣ ಸ್ಟೀಲರ್ಸ್
ಸಮಯ: ರಾತ್ರಿ 9.00

ಸ್ಥಳ: ಗಚ್ಚಿಬೌಲಿ, ಹೈದರಾಬಾದ್

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಸ್ನಿ+ಹಾಟ್‌ಸ್ಟಾರ್

ಪ್ರೊ ಕಬಡ್ಡಿಯಲ್ಲಿ ಬಲಾಬಲ

ದಬಂಗ್ ಡೆಲ್ಲಿ–ಪಟ್ನಾ ಪೈರೇಟ್ಸ್	
ಪಂದ್ಯಗಳು	19
ದಬಂಗ್ ಡೆಲ್ಲಿ ಜಯ	9
ಪಟ್ನಾ ಪೈರೇಟ್ಸ್ ಜಯ	8
ಟೈ	2

ಗುಜರಾತ್ ಜೈಂಟ್ಸ್–ಹರಿಯಾಣ ಸ್ಟೀಲರ್ಸ್	
ಪಂದ್ಯಗಳು	14
ಹರಿಯಾಣ ಸ್ಟೀಲರ್ಸ್ ಜಯ	9
ಗುಜರಾತ್ ಜೈಂಟ್ಸ್ ಜಯ	4
ಟೈ	1

ಲೀಗ್ ಹಂತದಲ್ಲಿ 4 ತಂಡಗಳ ಏಳು–ಬೀಳು

ತಂಡಗಳು	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್ಸ್	ಸ್ಥಾನ
ದಬಂಗ್ ಡೆಲ್ಲಿ	22	13	6	3	79	3
ಗುಜರಾತ್ ಜೈಂಟ್ಸ್	22	13*	9	-	70	4
ಹರಿಯಾಣ ಸ್ಟೀಲರ್ಸ್	22	13*	8	1	70	5
ಪಟ್ನಾ ಪೈರೇಟ್ಸ್	22	11	8	3	69	6

(*ಒಟ್ಟು ಸ್ಕೋರ್ ಆಧಾರದಲ್ಲಿ ಸ್ಥಾನ ನಿರ್ಣಯ)

ಚೆಸ್: ಜೀವಿತೇಶ್‌ಗೆ ಪ್ರಶಸ್ತಿ

ಬೆಂಗಳೂರು: ಅಜೇಯ ಸಾಧನೆ ಪ್ರದರ್ಶಿಸಿದ ಇಂಟರ್‌ನ್ಯಾಷನಲ್ ಮಾಸ್ಟರ್ ಸಾಯಿ ಅಗ್ನಿ ಜೀವಿತೇಶ್ ಅವರು ಶನಿವಾರ ನಗರದಲ್ಲಿ ನಡೆದ ಬೋಧಿರೆಡ್ಡಿ ಕರ್ನಾಟಕ ರಾಜ್ಯ ಓಪನ್ ರ‍್ಯಾಪಿಡ್ ಚೆಸ್ ಟೂರ್ನಿಯ ಓಪನ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಅವರು ಏಳು ಸುತ್ತುಗಳಿಂದ 6.5 ಪಾಯಿಂಟ್ಸ್ (ಆರು ಗೆಲುವು, ಒಂದು ಡ್ರಾ) ಸಂಗ್ರಹಿಸಿದರು.

₹30,000 ನಗದು ಮತ್ತು ಟ್ರೋಫಿ ಸಾಯಿ ಅಗ್ನಿ ಜೀವಿತೇಶ್ ಅವರ ಪಾಲಾಯಿತು. ಎಂಟನೇ ಶ್ರೇಯಾಂಕದ ಸಾತ್ವಿಕ್ ಅಡಿಗ ಆರು ಪಾಯಿಂಟ್ಸ್ ಸಂಗ್ರಹಿಸಿ ರನ್ನರ್ ಅಪ್ ಸ್ಥಾನ ಪಡೆದರು. ಅವರು ₹25,000 ನಗದು ಪಡೆದರು.

ರೋಟರಿ ಬೆಂಗಳೂರು ಇಂದಿರಾ ನಗರ ಮತ್ತು ರೋಟರಿ ಬೆಂಗಳೂರು ದಿಶಾ ಈ ಟೂರ್ನಿಯನ್ನು ನಗರ ಜಿಲ್ಲಾ ಚೆಸ್ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದವು. ಎ. ಆಗಸ್ಟಿನ್, ಎ.ಬಾಲಕಿಶನ್, ಕೃಷ್ಣ, ಅಪೂರ್ವ ಕಾಂಬ್ಳೆ (ತಲಾ 5.5) ಮೂರರಿಂದ ಆರವರೆಗಿನ ಸ್ಥಾನಗಳನ್ನು ಪಡೆದರು.

ದೆಹಲಿ ಮ್ಯಾರಥಾನ್: ಗೋಪಿಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಮಾಜಿ ಏಷ್ಯಾ ಚಾಂಪಿಯನ್ ಗೋಪಿ ಥೋಂಕಾಲ್ ಅವರು ಭಾನುವಾರ ನವದೆಹಲಿ ಮ್ಯಾರಥಾನ್ ಗೆದ್ದರು. ಆದರೆ, ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಅವರಿಗೆ ಸಾಧ್ಯವಾಗಲಿಲ್ಲ.

2017ರಲ್ಲಿ ಏಷ್ಯನ್ ಮ್ಯಾರಥಾನ್ ಪ್ರಶಸ್ತಿ ಗೆದ್ದಿದ್ದ 35 ವರ್ಷದ ಗೋಪಿ, ಪ್ಯಾರಿಸ್ ಕ್ರೀಡಾಕೂಟದ ಅರ್ಹತಾ ಸಮಯ (2:08:10) ಹೊರತಾಗಿಯೂ 42.195 ಕಿ.ಮೀ ದೂರವನ್ನು 2 ಗಂಟೆ, 14 ನಿಮಿಷ, 40 ಸೆಕೆಂಡುಗಳಲ್ಲಿ ಕ್ರಮಿಸಿ ಪುರುಷರ ಎಲೈಟ್ ರೇಸ್‌ನಲ್ಲಿ ಚಿನ್ನದ ಪದಕ ಗೆದ್ದರು.

2021ರ ಆವೃತ್ತಿಯ ಪ್ರಶಸ್ತಿ ಗೆದ್ದ ಶ್ರೀನು ಬುಗಾಥಾ 2: 14: 41 ಸಮಯದಲ್ಲಿ ಎರಡನೇ ಸ್ಥಾನ ಪಡೆದರೆ, ಅಕ್ಷಯ್ ಸೈನಿ 2: 15: 27ರಲ್ಲಿ ಕ್ರಮಿಸಿ ಮೂರನೇ ಸ್ಥಾನ ಪಡೆದರು. ಮಹಿಳೆಯರ ಎಲೈಟ್ ರೇಸ್‌ನಲ್ಲಿ ಅಶ್ವಿನಿ ಮದನ್ ಜಾಧವ್ (2:52:25) ಮೊದಲ ಸ್ಥಾನ, ಠಾಕೂರ್ ನಿರ್ಮಾಬೆನ್ ಭರತ್ ಜೀ (2:55:47) ಮತ್ತು ದಿವ್ಯಾಂಕಾ ಚೌಧರಿ (2:57:06) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಪ್ರೊ ಲೀಗ್ ಹಾಕಿ: ಭಾರತಕ್ಕೆ ಸುಲಭ ಜಯ

ರೂರ್ಕೆಲಾ (ಪಿಟಿಐ): ಸಾಂಘಿಕ ಆಟ ಪ್ರದರ್ಶಿಸಿದ ಭಾರತ ಪುರುಷರ ಹಾಕಿ ತಂಡವು ಪ್ರೊ ಲೀಗ್ ಟೂರ್ನಿಯಲ್ಲಿ ಭಾನುವಾರ ಐರ್ಲೆಂಡ್ ವಿರುದ್ಧ 4–0 ಯಿಂದ ಸುಲಭ ಜಯ ಸಾಧಿಸಿತು.

ಭಾರತದ ನೀಲಕಂಠ ಶರ್ಮಾ (14ನೇ ನಿಮಿಷ), ಆಕಾಶದೀಪ್ ಸಿಂಗ್ (15ನೇ ನಿ), ಗುರ್ಜಂತ್ ಸಿಂಗ್ (38ನೇ ನಿ) ಮತ್ತು ಜುಗ್ರಾಜ್ ಸಿಂಗ್ (60ನೇ ನಿ) ಗೋಲು ಗಳಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ನೆದರ್ಲೆಂಡ್ಸ್ ತಂಡವು 5–3ರಿಂದ ಆಸ್ಟ್ರೇಲಿಯಾ ವಿರುದ್ಧ ಜಯಿಸಿತು.

ಅಂಧರ ಕ್ರಿಕೆಟ್: ಭಾರತಕ್ಕೆ ಗೆಲುವು

ದುಬೈ (ಪಿಟಿಐ): ಸುನಿಲ್ ರಮೇಶ್ ಮತ್ತು ಅಜಯ್ ಕುಮಾರ್ ರೆಡ್ಡಿ ಅವರ ಅರ್ಧಶತಕಗಳ ಬಲದಿಂದ ಭಾರತ ತಂಡವು ಭಾನುವಾರ ಇಲ್ಲಿ ನಡೆದ ಅಂಧರ ಫ್ರೆಂಡ್‌ಷಿಪ್ ಟಿ–20 ಕ್ರಿಕೆಟ್ ಸರಣಿಯ ಮೂರನೇ ಪಂದ್ಯದಲ್ಲಿ ಎಂಟು ವಿಕೆಟ್‌ಗಳಿಂದ ಪಾಕಿಸ್ತಾನವನ್ನು ಮಣಿಸಿ, ಸರಣಿಯನ್ನು 2–1ರಿಂದ ಗೆದ್ದುಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ತಂಡವು ಮೊಹಮ್ಮದ್ ಸಲ್ಮಾನ್ (74 ರನ್, 39ಎ) ಅವರ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಿಗೆ 9 ವಿಕೆಟ್‌ಗೆ 193 ರನ್ ಗಳಿಸಿತು. ಬೌಲಿಂಗ್‌ನಲ್ಲಿ ಭಾರತದ ನಾಯಕ ಟಿ. ದುರ್ಗಾ ರಾವ್ ಮೂರು ವಿಕೆಟ್ ಪಡೆದು ಮಿಂಚಿದರು. ಭಾರತ ತಂಡವು ಇನ್ನೂ ಎಂಟು ಎಸೆತ ಬಾಕಿ ಇರುವಂತೆ ಎರಡು ವಿಕೆಟ್‌ಗೆ 196 ರನ್ ಗಳಿಸಿತು. ಸುನಿಲ್ ಮತ್ತು ಅಜಯ್ ಕ್ರಮವಾಗಿ 64 ಮತ್ತು 66 ರನ್ ಗಳಿಸಿ ಗೆಲುವಿಗೆ ಕಾಣಿಕೆ ನೀಡಿದರು.

RESPECTFUL HOMAGE
DOB: 05.09.1936 | DOD: 25.02.2024
Sri M. Varada Raju
Our Beloved Founder Trustee
Sri Krishnadevaraya Educational Trust
Bengaluru - 560 080
Deeply Mourned by
Board of Trustees of Sri KET
Principals, Staff & Students of
Sir MVIT, KCDS & SMVSA

ಜಯದ ಸನಿಹ ರೋಹಿತ್ ಬಳಗ

ರಾಂಚಿ ಟೆಸ್ಟ್: ಅಶ್ವಿನ್, ಕುಲದೀಪ್ ಸ್ಪಿನ್ ಮೋಡಿ • ಧ್ರುವ ಅಮೋಘ ಬ್ಯಾಟಿಂಗ್

ಪ್ರಜಾವಾಣಿ ವಾರ್ತೆ

ವಿಕೆಟ್ ಗಳಿಸಿದ ಸಂಭ್ರಮದಲ್ಲಿ ಭಾರತದ ಬೌಲರ್ ಆರ್. ಅಶ್ವಿನ್ –ಪಿಟಿಐ ಚಿತ್ರ

ರಾಂಚಿ: ಭಾರತದ ಸ್ಪಿನ್ ಬೌಲರ್‌ಗಳು ಇಲ್ಲಿ ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದ ಚಿತ್ರಣವನ್ನೇ ಸಂಪೂರ್ಣವಾಗಿ ತಿರುವುಮುರುವು ಮಾಡಿದರು.

ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ಗಳಿಸಿದ್ದ ಇಂಗ್ಲೆಂಡ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ ಅಲ್ಪಮೊತ್ತಕ್ಕೆ ಕುಸಿಯಲು ಆರ್. ಅಶ್ವಿನ್ (51ಕ್ಕೆ5) ಮತ್ತು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ (22ಕ್ಕೆ4) ಕಾರಣರಾದರು.

ಇದರಿಂದಾಗಿ ಪಂದ್ಯದ ಮೂರನೇ ದಿನವಾದ ಭಾನುವಾರ ಇಂಗ್ಲೆಂಡ್ ತಂಡವು ಭಾರತಕ್ಕೆ 192 ರನ್‌ಗಳ ಗೆಲುವಿನ ಗುರಿ ನೀಡಿದೆ. ದಿನದಾಟದ ಅಂತ್ಯಕ್ಕೆ ಆತಿಥೇಯ ತಂಡವು 8 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 40 ರನ್ ಗಳಿಸಿದೆ. ರೋಹಿತ್ ಶರ್ಮಾ (ಬ್ಯಾಟಿಂಗ್ 24) ಮತ್ತು ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 16) ಕ್ರೀಸ್‌ನಲ್ಲಿದ್ದಾರೆ. ಪಂದ್ಯದಲ್ಲಿ ಇನ್ನೂ ಎರಡು ದಿನಗಳಿದ್ದು ಭಾರತದ ಗೆಲುವಿಗೆ 152 ರನ್‌ಗಳ ಅಗತ್ಯವಿದೆ.

ಇಂಗ್ಲೆಂಡ್ ತಂಡವು ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 353 ರನ್‌ಗಳಿಗೆ ಉತ್ತರವಾಗಿ ದೊಡ್ಡ ಹಿನ್ನಡೆ ಅನುಭವಿಸುವ ಆತಂಕವನ್ನು ಭಾರತ ತಂಡ ಎದುರಿಸಿತ್ತು. ಆದರೆ ಧ್ರುವ ಜುರೇಲ್ (90; 149ಎ, 4X6, 6X4) ಮತ್ತು ನುರಿತ ಬ್ಯಾಟರ್‌ನಂತೆ ಆಡಿದ ಕುಲದೀಪ್ ಯಾದವ್ (28; 131ಎ) ಎಂಟನೆ ವಿಕೆಟ್ ಜೊತೆಯಾಟದಲ್ಲಿ 76 ರನ್ ಸೇರಿಸಿದರು.

ಇದರಿಂದಾಗಿ ತಂಡವು 103.2 ಓವರ್‌ಗಳಲ್ಲಿ 307 ರನ್ ಗಳಿಸಿತು. ತಮ್ಮ ಇನಿಂಗ್ಸ್ ಉದ್ದಕ್ಕೂ ಶಾಂತಚಿತ್ತದಿಂದ ಆಡಿದ ಜುರೇಲ್ ಉತ್ತಮ ಕೌಶಲ ತೋರಿದರು. ಕೊನೆಯವರಾಗಿ ಔಟಾದರು. ಟಾಮ್ ಹಾರ್ಟ್ಲಿ ಸ್ಪಿನ್ ಎಸೆತವನ್ನು ಅಂದಾಜಿಸುವಲ್ಲಿ ಎಡವಿದ ಅವರು ಕೇವಲ ಹತ್ತು ರನ್‌ಗಳಿಂದ ತಮ್ಮ ಚೊಚ್ಚಲ ಶತಕವನ್ನು ತಪ್ಪಿಸಿಕೊಂಡರು.

ಅಶ್ವಿನ್–ಕುಲದೀಪ್ ಜೊತೆಯಾಟ: 46 ರನ್‌ಗಳ ಅಲ್ಪ ಮುನ್ನಡೆ ಗಳಿಸಿದ ಪ್ರವಾಸಿ ತಂಡದ ಬ್ಯಾಟಿಂಗ್ ಪಡೆ ತನ್ನ ಎರಡನೇ ಇನಿಂಗ್ಸ್‌ನಲ್ಲಿ ಕುಸಿಯಿತು.

ಟೆಸ್ಟ್ ಕ್ರಿಕೆಟ್‌ನಲ್ಲಿ 35ನೇ ಸಲ ಐದು ವಿಕೆಟ್ ಗೊಂಚಲು ಗಳಿಸಿದ ಸಾಧನೆ ಮಾಡಿದ ಅಶ್ವಿನ್ ಹಾಗೂ ಕುಲದೀಪ್ ಇಬ್ಬರೂ ಜೊತೆಗೂಡಿ ಒಟ್ಟು ಒಂಬತ್ತು ವಿಕೆಟ್‌ಗಳನ್ನು ಕಬಳಿಸಿದರು.

ಇಂಗ್ಲೆಂಡ್ ತಂಡವು 53.5 ಓವರ್‌ಗಳಲ್ಲಿ 145 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ಗಳಿಸಿದ್ದ ರೂಟ್ ಇಲ್ಲಿ ಕೇವಲ 11 ರನ್ ಗಳಿಸಿದರು. ಅವರೂ ಸೇರಿದಂತೆ ಐವರು ಪ್ರಮುಖ ಬ್ಯಾಟರ್‌ಗಳನ್ನು ಅಶ್ವಿನ್ ಹೆಡೆಮುರಿ ಕಟ್ಟಿದರು.

ರಾಂಚಿಯ ಪಿಚ್ ಇಡೀ ದಿನ ಸ್ಪಿನ್ನರ್‌ಗಳಿಗೇ ಹೆಚ್ಚು ನೆರವು ನೀಡಿತು. ಇಂಗ್ಲೆಂಡ್‌ನ ಆಫ್‌ಸ್ಪಿನ್ನರ್ ಶೋಯಬ್ ಬಷೀರ್ (119ಕ್ಕೆ5) ಮತ್ತು ಟಾಮ್ ಹಾರ್ಟ್ಲಿ (68ಕ್ಕೆ3) ಮಿಂಚಿದರು. ಅದರಿಂದಾಗಿ ಇನಿಂಗ್ಸ್‌ನಲ್ಲಿ ಅಲ್ಪ ಮುನ್ನಡೆ ಗಳಿಸಿದ ಭಾರತ ತಂಡವು ದೃತಿಗೆಡದೇ ತಿರುಗೇಟು ನೀಡಿದ್ದು ತನ್ನ ಸ್ಪಿನ್ ಬಲದ ಮೂಲಕವೇ ಎಂಬುದು ವಿಶೇಷ.

ನಾಲ್ಕನೇ ದಿನದಾಟದ ಬೆಳಗಿನ ಅವಧಿಯು ಮಹತ್ವದ್ದಾಗಿದ್ದು ಭಾರತದ ಬ್ಯಾಟರ್‌ಗಳು ಎಚ್ಚರಿಕೆಯಿಂದ ಆಡದೇ ಹೋದರೆ ಇಂಗ್ಲೆಂಡ್ ತಂಡದ ಪ್ರತಿಭಾನ್ವಿತ ಸ್ಪಿನ್ನರ್‌ಗಳ ಮುಂದೆ ಸಣ್ಣ ಗುರಿಯೂ ಕಠಿಣ ಸವಾಲಾಗಬಹುದು.

‘ಹೀರೊನಂತೆ ವರ್ತಿಸ ಬೇಡ’

ರಾಂಚಿ (ಪಿಟಿಐ): ಭಾನುವಾರದ ಆಟದಲ್ಲಿ ಎರಡು ಅಮೋಘ ಕ್ಯಾಚ್‌ಗಳನ್ನು ಪಡೆದ ಭಾರತದ ಸರ್ಫರಾಜ್ ಖಾನ್ ಮಿಂಚಿದರು.

ಆದರೆ ಕ್ಲೋಸ್ ಇನ್ ಫೀಲ್ಡಿಂಗ್ ಪೊಸಿಷನ್‌ನಲ್ಲಿ ನಿಂತ ಸಂದರ್ಭದಲ್ಲಿ ಹೆಲ್ಮೆಟ್ ಧರಿಸದ ಕಾರಣಕ್ಕೆ ನಾಯಕ ರೋಹಿತ್ ಶರ್ಮಾ ಅವರ ಕೆಂಗಣ್ಣಿಗೆ ಗುರಿಯಾದರು.

‘ಏ ತಮ್ಮಾ; ಹೀರೊ ತರ ವರ್ತಿಸಬೇಡ. ಹೆಲ್ಮೆಟ್ ಹಾಕಿಕೊ‘ ಎಂದು ರೋಹಿತ್ ಅವರು ಸರ್ಫರಾಜ್ ಅವರನ್ನು ಗದರಿದ್ದು ಸ್ಟಂಪ್ ಮೈಕಿನಲ್ಲಿ ದಾಖಲಾಗಿದೆ. ಆಗ ತಂಡದ ಡ್ರೆಸ್ಸಿಂಗ್ ರೂಮ್‌ನಿಂದ ಹೆಲ್ಮೆಟ್ ತರಿಸಿ ಧರಿಸಿಕೊಂಡ ಸರ್ಫರಾಜ್ ಫೀಲ್ಡಿಂಗ್ ಮಾಡಿದರು.

ಈ ಸನ್ನಿವೇಶವನ್ನು ದೆಹಲಿಯ ಸಂಚಾರಿ ಪೊಲೀಸರು ಹೆಲ್ಮೆಟ್ ಮಹತ್ವದ ಕುರಿತು ಜಾಗೃತಿ ಮೂಡಿಸುವ ಜಾಹೀರಾತು ನಿರ್ಮಿಸಿದ್ದಾರೆ. ‘ದ್ವಿಚಕ್ರ ವಾಹನ ಸವಾರರು ಹೀರೊ ತರ ವರ್ತಿಸಬಾರದು. ಹೆಲ್ಮೆಟ್ ಹಾಕಿಕೋಬೇಕು’ ಎಂಬ ಸಂದೇಶದ ಜಾಹೀರಾತು ಸಾಮಾಜಿಕ ಜಾಲತಾಣದಲ್ಲಿ ಜನಪ್ರಿಯವಾಗುತ್ತಿದೆ.

ಕುಂಬ್ಳೆ ದಾಖಲೆ ಸರಿಗಟ್ಟಿದ ಅಶ್ವಿನ್

ಟೆಸ್ಟ್ ಕ್ರಿಕೆಟ್‌ನಲ್ಲಿ 35ನೇ ಬಾರಿಗೆ ಐದು ವಿಕೆಟ್ ಗೊಂಚಲು ಗಳಿಸಿದ ಅಶ್ವಿನ್ ಅವರು ಅನಿಲ್ ಕುಂಬ್ಳೆ ದಾಖಲೆಯನ್ನು ಸಮಗಟ್ಟಿದರು.

ಲೆಗ್‌ಸ್ಪಿನ್ನರ್ ಕುಂಬ್ಳೆ 132 ಪಂದ್ಯಗಳಲ್ಲಿ 35 ಬಾರಿ ಐದು ವಿಕೆಟ್ ಸಾಧನೆ ಮಾಡಿದ್ದರು. ಅಶ್ವಿನ್ 99 ಪಂದ್ಯಗಳಲ್ಲಿ ಈ ಸಾಧನೆ ಮಾಡಿದ್ದಾರೆ.

ಶ್ರೀಲಂಕಾದ ಮುತ್ತಯ್ಯ ಮುರಳೀಧರನ್ 67 ಬಾರಿ ಈ ಐದರ ಗೊಂಚಲು ಗಳಿಸಿದ್ದಾರೆ. ಆಸ್ಟ್ರೇಲಿಯಾದ ಶೇನ್ ವಾರ್ನ್ (37) ಮತ್ತು ನ್ಯೂಜಿಲೆಂಡ್‌ನ ರಿಚರ್ಡ್ ಹ್ಯಾಡ್ಲಿ (36) ಅವರ ನಂತರದ ಸ್ಥಾನದಲ್ಲಿ ಅಶ್ವಿನ್ ಇದ್ದಾರೆ.

ಇದೇ ವೇಳೆ ರೋಹಿತ್ ಶರ್ಮಾ ಟೆಸ್ಟ್ ಕ್ರಿಕೆಟ್‌ನಲ್ಲಿ 4,000 ರನ್ ಗಡಿ ದಾಟಿದರು. 58 ಪಂದ್ಯಗಳಲ್ಲಿ (100 ಇನಿಂಗ್ಸ್) ಈ ಸಾಧನೆ ಮಾಡಿದರು.

‘ಅಶ್ವಿನ್ ನೂರನೇ ಟೆಸ್ಟ್: ನಾಯಕತ್ವ ವಹಿಸಲಿ’

ಧರ್ಮಶಾಲಾದಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರ ವೃತ್ತಿಜೀವನದ ನೂರನೇ ಪಂದ್ಯವಾಗಿದೆ.

ಆ ಪಂದ್ಯದಲ್ಲಿ ಭಾರತ ತಂಡವನ್ನು ಮುನ್ನಡೆಸುವ ಗೌರವವನ್ನು ಅಶ್ವಿನ್ ಅವರಿಗೆ ರೋಹಿತ್ ಶರ್ಮಾ ನೀಡಬೇಕು ಎಂದು ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಸಲಹೆ ನೀಡಿದ್ದಾರೆ.

‘ಧರ್ಮಶಾಲಾದಲ್ಲಿ ಸರಣಿಯ ಐದನೇ ಪಂದ್ಯವು ನಡೆಯಲಿದೆ. ನಾಯಕ ರೋಹಿತ್ ಶರ್ಮಾ ಅವರು ಅಶ್ವಿನ್‌ಗೆ ತಂಡವನ್ನು ಮುನ್ನಡೆಸುವ ಅವಕಾಶವನ್ನು ನೀಡಬೇಕು ಅದೊಂದು ದೊಡ್ಡ ಗೌರವ ನೀಡಿದಂತಾಗಲಿದೆ’ ಎಂದು ಗಾವಸ್ಕರ್ ಜಿಯೊ ಸಿನೆಮಾದೊಂದಿಗೆ ಮಾತನಾಡುವಾಗ ಹೇಳಿದರು.

ಸ್ಕೋರ್ ಕಾರ್ಡ್

ಇಂಗ್ಲೆಂಡ್: 353 (104.5 ಓವರ್) ಭಾರತ: 307 (103.2 ಓವರ್) (ಶನಿವಾರ: 7ಕ್ಕೆ 219)
ಧ್ರುವ ಬಿ ಹಾರ್ಟ್ಲಿ 90 (149ಎ, 4x6, 6x4)
ಕುಲದೀಪ್ ಬಿ ಆ್ಯಂಡರ್ಸನ್ 28 (131ಎ, 4x2)
ಆಕಾಶ್ ಎಲ್‌ಬಿಡಬ್ಲ್ಯು ಬಷೀರ್ 9 (29ಎ, 6x1)
ಮೊಹಮ್ಮದ್ ಸಿರಾಜ್ ಔಟಾಗದೆ 0 (6ಎ)
ಇತರೆ: 23 (ಬೈ 12, ಲೆಗ್‌ಬೈ 5, ನೋಬಾಲ್ 6)
ವಿಕೆಟ್ ಪತನ: 8-253 (ಕುಲದೀಪ್ ಯಾದವ್; 88.3), 9-293 (ಆಕಾಶ್ ದೀಪ್; 100.6), 10-307 (ಧ್ರುವ ಜುರೇಲ್; 103.2)
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 18–4–48–2; ಓಲಿ ರಾಬಿನ್ಸನ್ 13–0–54–0; ಶೋಯೆಬ್ ಬಷೀರ್ 44–8–119–5; ಟಾಮ್ ಹಾರ್ಟ್ಲಿ 27.2–6–68–3; ಜೋ ರೂಟ್ 1–0–1–0
ಎರಡನೇ ಇನಿಂಗ್ಸ್: ಇಂಗ್ಲೆಂಡ್ 145 (53.5 ಓವರ್)
ಕ್ರಾಲಿ ಬಿ ಕುಲದೀಪ್ 60 (91ಎ, 4x7)
ಡಕೆಟ್ ಸಿ ಸರ್ಫರಾಜ್ ಬಿ ಅಶ್ವಿನ್ 15 (15ಎ, 4x2)
ಪೋಪ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 0 (1ಎ)
ರೂಟ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 11 (34ಎ)
ಜಾನಿ ಸಿ ಪಾಟೀದಾರ್ ಬಿ ಜಡೇಜ 30 (42ಎ, 4x3)
ಸ್ಟೋಕ್ಸ್ ಬಿ ಕುಲದೀಪ್ 4 (13ಎ)
ಫೋಕ್ಸ್ ಸಿ ಮತ್ತು ಬಿ ಅಶ್ವಿನ್ 17 (76ಎ)
ಟಾಮ್ ಸಿ ಸರ್ಫರಾಜ್ ಬಿ ಕುಲದೀಪ್ 7 (25ಎ, 6x1)
ರಾಬಿನ್ಸನ್ ಎಲ್‌ಬಿಡಬ್ಲ್ಯು ಕುಲದೀಪ್ 0 (3ಎ)
ಶೋಯೆಬ್ ಬಷೀರ್ ಔಟಾಗದೆ 1 (20ಎ)
ಆ್ಯಂಡರ್ಸನ್ 0 (3ಎ)
ಇತರೆ: 0
ವಿಕೆಟ್ ಪತನ: 1-19 (ಬೆನ್ ಡಕೆಟ್; 4.5), 2-19 (ಓಲಿ ಪೋಪ್, 4.6), 3-65 (ಜೋ ರೂಟ್; 16.6), 4-110 (ಜ್ಯಾಕ್ ಕ್ರಾಲಿ; 28.1), 5-120 (ಬೆನ್ ಸ್ಟೋಕ್ಸ್; 32.3), 6-120 (ಜಾನಿ ಬೆಸ್ಟೊ; 33.1), 7-133 (ಟಾಮ್ ಹಾರ್ಟ್ಲಿ; 40.3), 8-133 (ಓಲಿ ರಾಬಿನ್ಸನ್; 40.6), 9-145 (ಬೆನ್ ಸ್ಟೋಕ್ಸ್; 53.2), 10-145 (ಜೇಮ್ಸ್ ಆ್ಯಂಡರ್ಸನ್; 53.5)
ಬೌಲಿಂಗ್: ರವಿಚಂದ್ರನ್ ಅಶ್ವಿನ್ 15.5–0–51–5; ರವೀಂದ್ರ ಜಡೇಜ 20–5–56–1; ಮೊಹಮ್ಮದ್ ಸಿರಾಜ್ 3–0–16–0; ಕುಲದೀಪ್ ಯಾದವ್ 15–2–55–4
ಭಾರತ: ವಿಕೆಟ್ ನಷ್ಟವಿಲ್ಲದೆ 40 (8 ಓವರ್‌ಗಳಲ್ಲಿ)
ರೋಹಿತ್ ಔಟಾಗದೆ 24 (27ಎ, 4x4)
ಯಶಸ್ವಿ ಔಟಾಗದೆ 16 (21ಎ, 4x1)
ಇತರೆ: 0
ಬೌಲಿಂಗ್: ಜೋ ರೂಟ್ 4–0–17–0; ಟಾಮ್ ಹಾರ್ಟ್ಲಿ 3–0–22–0; ಶೋಯೆಬ್ ಬಷೀರ್ 1–0–1–0

ಪ್ಯಾರಾ ಬ್ಯಾಡ್ಮಿಂಟನ್: ಭಾರತಕ್ಕೆ ಮೂರು ಚಿನ್ನ



ಸುಹಾಸ್ ಯತಿರಾಜ್



ಪ್ರಮೋದ್ ಭಗತ್

ಕೃಷ್ಣ ನಾಗರ್

ಪಟ್ಟಾಯ (ಥಾಯ್ಲೆಂಡ್) (ಪಿಟಿಐ): ಭಾರತದ ಸುಹಾಸ್ ಯತಿರಾಜ್, ಪ್ರಮೋದ್ ಭಗತ್ ಮತ್ತು ಕೃಷ್ಣ ನಾಗರ್ ಅವರು ಇಲ್ಲಿ ನಡೆಯುತ್ತಿರುವ ಪ್ಯಾರಾ ಬ್ಯಾಡ್ಮಿಂಟನ್ ವಿಶ್ವ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನ ವಿವಿಧ ವಿಭಾಗಗಳಲ್ಲಿ ಭಾನುವಾರ ಚಿನ್ನದ ಪದಕ ಗೆದ್ದಿದ್ದಾರೆ.

ಪ್ಯಾರಾಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಸುಹಾಸ್ ಎಸ್‌ಎಲ್‌4 ಫೈನಲ್‌ನಲ್ಲಿ 21-18, 21-18 ರಿಂದ ಇಂಡೋನೇಷ್ಯಾದ ಫ್ರೆಡಿ ಸೆಟಿಯಾವಾನ್ ಅವರನ್ನು ಮಣಿಸಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಚೊಚ್ಚಲ ಚಿನ್ನ ಗೆದ್ದರು.

ಉತ್ತರ ಪ್ರದೇಶ ಕೇಡರ್‌ನ 2007ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಸುಹಾಸ್ ಅವರು ಪ್ರಸ್ತುತ ಯುವ ಕಲ್ಯಾಣ ಮತ್ತು ಪ್ರಾಂತೀಯ ರಕ್ಷಕ ದಳದ ಕಾರ್ಯದರ್ಶಿ ಮತ್ತು ಮಹಾನಿರ್ದೇಶಕರಾಗಿದ್ದಾರೆ.

ಪ್ಯಾರಾ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನ ಮತ್ತು ಎರಡು ಕಂಚು ಗೆದ್ದಿದ್ದ ಪ್ರಮೋದ್ ಅವರು ಎಸ್‌ಎಲ್ 3 ವಿಭಾಗದ ಫೈನಲ್‌ನಲ್ಲಿ 14-21, 21-15, 21-14 ರಿಂದ ಇಂಗ್ಲೆಂಡ್‌ನ ಡೇನಿಯಲ್ ಬೆಥೆಲ್ ಅವರನ್ನು ಸೋಲಿಸಿದರು.

35 ವರ್ಷದ ಪ್ರಮೋದ್ ಅವರಿಗೆ ವಿಶ್ವ ಚಾಂಪಿಯನ್ ಷಿಪ್‌ನಲ್ಲಿ ಇದು ಹ್ಯಾಟ್ರಿಕ್ ಚಿನ್ನವಾಗಿದೆ. ಈ ಹಿಂದೆ 2015ರ ಸ್ಟೋಕ್ ಮ್ಯಾಂಡೆವಿಲ್ಲೆ ಮತ್ತು 2019ರ ಬಾಸೆಲ್ ಕೂಟದಲ್ಲೂ ಅವರು ಚಿನ್ನದ ಸಾಧನೆ ಮಾಡಿದ್ದರು. ಅಲ್ಲದೆ, 2022ರ ಪ್ಯಾರಾಲಿಂಪಿಕ್ಸ್‌ನಲ್ಲೂ ಚಿನ್ನ ಗೆದ್ದಿದ್ದರು.

ಪ್ಯಾರಾಲಿಂಪಿಕ್ಸ್ ಚಿನ್ನದ ಪದಕ ವಿಜೇತ ಕೃಷ್ಣಾ ಅವರು ಎಸ್‌ಎಚ್‌6 ವಿಭಾಗದ ಫೈನಲ್ ಹಣಾಹಣಿಯಲ್ಲಿ 22-20, 22-20 ರಿಂದ ಚೀನಾದ ಲಿನ್ ನೈಲಿ ವಿರುದ್ಧ ಜಯ ಸಾಧಿಸಿ ಚಾಂಪಿಯನ್ ಆದರು.

ಮನೀಷಾಗೆ ಬೆಳ್ಳಿ: ಭಾರತದ ಮನೀಷಾ ರಾಮದಾಸ್ ಮಹಿಳೆಯರ ಸಿಂಗಲ್ಸ್‌ನ ಎಸ್‌ಯು5 ಫೈನಲ್‌ನಲ್ಲಿ 16-21, 16-21 ರಿಂದ ಚೀನಾದ ಯಾಂಗ್ ಕ್ಯು ಕ್ಸಿಯಾ ಅವರಿಗೆ ಮಣಿದು, ಬೆಳ್ಳಿಗೆ ತೃಪ್ತಿಪಟ್ಟುಕೊಂಡರು.

ಭಾರತದ ಚಿರಾಗ್ ಬರೆತಾ ಮತ್ತು ರಾಜಕುಮಾರ್ ಜೋಡಿಯು ಪುರುಷರ ಡಬಲ್ಸ್‌ನ ಎಸ್‌ಯು5 ವಿಭಾಗದಲ್ಲಿ ಹಾಗೂ ರಚನಾ ಶೈಲೇಶ್‌ಕುಮಾರ್ ಮತ್ತು ನಿತ್ಯಶ್ರೀ ಸುಮತಿ ಶಿವನ್ ಜೋಡಿಯು ಮಹಿಳೆಯರ ಡಬಲ್ಸ್‌ನ ಎಸ್‌ಎಚ್‌6 ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡವು. ಇಲ್ಲಿ ಭಾರತ ತಂಡವು ಮೂರು ಚಿನ್ನ, 4 ಬೆಳ್ಳಿ, 11 ಕಂಚು ಸೇರಿ ಒಟ್ಟು 18 ಪದಕ ಗೆದ್ದಿದೆ.

ಮುಂಬೈ ಇಂಡಿಯನ್ಸ್‌ಗೆ ಎರಡನೇ ಜಯ

• ನಾಗೇಶ್ ಶೆಣೈ

ವಿಕೆಟ್ ಪಡೆದ ಮುಂಬೈ ಇಂಡಿಯನ್ಸ್ ಆಟಗಾರ್ತಿ ಶಬ್ನಿಮ್ ಇಸ್ಮಾಯಿಲ್ ಅವರನ್ನು ಸಹ ಆಟಗಾರ್ತಿಯರು ಅಭಿನಂದಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ

ಬೆಂಗಳೂರು: ಅಮೇಲಿಯಾ ಕೆರ್ (17ಕ್ಕೆ4 ಮತ್ತು 31) ಅವರ ಆಲ್‌ರೌಂಡ್ ಆಟ ಮತ್ತು ಶಬ್ನಿಮ್ ಇಸ್ಮಾಯಿಲ್ (18ಕ್ಕೆ3) ಅಮೋಘ ಬೌಲಿಂಗ್ ನೆರವಿನಿಂದ ಮುಂಬೈ ಇಂಡಿಯನ್ಸ್ ತಂಡ ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಭಾನುವಾರ ಗುಜರಾತ್ ಜೈಂಟ್ಸ್ ತಂಡವನ್ನು ಐದು ವಿಕೆಟ್‌ಗಳಿಂದ ಹೆಚ್ಚಿನ ಪ್ರಯಾಸವಿಲ್ಲದೇ ಸೋಲಿಸಿತು.

ಡೀಪ್ ಮಿಡ್‌ವಿಕೆಟ್ ಆಚೆ ಸಿಕ್ಸರ್ ಎತ್ತಿ ಪಂದ್ಯವನ್ನು ಮುಗಿಸಿದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅಜೇಯ 46 ರನ್ (41ಎ, 4x5, 6x1) ಗಳಿಸಿ ಗೆಲುವಿನಲ್ಲಿ ತಮ್ಮ ಪಾಲೂ ನೀಡಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಲೀಗ್‌ನ ಮೊದಲ ಎರಡು ಪಂದ್ಯಗಳು ರೋಚಕವಾಗಿದ್ದರೆ, ಈ ಪಂದ್ಯದಲ್ಲಿ ಅಂಥ ಕುತೂಹಲ ಕಾಣಲಿಲ್ಲ. ಹನ್ನೆರಡು ಸಾವಿರದಷ್ಟಿದ್ದ ಪ್ರೇಕ್ಷಕರಿಗೆ ಬಹುಪಾಲು ನಿರಾಸೆಯಾಯಿತು. ಮೊದಲು ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಗುಜರಾತ್ ಜೈಂಟ್ಸ್ 9 ವಿಕೆಟ್‌ಗೆ 126 ರನ್‌ಗಳ ಸಾಧಾರಣ ಮೊತ್ತ ಕಲೆಹಾಕಿತು. ಮುಂಬೈ ತಂಡ ಇನ್ನೂ 11 ಎಸೆತಗಳು ಉಳಿದಿರುವಂತೆ 5 ವಿಕೆಟ್‌ಗೆ 129 ರನ್ ಹೊಡೆದು ಎರಡನೇ ಗೆಲುವನ್ನು ದಾಖಲಿಸಿತು.

ಮುಂಬೈ ಕೂಡ ಮೂರು ವಿಕೆಟ್‌ಗಳನ್ನು 49 ರನ್ನಿಗೆ ಕಳೆದುಕೊಂಡರೂ, ಹರ್ಮನ್‌ಪ್ರೀತ್ ಸೊಗಸಾದ ಆಟವಾಡಿ, ಅಮೇಲಿಯಾ ಜೊತೆ ನಾಲ್ಕನೇ ವಿಕೆಟ್‌ಗೆ 50 ಎಸೆತಗಳಲ್ಲಿ 66 ರನ್ ಸೇರಿಸಿ ತಂಡದ ಹಾದಿಯನ್ನು ಸುಗಮಗೊಳಿಸಿದರು. ಗುರಿಯೂ ದೊಡ್ಡದಿರದ ಕಾರಣ ಆತಂಕವೇನೂ ಎದುರಾಗಲಿಲ್ಲ.

ಇದಕ್ಕೆ ಮೊದಲು ಶಬ್ನಿಮ್ ಮತ್ತು ಲೆಗ್ ಸ್ಪಿನ್ನರ್ ಅಮೇಲಿಯಾ ಅವರು ಗುಜರಾತ್ ಜೈಂಟ್ಸ್ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿದರು.

ಶಬ್ನಿಮ್ ಈ ಪಂದ್ಯದ ನಾಲ್ಕನೇ ಎಸೆತದಲ್ಲಿ ವೇದಾ ಕೃಷ್ಣಮೂರ್ತಿ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರೆ, ಮೂರನೇ ಓವರ್‌ನಲ್ಲಿ ಹರ್ಲಿನ್ ದೇವ್ಲೊಲ್ (8) ಅವರನ್ನೂ ಇದೇ ರೀತಿ ಮರಳಿಸಿದರು.

ಎಡಗೈ ಬ್ಯಾಟರ್ ಫೋಬಿ ಲಿಚ್‌ಫೀಲ್ಡ್, ದಯಾಳನ್ ಹೇಮಲತಾ, ಆ್ಯಶ್ಲೆ ಗಾರ್ಡನರ್ ಕೂಡ ಹೆಚ್ಚು ಹೊತ್ತು ನಿಲ್ಲಲಿಲ್ಲ. ಶಬ್ನಿಮ್ ತಮ್ಮ ಎರಡನೇ ಸ್ಪೆಲ್‌ನಲ್ಲಿ ಬೆತ್ ಮೂನಿ (24, 22 ಎ, 2x4) ವಿಕೆಟ್ ಪಡೆದಾಗ ಜೈಂಟ್ಸ್ ತಂಡದ ಅರ್ಧದಷ್ಟು ವಿಕೆಟ್‌ಗಳು 58 ರನ್‌ಗಳಿಗೆ ಉರುಳಿದ್ದವು.

ದಕ್ಷಿಣ ಆಫ್ರಿಕಾದ ವೇಗಿ ಶಬ್ನಿಮ್ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾದರೂ ಬೌಲಿಂಗ್ ಮೊನಚು ಕಡಿಮೆಯಾಗಿರಲಿಲ್ಲ.

ಇನ್ನೊಂದೆಡೆ ಬೌಂಡರಿಗಳು ಬತ್ತಿ ಹೋದವು. 6 ಓವರ್‌ಗಳ ಪವರ್‌ಪ್ಲೇ ಬಳಿಕ 3 ವಿಕೆಟ್‌ಗೆ 43 ರನ್ ಗಳಿಸಿದ್ದ ಜೈಂಟ್ಸ್ ನಂತರದ ಬೌಂಡರಿ ಗಳಿಸಲು 44 ಎಸೆತ ತೆಗೆದುಕೊಂಡಿತು.

ಆಲ್‌ರೌಂಡರ್ ಕ್ಯಾಥ್ರಿನ್ ಬ್ರೈಸ್ (ಔಟಾಗದೇ 25, 4x1, 6x1) ಮತ್ತು ತನುಜಾ ಕನ್ವರ್ (28) ಎಂಟನೇ ವಿಕೆಟ್‌ಗೆ 36 ಎಸೆತಗಳಲ್ಲಿ 48 ರನ್ ಸೇರಿಸಿ ತಂಡದ ಮೊತ್ತಕ್ಕೆ ಗೌರವದ ಲೇಪ ನೀಡಿದರು. ಗುಜರಾತ್‌ನ ಕೊನೆಯ 4 ವಿಕೆಟ್‌ಗಳು ಅಮೇಲಿಯಾ ಪಾಲಾದವು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 9 ವಿಕೆಟ್‌ಗೆ 126 (ಬೆತ್ ಮೂನಿ 24, ಕ್ಯಾಥ್ರಿನ್ ಬ್ರೈಸ್ ಔಟಾಗದೇ 25, ತನುಜಾ ಕನ್ವರ್ 28; ಶಬ್ನಿಮ್ ಇಸ್ಮಾಯಿಲ್ 18ಕ್ಕೆ3, ಅಮೇಲಿಯಾ ಕೆರ್ 17ಕ್ಕೆ4); ಮುಂಬೈ ಇಂಡಿಯನ್ಸ್: 18.1 ಓವರುಗಳಲ್ಲಿ 5 ವಿಕೆಟ್‌ಗೆ 129 (ನತಾಲಿ ಶಿವರ್ ಬ್ರಂಟ್ 22, ಹರ್ಮನ್‌ಪ್ರೀತ್ ಕೌರ್ ಔಟಾಗದೇ 46, ಅಮೇಲಿಯಾ ಕೆರ್ 31; ತನುಜಾ ಕನ್ವರ್ 21ಕ್ಕೆ2). ಮುಂಬೈ ಇಂಡಿಯನ್ಸ್‌ಗೆ 5 ವಿಕೆಟ್ ಜಯ.

ಪಂದ್ಯದ ಆಟಗಾರ್ತಿ: ಅಮೇಲಿಯಾ ಕೆರ್.

ಹಾಕಿ: 28ಕ್ಕೆ ಟ್ರಯಲ್ಸ್

ಬೆಂಗಳೂರು : ಮಾರ್ಚ್ 13ರಿಂದ 23ರವರೆಗೆ ಮಹಾರಾಷ್ಟ್ರದ ಪುಣೆಯಲ್ಲಿ 14ನೇ ಸೀನಿಯರ್ ಮಹಿಳೆಯರ ರಾಷ್ಟ್ರೀಯ ಹಾಕಿ ಟೂರ್ನಿ ಆಯೋಜಿಸಲಾಗಿದೆ.

ಈ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡದ ಆಯ್ಕೆಗಾಗಿ ಇದೇ 28ರಂದು ಬೆಳಿಗ್ಗೆ 10ರಿಂದ ಶಾಂತಿನಗರದಲ್ಲಿರುವ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಹಾಕಿ ಅರೇನಾದಲ್ಲಿ ಟ್ರಯಲ್ಸ್ ನಡೆಯಲಿದೆ ಎಂದು ಹಾಕಿ ಕರ್ನಾಟಕದ ಪ್ರಕಟಣೆ ತಿಳಿಸಿದೆ.

ಸ್ಕ್ವಾಷ್: ಅಭಯ್‌ಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಅಭಯ್ ಸಿಂಗ್ ಅವರು ಟೊರೊಂಟೊದಲ್ಲಿ ನಡೆದ ಗುಡ್‌ಫೆಲೋ ಕ್ಲಾಸಿಕ್ ಸ್ಕ್ವಾಷ್ ಚಾಲೆಂಜರ್ ಟೂರ್ನಿಯ ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು. ಭಾನುವಾರ ನಡೆದ ಫೈನಲ್ ಹಣಾಹಣಿಯಲ್ಲಿ 11-7, 11-9, 11-9 ರಿಂದ ವೇಲ್ಸ್‌ನ ಎಲಿಯಟ್ ಮೋರಿಸ್ ದೇವ್ರೆಡ್ ಅವರನ್ನು ನೇರ ಗೇಮ್‌ಗಳಿಂದ ಸೋಲಿಸಿದರು. ಈ ಗೆಲುವಿನೊಂದಿಗೆ ಅಭಯ್ ಎಂಟನೇ ಪಿಎಸ್‌ಎ ಪ್ರಶಸ್ತಿಯನ್ನು ಗೆದ್ದುಕೊಂಡರು.